ಅಧ್ಯಾಯ - ೧

# ಪ್ರಾಸ್ತಾವಿಕ

ಕರ್ನಾಟಕ ರಾಜ್ಯದ ದಕ್ಷಿಣ ಮೈದಾನ ಪ್ರದೇಶದಲ್ಲಿರುವ ಮಂಡ್ಯ ಜಿಲ್ಲೆಯ ಬಹುಭಾಗ ಹಚ್ಚ ಹಸುರಿನಿಂದ ಕೂಡಿದ ಪ್ರದೇಶವಾಗಿದೆ. ಇಪ್ಪತ್ತನೆಯ ಶತಮಾನದ ಪ್ರಾರಂಭದವರೆಗೂ ಒಣಭೂಮಿ ಪ್ರದೇಶವಾಗಿದ್ದು, ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣವಾದ ನಂತರ ಈ ಜಿಲ್ಲೆಯು ನೀರಾವರಿ ಸೌಲಭ್ಯ ಪಡೆದು ಆರ್ಥಿಕ ಪ್ರಗತಿಯತ್ತ ಸಾಗಿದೆ. ಪ್ರಮುಖ ನೀರಾವರಿ ಬೆಳೆಗಳಾದ ಕಬ್ಬು ಮತ್ತು ಭತ್ತವನ್ನು ಈ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುವುದರಿಂದ ಜಿಲ್ಲೆಯನ್ನು ರಾಜ್ಯದ ಸಕ್ಕರೆ ಮತ್ತು ಭತ್ತದ ಕಣಜವೆಂದೂ ಕರೆಯುವುದುಂಟು. ಜಿಲ್ಲೆಯ ಶಿವಸಮುದ್ರದಲ್ಲಿ ೧೯೦೨ ರಲ್ಲಿ ಪ್ರಾರಂಭವಾದ ಜಲವಿದ್ಯುತ್ ಯೋಜನೆ ಏಷಿಯಾದಲ್ಲೇ ಎರಡನೆಯದಾದ ವಿದ್ಯುತ್ ಕೇಂದ್ರ ಎಂಬ ಹೆಮ್ಮೆಗೆ ಪಾತ್ರವಾಗಿದೆ. ಜಿಲ್ಲೆಯ ಏಳೂ ತಾಲೂಕುಗಳು ಕಾವೇರಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿವೆ. ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯವು ಲಾಭದಾಯಕವಾಗಿದ್ದು, ಎಲ್ಲಾ ತಾಲೂಕುಗಳಿಗೂ ಹಿಪ್ಪುನೇರಳೆ ವ್ಯವಸಾಯವು ವ್ಯಾಪಿಸುತ್ತಿದೆ. ಜಿಲ್ಲೆಯ ಎಲ್ಲಾ ಪಟ್ಟಣಗಳಿಗೂ, ಗ್ರಾಮ ಹಾಗೂ ಉಪಗ್ರಾಮಗಳಿಗೂ ವಿದ್ಯುತ್ ಸೌಲಭ್ಯ ಒದಗಿಸಲಾಗಿದೆ. ಜಿಲ್ಲೆಯು ಉತ್ತಮ ಸಂಚಾರ ಮಾರ್ಗ ಹಾಗೂ ಸಂಪರ್ಕಗಳನ್ನು ಹೊಂದಿದೆ. ಮೈಸೂರು-ಬೆಂಗಳೂರು ರೈಲು ಹಾಗೂ ರಸ್ತೆ ಮಾರ್ಗಗಳು ಈ ಜಿಲ್ಲೆಯಲ್ಲಿ ಹಾದು ಹೋಗುತ್ತವೆ. ಇತ್ತೀಚಿನ ಎರಡು ದಶಕಗಳಲ್ಲಿ ಈ ಜಿಲ್ಲೆಯ ಶೈಕ್ಷಣಿಕ ಪ್ರಗತಿ ಉಲ್ಲೇಖನೀಯವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೃಷಿ ಮಹಾವಿದ್ಯಾಲಯವೂ ಸೇರಿದಂತೆ ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ಇಲ್ಲಿ ಸ್ಥಾಪಿಸಲಾಗಿದೆ. ಸಾಂಸ್ಕೃತಿಕ ರಂಗದಲ್ಲಿ ಈ ಜಿಲ್ಲೆಯ ಸಾಧನೆ ಗಣನೀಯವಾಗಿದೆ.

ಜಿಲ್ಲೆಯಲ್ಲಿ ಅನೇಕ ಪ್ರೇಕ್ಷಣೀಯ ಮತ್ತು ಇತಿಹಾಸ ಪ್ರಸಿದ್ಧ ಸ್ಥಳಗಳಿವೆ. ಮೈಸೂರು ಸಂಸ್ಥಾನದ ರಾಜಧಾನಿಯಾಗಿ ೧೬೧೦ ರಿಂದ ೧೭೯೯ ರವರೆಗೆ ಮೆರೆದ ಶ್ರೀರಂಗಪಟ್ಟಣ, ಕಾವೇರಿಯ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳಿರುವ ಶಿವಸಮುದ್ರ, ಧನಗೂರು ಬಳಿಯ ಶಿಂಷಾ ಜಲಪಾತ, ಸುಂದರ ಉದ್ಯಾನದಿಂದ ಕಂಗೊಳಿಸುತ್ತಿರುವ ಕೃಷ್ಣರಾಜಸಾಗರ ಇವು ವಿಶ್ವ ಪ್ರಸಿದ್ಧವಾಗಿವೆ. ಶ್ರೀರಂಗಪಟ್ಟಣದ ಬಳಿ ಇರುವ ರಂಗನತಿಟ್ಟು

ಪ್ರಸಿದ್ಧ ಪಕ್ಷಿಧಾಮವಾಗಿದೆ. ಜಿಲ್ಲೆಯಲ್ಲಿ ಮೇಲುಕೋಟೆ, ತೊಣ್ಣೂರು, ಶ್ರೀರಂಗಪಟ್ಟಣ, ಆದಿಚುಂಚನಗಿರಿ ಮುಂತಾದ ಯಾತ್ರಾ ಸ್ಥಳಗಳಿವೆ. ಗಂಗರ ಕಾಲದ ಸುಂದರ ಬಸದಿ ಇರುವ ನಾಗಮಂಗಲ ತಾಲೂಕಿನ ಕಂಬದಹಳ್ಳಿ, ಜೈನರಿಗೆ ಪವಿತ್ರ ಸ್ಥಳವಾಗಿದೆ. ಕೃಷ್ಣರಾಜಪೇಟೆ ತಾಲೂಕಿನ ಗೋವಿಂದನಹಳ್ಳಿ, ಹೊಸಹೊಳಲು, ಕಿಕ್ಕೇರಿ, ಅಘಲಯ, ಅಗ್ರಹಾರ ಬಾಚಹಳ್ಳಿ, ಮಾದಾಪುರ ಮತ್ತು ತೆಂಗಿನಘಟ್ಟ, ನಾಗಮಂಗಲ ತಾಲೂಕಿನ ನಾಗಮಂಗಲ, ಬೆಳ್ಳೂರು ಮತ್ತು ಲಾಳನಕೆರೆ, ಮಂಡ್ಯ ತಾಲೂಕಿನ ಬಸರಾಳು, ಹೊಸಬೂದನೂರು ಮುಂತಾದ ಸ್ಥಳಗಳಲ್ಲಿ ಹೊಯ್ಸಳರ ಕಾಲದ ದೇವಾಲಯಗಳಿವೆ. ಆದಿರಂಗ, ಮಧ್ಯರಂಗ ಮತ್ತು ಅಂತ್ಯರಂಗ ಎಂಬ ದ್ವೀಪಾಂತರ್ಗತ ರಂಗನಾಥ ದೇವಸ್ಥಾನಗಳ ಪೈಕಿ ಆದಿರಂಗ ಶ್ರೀರಂಗಪಟ್ಟಣದಲ್ಲೂ, ಮಧ್ಯರಂಗ ಶಿವಸಮುದ್ರ(ಕೊಳ್ಳೇಗಾಲ ತಾಲೂಕು)ದಲ್ಲೂ ಮತ್ತು ಅಂತ್ಯರಂಗ ತಮಿಳುನಾಡು ರಾಜ್ಯದಲ್ಲೂ ಇವೆ.

### ಹೆಸರಿನ ಮೂಲ

ಕೃತಯುಗದಲ್ಲಿ ದಟ್ಟವಾದ ಅರಣ್ಯದಿಂದೊಡಗೂಡಿದ್ದ ಮಂಡ್ಯ ಜಿಲ್ಲಾ ಪ್ರದೇಶದಲ್ಲಿ ತಪಸ್ಸು ಮಾಡುತ್ತಿದ್ದ ಮಾಂಡವ್ಯ ಋಷಿಗಳು ಪ್ರಾಣಿಗಳಿಗೆ ವೇದೋಪದೇಶ ನೀಡುತ್ತಿದ್ದುದರಿಂದ ಈ ಪ್ರದೇಶಕ್ಕೆ ವೇದಾರಣ್ಯ ಎಂಬ ಹೆಸರು ಬಂದಿತೆಂದು ಪ್ರತೀತಿ ಇದೆ. ಮಾಂಡವ್ಯ ಮುನಿಗಳಿಂದಾಗಿ ಅದೇ ***ಮಂಡೆಯ*** ಆಯಿತೆಂದೂ ಇಲ್ಲಿಯ ಜನಾರ್ಧನನ ಪ್ರತಿಷ್ಠಾಪನೆ ಅವರದೆಂದೂ ಹೇಳಲಾಗುತ್ತದೆ. ಅದೇ ಯುಗದಲ್ಲಿ ಇದ್ದ ಇನ್ನೊಬ್ಬ ಋಷಿಗಳು ಇಲ್ಲಿ ಸಕಲೇಶ್ವರ ಸ್ವಾಮಿ ಗುಡಿಯನ್ನು ಸ್ಥಾಪಿಸಿ ವಿಷ್ಣುದರ್ಶನ ಪಡೆದು, ಈ ಸ್ಥಳಕ್ಕೆ ವಿಷ್ಣುಪುರ ಎಂದು ಹೆಸರಿಟ್ಟರೆಂದೂ ಪುರಾಣ ಕಥೆ ಇದೆ. ಹಾಗೆಯೇ ಪುತ್ರ ಸಂತಾನವಿಲ್ಲದೆ ಕೊರಗುತ್ತಿದ್ದ ಇಂದ್ರವರ್ಮನೆಂಬ ರಾಜನು ದ್ವಾಪರಯುಗದಲ್ಲಿ ಇಲ್ಲಿಗೆ ಬಂದು ಜನಾರ್ಧನನನ್ನು ಆರಾಧಿಸಿ ಸೋಮವರ್ಮನೆಂಬ ಪುತ್ರನನ್ನು ಪಡೆದು, ಕೋಟೆ ಕಟ್ಟಿ, ಅಗ್ರಹಾರ ನಿರ್ಮಿಸಿ, ಅದಕ್ಕೆ ***ಮಂಡೆವೇಮು*** ಎಂದು ಹೆಸರಿಸಿದ್ದುದು ಕ್ರಮೇಣ ಅದೇ *ಮಂಡ್ಯ* ಆಯಿತೆಂಬ ಐತಿಹ್ಯವೂ ಇದೆ. ತಿರುಪತಿ ಬಳಿಯ ಮಂಡವೇಮು ಗ್ರಾಮದವರು ಇಲ್ಲಿಗೆ ವಲಸೆ ಬಂದು ಊರು ಕಟ್ಟಿ ತಮ್ಮ ಹಳೇ ಊರಿನ ಹೆಸರನ್ನೇ ಇದಕ್ಕೂ ಇಟ್ಟರೆಂಬ ಅಭಿಪ್ರಾಯವೂ ಇದೆ. ಇದು ನೆರೆಯ ಹೊಸಬೂದನೂರಿನ ಅನಂತ ಪದ್ಮನಾಭ ಗುಡಿಯಲ್ಲಿರುವ ಹೊಯ್ಸಳ ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ೧೨೭೮ರ ಶಾಸನದಲ್ಲಿ ***ಅನಾದಿ ಅಗ್ರಹಾರ ಮಂಡೇಯ*** ಎಂದೇ ದಾಖಲಿಸಲ್ಪಟ್ಟಿದ್ದು, ಮಂಡ್ಯದಿಂದ ವರದಿಯಾಗಿರುವ ವಿಜಯನಗರದ ಅರಸ ಕೃಷ್ಣದೇವರಾಯನ ಕಾಲದ ೧೫೧೮ರ ತಾಮ್ರ ಶಾಸನದಲ್ಲಿ, ***ಅಗ್ರಹಾರ ಮಂಡೇಯ*** ಹಾಗೂ ***ಚಿಕ್ಕ ಮಂಟೆಯ*** ಗಳ ಪ್ರಸ್ತಾಪವಿದೆ. ಈ ಶಾಸನಗಳಿಂದ ಮಂಡ್ಯ ಸ್ಥಳನಾಮದ ಮೂಲ ರೂಪವು *ಮಂಡೆಯ, ಮಂಠೆಯ* ಆಗಿದ್ದು, ಹಿಂದೆ ಇದೊಂದು ಪ್ರಮುಖ ವಿದ್ಯಾಕೇಂದ್ರವೂ ಆಗಿದ್ದ ಅಂಶ ವೇದ್ಯವಾಗುತ್ತದೆ.

### ಮೇರೆಗಳು

ಜಿಲ್ಲೆಯ ವಾಯವ್ಯದಲ್ಲಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ, ಉತ್ತರ ಮತ್ತು ಈಶಾನ್ಯದಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್ ಮತ್ತು ತುರುವೇಕೆರೆ, ಪೂರ್ವದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ಮತ್ತು ಚನ್ನಪಟ್ಟಣ, ದಕ್ಷಿಣ ಮತ್ತು ನೈಋತ್ಯದಲ್ಲಿ ಮೈಸೂರು ಜಿಲ್ಲೆಯ ಮೈಸೂರು, ತಿರುಮಕೂಡಲು ನರಸೀಪುರ ಮತ್ತು ಕೃಷ್ಣರಾಜನಗರ ಮತ್ತು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕುಗಳಿವೆ. ಜಿಲ್ಲೆಯು ೭೬°–೧೯′ ರಿಂದ ೭೭°–೦೭′ ಪೂರ್ವ ರೇಖಾಂಶ ಹಾಗೂ ೧೨°–೧೧′ ರಿಂದ ೧೩°–೦೦′ ಉತ್ತರ ಅಕ್ಷಾಂಶಗಳ ನಡುವೆ ವಿಸ್ತರಿಸಿದೆ. ಜಿಲ್ಲೆಯ ಗಡಿ ಪ್ರದೇಶವು ಬೇರಾವುದೇ ರಾಜ್ಯಗಳ ಗಡಿಗೆ ತಾಗಿಕೊಂಡಿರದೆ, ಕರ್ನಾಟಕ ರಾಜ್ಯದ ಐದು ಜಿಲ್ಲೆಗಳಿಂದ ಸುತ್ತುವರೆಯಲ್ಪಟ್ಟಿರುವುದೂ ಒಂದು ವಿಶೇಷವಾಗಿದೆ.

## ವಿಸ್ತೀರ್ಣ ಮತ್ತು ಜನಸಂಖ್ಯೆ

ಮಂಡ್ಯ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೪,೯೬೧ ಚದುರ ಕಿಲೋಮೀಟರ್‌ಗಳಾಗಿದ್ದು ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇಕಡ ೨.೫೯ ರಷ್ಟು ಭಾಗವನ್ನು ಹೊಂದಿದೆ. ವಿಸ್ತೀರ್ಣದಲ್ಲಿ ರಾಜ್ಯದ ೨೭ ಜಿಲ್ಲೆಗಳಲ್ಲಿ ಇಪ್ಪತ್ತನೆಯ ಸ್ಥಾನವನ್ನು ಪಡೆದಿದೆ. ೧೯೯೧ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆ ೧೬,೪೪,೩೭೪. ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೩.೬೬ ರಷ್ಟಿದ್ದು, ರಾಜ್ಯದ ಒಟ್ಟು ೨೭ ಜಿಲ್ಲೆಗಳ ಪೈಕಿ ಜನಸಂಖ್ಯೆಯಲ್ಲಿ ಒಂಭತ್ತನೆಯ ಸ್ಥಾನವನ್ನು ಪಡೆದಿದೆ. ೨೦೦೧ ರ ಜನಗಣತಿಯ ತಾತ್ಕಾಲಿಕ ಅಂಕಿಅಂಶಗಳಂತೆ ಜಿಲ್ಲೆಯ ಒಟ್ಟು ಜನಸಂಖ್ಯೆಯು ೧೭,೬೧,೭೧೮ ಇದ್ದು ೮,೮೭,೩೦೭ ಪುರುಷರು ಮತ್ತು ೮,೭೪,೪೧೧ ಮಹಿಳೆಯರನ್ನೂ ಒಳಗೊಂಡಿದೆ. ಒಟ್ಟು ಜನಸಂಖ್ಯೆಯಲ್ಲಿ ೧೪,೭೯,೫೩೪ ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಉಳಿದ ೨,೮೨,೧೮೪ ಜನರು ನಗರ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ತಾಲೂಕುಗಳ ಪೈಕಿ ವಿಸ್ತೀರ್ಣದಲ್ಲಿ ನಾಗಮಂಗಲ ತಾಲೂಕು ಜಿಲ್ಲೆಯ ಶೇಕಡ ೨೧ ರಷ್ಟು ಭಾಗವನ್ನು ಪಡೆದು ಪ್ರಥಮ ಸ್ಥಾನದಲ್ಲಿದ್ದರೆ, ಜಿಲ್ಲೆಯ ವಿಸ್ತೀರ್ಣದ ಶೇಕಡ ಮೂರರಷ್ಟು ಪ್ರದೇಶವನ್ನು ಹೊಂದಿರುವ ಶ್ರೀರಂಗಪಟ್ಟಣ ತಾಲೂಕು ಕೊನೆಯ ಸ್ಥಾನದಲ್ಲಿದೆ. ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇಕಡ ೨೩ ರಷ್ಟನ್ನು ಹೊಂದಿರುವ ಮಂಡ್ಯ ತಾಲೂಕು, ತಾಲೂಕುಗಳ ಪೈಕಿ ಮೊದಲ ಸ್ಥಾನ ಪಡೆದಿದೆ. ಅತಿ ಚಿಕ್ಕದಾದ ಶ್ರೀರಂಗಪಟ್ಟಣ ತಾಲೂಕು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇಕಡ ಒಂಭತ್ತರಷ್ಟನ್ನು ಹೊಂದಿದೆ.

ಜಿಲ್ಲೆಯಲ್ಲಿ ೨೦೦೨ ರಲ್ಲಿದ್ದಂತೆ ಏಳು ತಾಲೂಕುಗಳು, ೩೧ ಹೋಬಳಿಗಳು, ೧,೩೬೫ ಜನವಸತಿ ಇರುವ ಹಾಗೂ ೧೧೩ ಜನವಸತಿ ಇಲ್ಲದ ಗ್ರಾಮಗಳು ಮತ್ತು ಏಳು ಪಟ್ಟಣಗಳಿವೆ. ಜಿಲ್ಲೆಯಲ್ಲಿ ಎರಡು ಕಂದಾಯ ಉಪವಿಭಾಗಗಳಿದ್ದು, ಮಂಡ್ಯ ಉಪವಿಭಾಗಕ್ಕೆ ಮಂಡ್ಯ, ಮದ್ದೂರು ಹಾಗೂ ಮಳವಳ್ಳಿ ತಾಲೂಕುಗಳು ಮತ್ತು ಪಾಂಡವಪುರ ಉಪವಿಭಾಗಕ್ಕೆ ಕೃಷ್ಣರಾಜಪೇಟೆ, ನಾಗಮಂಗಲ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲೂಕುಗಳು ಸೇರಿವೆ. ಮಂಡ್ಯ ಜಿಲ್ಲೆಯ ಭೌಗೋಳಿಕ ಹಾಗೂ ಸಾಮಾನ್ಯ ವಿವರಗಳನ್ನು ಕೋಷ್ಟಕ ೧.೧ ಮತ್ತು ಕೋಷ್ಟಕ ೧.೨ ರಲ್ಲಿ, ೧೯೯೧ ರ ಜನಗಣತಿಯ ವಿವರಗಳನ್ನು ಕೋಷ್ಟಕ ೧.೩ ರಲ್ಲಿ, ೨೦೦೧ ರ ಜನಗಣತಿಯ ತಾತ್ಕಾಲಿಕ ಅಂಕಿ ಅಂಶಗಳ ವಿವರಗಳನ್ನು ಕೋಷ್ಟಕ ೧.೪ ರಲ್ಲಿ ಮತ್ತು ಹೋಬಳಿವಾರು ಕಂದಾಯ ಗ್ರಾಮಗಳ ವಿವರಗಳನ್ನು ಕೋಷ್ಟಕ ೧.೫ ರಲ್ಲೂ ನೀಡಿದೆ.

**ಕೋಷ್ಟಕ ೧.೧ ಮಂಡ್ಯ ಜಿಲ್ಲೆಯ ಭೌಗೋಳಿಕ ವಿವರಗಳು**

| ಕ್ರಮ ಸಂಖ್ಯೆ | ತಾಲೂಕು | ವಿಸ್ತೀರ್ಣ ಚ.ಕಿ.ಮೀ | ಪೂರ್ವ ರೇಖಾಂಶ ಇಂದ | ಪೂರ್ವ ರೇಖಾಂಶ ವರೆಗೆ | ಉತ್ತರ ಅಕ್ಷಾಂಶ ಇಂದ | ಉತ್ತರ ಅಕ್ಷಾಂಶ ವರೆಗೆ |
|---|---|---|---|---|---|---|
| ೧ | ಕೃಷ್ಣರಾಜಪೇಟೆ | ೯೦೫ | ೭೬°೧೯' | ೭೬°೩೭' | ೧೨°೨೮' | ೧೨°೫೩' |
| ೨ | ಮದ್ದೂರು | ೬೧೮ | ೭೬°೪೨' | ೭೭°೦೬' | ೧೨°೨೪' | ೧೨°೪೭' |
| ೩ | ಮಳವಳ್ಳಿ | ೮೧೦ | ೭೬°೫೩' | ೭೭°೦೭' | ೧೨°೧೧' | ೧೨°೨೯' |
| ೪ | ಮಂಡ್ಯ | ೭೧೬ | ೭೬°೪೨' | ೭೬°೫೯' | ೧೨°೨೨' | ೧೨°೪೪' |
| ೫ | ನಾಗಮಂಗಲ | ೧,೦೪೫ | ೭೬°೩೪' | ೭೬°೫೪' | ೧೨°೩೮' | ೧೩°೦೦' |
| ೬ | ಪಾಂಡವಪುರ | ೫೪೦ | ೭೬°೨೮' | ೭೬°೪೦' | ೧೨°೨೧' | ೧೨°೪೧' |
| ೭ | ಶ್ರೀರಂಗಪಟ್ಟಣ | ೩೫೭ | ೭೬°೩೪' | ೭೬°೫೩' | ೧೨°೧೫' | ೧೨°೨೯' |
| | **ಜಿಲ್ಲೆ** | **೪,೯೬೧** | **೭೬°೧೯'** | **೭೭°೦೭'** | **೧೨°೧೧'** | **೧೩°೦೦'** |

ಆಧಾರ : ಮಂಡ್ಯ ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೦–೦೧

## ಕೋಷ್ಟಕ ೧.೨ ಮಂಡ್ಯ ಜಿಲ್ಲೆಯ ಸಾಮಾನ್ಯ ವಿವರಗಳು

| ಕ್ರಮ ಸಂಖ್ಯೆ | ತಾಲೂಕು | ಗ್ರಾಮಗಳು (೧೯೯೧ರ ಜನಗಣತಿ ಪ್ರಕಾರ) | | ಗ್ರಾಮ ಪಂಚಾಯತಿಗಳು | ಪಟ್ಟಣ/ನಗರ ಸಮುದಾಯಗಳು/ಪುರಸಭೆ/ನಗರಸಭೆ/ ಅಧಿಸೂಚಿತ ಪ್ರದೇಶಗಳು | |
|---|---|---|---|---|---|---|
| | | ಜನವಸತಿ ಸಹಿತ | ಜನವಸತಿ ರಹಿತ (ಬೇಚರಾಕ್) | ೨೦೦೦–೦೧ | ೧೯೯೧ರ ಜನಗಣತಿಯಂತೆ | ೨೦೦೦–೦೧ |
| ೧ | ಕೃಷ್ಣರಾಜಪೇಟೆ | ೨೯೬ | ೨೦ | ೩೪ | ೧ | ೧ |
| ೨ | ಮದ್ದೂರು | ೧೫೩ | ೭ | ೪೨ | ೧ | ೧ |
| ೩ | ಮಳವಳ್ಳಿ | ೧೭೨ | ೧೪ | ೩೯ | ೨ | ೧ |
| ೪ | ಮಂಡ್ಯ | ೧೭೪ | ೯ | ೪೫ | ೧ | ೧ |
| ೫ | ನಾಗಮಂಗಲ | ೩೪೩ | ೨೩ | ೨೭ | ೨ | ೧ |
| ೬ | ಪಾಂಡವಪುರ | ೧೪೦ | ೩೧ | ೨೪ | ೨ | ೧ |
| ೭ | ಶ್ರೀರಂಗಪಟ್ಟಣ | ೮೭ | ೯ | ೨೧ | ೨ | ೧ |
| | **ಒಟ್ಟು** | **೧,೩೬೫** | **೧೧೩** | **೨೩೨** | **೧೧** | **೭** |

ಆಧಾರ : ೧)ಮಂಡ್ಯ ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೦–೦೧, ೨)ಮಂಡ್ಯ ಜಿಲ್ಲಾ ಪಂಚಾಯತ್, ಮಂಡ್ಯ ೨೦೦೦–೦೧

## ಕೋಷ್ಟಕ ೧.೩ ವಿಸ್ತೀರ್ಣ ಮತ್ತು ಜನಸಂಖ್ಯೆ (೧೯೯೧ ರ ಜನಗಣತಿ ಪ್ರಕಾರ)

| ಕ್ರಮ ಸಂಖ್ಯೆ | ತಾಲೂಕು | | ವಿಸ್ತೀರ್ಣ ಚ.ಕಿ.ಮೀ. | ಜನಸಂಖ್ಯೆ | | |
|---|---|---|---|---|---|---|
| | | | | ಒಟ್ಟು | ಪುರುಷರು | ಮಹಿಳೆಯರು |
| ೧ | ೨ | ೩ | ೪ | ೫ | ೬ | ೭ |
| ೧ | ಕೃಷ್ಣರಾಜಪೇಟೆ | ಒಟ್ಟು | ೯೦೪.೪೨ | ೨೨೧,೧೦೩ | ೧೧೦,೨೯೧ | ೧೧೦,೮೧೨ |
| | | ಗ್ರಾ | ೯೦೦.೧೬ | ೨೦೩,೧೦೪ | ೧೦೦,೮೭೦ | ೧೦೨,೨೩೪ |
| | | ನ | ೪.೨೬ | ೧೭,೯೯೯ | ೯,೪೨೧ | ೮,೫೭೮ |
| | ಕೃಷ್ಣರಾಜಪೇಟೆ ಮಂಡಲ ಪಂಚಾಯತ್ | ನ | ೪.೨೬ | ೧೭,೯೯೯ | ೯,೪೨೧ | ೮,೫೭೮ |
| ೨ | ಮದ್ದೂರು ತಾಲೂಕು | ಒಟ್ಟು | ೬೧೮.೪೩ | ೨೮೨,೭೨೬ | ೧೪೪,೫೭೨ | ೧೩೮,೧೫೪ |
| | | ಗ್ರಾ | ೬೧೨.೭೩ | ೨೬೦,೬೧೧ | ೧೩೩,೨೪೩ | ೧೨೭,೩೬೮ |
| | | ನ | ೫.೭೦ | ೨೨,೧೧೫ | ೧೧,೩೨೯ | ೧೦,೭೮೬ |
| | ಮದ್ದೂರು ಪುರಸಭೆ | ನ | ೫.೭೦ | ೨೨,೧೧೫ | ೧೧,೩೨೯ | ೧೦,೭೮೬ |
| ೩ | ಮಳವಳ್ಳಿ ತಾಲೂಕು | ಒಟ್ಟು | ೮೧೦.೧೧ | ೨೬೪,೦೭೫ | ೧೩೬,೫೧೧ | ೧೨೭,೫೬೪ |
| | | ಗ್ರಾ | ೮೦೭.೫೪ | ೨೨೬,೯೭೧ | ೧೧೭,೫೧೯ | ೧೦೯,೪೫೨ |
| | | ನ | ೨.೫೭ | ೩೭,೧೦೪ | ೧೮,೯೯೨ | ೧೮,೧೧೨ |
| | ಬೆಳಕವಾಡಿ ಮಂಡಲ ಪಂಚಾಯತ್ | ನ | ೦.೫೭ | ೭,೨೮೨ | ೩,೬೫೬ | ೩,೬೨೬ |
| | ಮಳವಳ್ಳಿ ಪುರಸಭೆ | ನ | ೨.೦೦ | ೨೯,೮೨೨ | ೧೫,೩೩೬ | ೧೪,೪೮೬ |
| ೪ | ಮಂಡ್ಯ ತಾಲೂಕು | ಒಟ್ಟು | ೭೧೫.೯೦ | ೩೮೩,೦೩೦ | ೧೯೭,೭೫೯ | ೧೮೫,೨೭೧ |
| | | ಗ್ರಾ | ೬೯೯.೦೬ | ೨೬೨,೭೬೫ | ೧೩೫,೨೧೫ | ೧೨೭,೫೫೦ |
| | | ನ | ೧೬.೮೪ | ೧೨೦,೨೬೫ | ೬೨,೫೪೪ | ೫೭,೭೨೧ |

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| | ಮಂಡ್ಯ ನಗರಸಭೆ | ನ | ೧೬.೮೪ | ೧೨೦,೨೬೫ | ೬೨,೫೪೪ | ೫೭,೭೨೧ |
| ೫ | ನಾಗಮಂಗಲ ತಾಲೂಕು | ಒಟ್ಟು | ೧೦೪೪.೭೦ | ೧೭೮,೬೬೩ | ೮೮,೧೩೯ | ೯೦,೫೨೪ |
| | | ಗ್ರಾ | ೧೦೩೯.೪೯ | ೧೫೮,೩೮೦ | ೭೭,೫೬೯ | ೮೦,೮೧೧ |
| | | ನ | ೫.೨೧ | ೨೦,೨೮೩ | ೧೦,೫೭೦ | ೯,೭೧೩ |
| | ಬೆಳ್ಳೂರು ಮಂಡಲ ಪಂಚಾಯತ್ | ನ | ೨.೬೯ | ೬,೧೮೭ | ೩,೨೩೯ | ೨,೯೪೮ |
| | ನಾಗಮಂಗಲ ಮಂಡಲ ಪಂಚಾಯತ್ | ನ | ೨.೫೨ | ೧೪,೦೯೬ | ೭,೩೩೧ | ೬,೭೬೫ |
| ೬ | ಪಾಂಡವಪುರ ತಾಲೂಕು | ಒಟ್ಟು | ೫೩೯.೪೩ | ೧೬೦,೧೫೫ | ೮೦,೯೯೩ | ೭೯,೧೬೨ |
| | | ಗ್ರಾ | ೫೩೦.೮೧ | ೧೪೦,೯೦೩ | ೭೧,೧೫೨ | ೬೯,೭೫೧ |
| | | ನ | ೮.೬೨ | ೧೯,೨೫೨ | ೯,೮೪೧ | ೯,೪೧೧ |
| | ಮೇಲುಕೋಟೆ ಮಂಡಲ ಪಂಚಾಯತ್ | ನ | ೪.೨೮ | ೩,೨೫೪ | ೧,೬೫೫ | ೧,೫೯೯ |
| | ಪಾಂಡವಪುರ ಪುರಸಭೆ | ನ | ೪.೩೪ | ೧೫,೯೯೮ | ೮,೧೮೬ | ೭,೮೧೨ |
| ೭ | ಶ್ರೀರಂಗಪಟ್ಟಣ ತಾಲೂಕು | ಒಟ್ಟು | ೩೫೩.೮೧ | ೧೪೬,೭೪೧ | ೭೫,೨೭೦ | ೭೧,೪೭೧ |
| | | ಗ್ರಾ | ೩೪೨.೧೯ | ೧೨೪,೮೩೬ | ೬೪,೧೫೧ | ೬೦,೬೮೫ |
| | | ನ | ೧೧.೬೨ | ೨೧,೯೦೫ | ೧೧,೧೧೯ | ೧೦,೭೮೬ |
| | ಶ್ರೀರಂಗಪಟ್ಟಣ ಪುರಸಭೆ | ನ | ೧೧.೬೨ | ೨೧.೯೦೫ | ೧೧,೧೧೯ | ೧೦,೭೮೬ |
| | ಮಂಡ್ಯ ಜಿಲ್ಲೆ | ಒಟ್ಟು | ೪೯೬೧.೦೦ | ೧೬೪೪,೩೭೪ | ೮೩೭,೫೯೭ | ೮೦೬,೭೭೭ |
| | | ಗ್ರಾ | ೪೯೦೧.೮೦ | ೧೩೭೭,೫೭೦ | ೬೯೯,೭೧೯ | ೬೭೭,೮೫೧ |
| | | ನ | ೫೪.೮೪ | ೨೬೬,೮೦೪ | ೧೩೭,೮೭೮ | ೧೨೮,೯೨೬ |
| | ಕೃಷ್ಣರಾಜಸಾಗರ ಅಧಿಸೂಚಿತ ಪ್ರದೇಶ | ನ | ೪.೩೬ | ೭,೮೮೧ | ೪,೦೬೨ | ೩,೮೧೯ |

ಕೃಷ್ಣರಾಜಸಾಗರ ಅಧಿಸೂಚಿತ ಪ್ರದೇಶವು ಜಿಲ್ಲೆಯ ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲೂಕಿಗೆ ಸೇರಿದ ಮೂರು ಗ್ರಾಮಗಳ ಪ್ರದೇಶವನ್ನೊಳಗೊಂಡಿರುವುದರಿಂದ ಪ್ರತ್ಯೇಕವಾಗಿ ನಮೂದಿಸಲಾಗಿದೆ. ಗ್ರಾ–ಗ್ರಾಮೀಣ, ನ–ನಗರ,

ಆಧಾರ : ಭಾರತೀಯ ಜನಗಣತಿ 1991, ಭಾಗ 12–ಬಿ, ಮಂಡ್ಯ ಜಿಲ್ಲಾ ಜನಗಣತಿ, ಸಿರೀಸ್ 11, ಕರ್ನಾಟಕ.

## ಕೋಷ್ಟಕ ೧.೪ ೨೦೦೧ರ ಜನಗಣತಿಯ ತಾತ್ಕಾಲಿಕ ಜನಸಂಖ್ಯಾ ವಿವರಗಳು

| ಕ್ರಮ ಸಂಖ್ಯೆ | ತಾಲೂಕು | | ವಿಸ್ತೀರ್ಣ ಚ.ಕಿ.ಮೀ. | ಜನಸಂಖ್ಯೆ | | |
|---|---|---|---|---|---|---|
| | | | | ಒಟ್ಟು | ಪುರುಷರು | ಮಹಿಳೆಯರು |
| ೧ | ೨ | ೩ | ೪ | ೫ | ೬ | ೭ |
| ೧ | ಕೃಷ್ಣರಾಜಪೇಟೆ ತಾಲೂಕು | ಒಟ್ಟು | ೯೦೪.೪೨ | ೨೪೭,೭೫೭ | ೧೨೩,೨೭೧ | ೧೨೪,೪೮೬ |
| | | ಗ್ರಾ | ೯೦೦.೧೬ | ೨೨೫,೨೮೪ | ೧೧೧,೭೦೫ | ೧೧೩,೫೭೯ |
| | | ನ | ೪.೨೬ | ೨೨,೪೭೩ | ೧೧,೫೬೬ | ೧೦,೯೦೭ |
| | ಕೃಷ್ಣರಾಜಪೇಟೆ ಪಟ್ಟಣ ಪಂಚಾಯತಿ | ನ | ೪.೨೬ | ೨೨,೪೭೩ | ೧೧,೫೬೬ | ೧೦,೯೦೭ |

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| ೨ | ಮದ್ದೂರು ತಾಲೂಕು | ಒಟ್ಟು | ೬೧೮.೪೩ | ೨೮೯,೭೦೪ | ೧೪೬,೧೧೦ | ೧೪೩,೫೯೪ |
| | | ಗ್ರಾ | ೬೧೨.೭೩ | ೨೬೩,೨೪೮ | ೧೩೨,೭೨೩ | ೧೩೦,೫೨೫ |
| | | ನ | ೫.೭೦ | ೨೬,೪೫೬ | ೧೩,೩೮೭ | ೧೩,೦೬೯ |
| | ಮದ್ದೂರು ಪುರಸಭೆ | ನ | ೫.೭೦ | ೨೬,೪೫೬ | ೧೩,೩೮೭ | ೧೩,೦೬೯ |
| ೩ | ಮಳವಳ್ಳಿ ತಾಲೂಕು | ಒಟ್ಟು | ೮೧೦.೧೧ | ೨೮೧,೩೪೫ | ೧೪೩,೧೨೪ | ೧೩೮,೨೨೧ |
| | | ಗ್ರಾ | ೮೦೭.೫೪ | ೨೪೫,೫೪೫ | ೧೨೪,೮೩೭ | ೧,೨೦,೭೦೮ |
| | | ನ | ೨.೫೭ | ೩೫,೮೦೦ | ೧೮,೨೮೭ | ೧೭,೫೧೩ |
| | ಮಳವಳ್ಳಿ ಪುರಸಭೆ | ನ | ೨.೫೭ | ೩೫,೮೦೦ | ೧೮,೨೮೭ | ೧೭,೫೧೩ |
| ೪ | ಮಂಡ್ಯ ತಾಲೂಕು | ಒಟ್ಟು | ೭೧೫.೯೦ | ೪೦೫,೮೯೮ | ೨೦೬,೧೯೯ | ೧೯೯,೬೯೯ |
| | | ಗ್ರಾ | ೬೯೯.೦೬ | ೨೭೪,೬೮೭ | ೧೩೯,೫೬೯ | ೧೩೫,೧೧೮ |
| | | ನ | ೧೬.೮೪ | ೧೩೧,೨೧೧ | ೬೬,೬೩೦ | ೬೪,೫೮೧ |
| | ಮಂಡ್ಯ ನಗರಸಭೆ | ನ | ೧೬.೮೪ | ೧೩೧,೨೧೧ | ೬೬,೬೩೦ | ೬೪,೫೮೧ |
| ೫ | ನಾಗಮಂಗಲ ತಾಲೂಕು | ಒಟ್ಟು | ೧೦೪೪.೭೦ | ೧೯೦,೮೧೪ | ೯೪,೨೮೨ | ೯೬,೫೩೨ |
| | | ಗ್ರಾ | ೧೦೩೯.೪೯ | ೧೭೪,೭೬೪ | ೮೬,೦೭೬ | ೮೮,೬೮೮ |
| | | ನ | ೫.೨೧ | ೧೬,೦೫೦ | ೮,೨೦೬ | ೭,೮೪೪ |
| | ನಾಗಮಂಗಲ ಪಟ್ಟಣ ಪಂಚಾಯತಿ | ನ | ೫.೨೧ | ೧೬,೦೫೦ | ೮,೨೦೬ | ೭,೮೪೪ |
| ೬ | ಪಾಂಡವಪುರ ತಾಲೂಕು | ಒಟ್ಟು | ೫೩೯.೪೩ | ೧೭೫,೦೦೮ | ೮೭,೫೨೦ | ೮೭,೪೮೮ |
| | | ಗ್ರಾ | ೫೩೦.೮೧ | ೧೫೬,೭೭೨ | ೭೮,೩೦೯ | ೭೮,೪೬೩ |
| | | ನ | ೮.೬೨ | ೧೮,೨೩೬ | ೯,೨೧೧ | ೯,೦೨೫ |
| | ಪಾಂಡವಪುರ ಪಟ್ಟಣ ಪಂಚಾಯತಿ | ನ | ೮.೬೨ | ೧೮,೨೩೬ | ೯,೨೧೧ | ೯,೦೨೫ |
| ೭ | ಶ್ರೀರಂಗಪಟ್ಟಣ ತಾಲೂಕು | ಒಟ್ಟು | ೩೫೩.೮೧ | ೧೬೨,೬೮೨ | ೮೨,೪೭೨ | ೮೦,೨೧೦ |
| | | ಗ್ರಾ | ೩೪೨.೧೯ | ೧೩೯,೨೩೪ | ೭೦,೫೨೮ | ೬೮,೭೦೬ |
| | | ನ | ೧೧.೬೨ | ೨೩,೪೪೮ | ೧೧,೯೪೪ | ೧೧,೫೦೪ |
| | ಶ್ರೀರಂಗಪಟ್ಟಣ ಪುರಸಭೆ | ನ | ೧೧.೬೨ | ೨೩,೪೪೮ | ೧೧,೯೪೪ | ೧೧,೫೦೪ |
| | **ಮಂಡ್ಯ ಜಿಲ್ಲೆ** | **ಒಟ್ಟು** | **೪೯೬೧.೦೦** | **೧೭,೬೧,೭೧೮** | **೮೮೭,೩೦೭** | **೮೭೪,೪೧೧** |
| | | **ಗ್ರಾ** | **೪೮೯೭.೪೪** | **೧೪,೭೯,೫೩೪** | **೭೪೩,೭೪೭** | **೭೩೫,೭೮೭** |
| | | **ನ** | **೫೯.೨೦** | **೨೮೨,೧೮೪** | **೧೪೩,೫೬೦** | **೧೩೮,೬೨೪** |
| | **ಕೃಷ್ಣರಾಜಸಾಗರ ಅಧಿಸೂಚಿತ ಪ್ರದೇಶ** | **ನ** | **೪.೩೬** | **೮,೫೧೦** | **೪,೩೨೯** | **೪,೧೮೧** |

**ಸೂಚನೆ :**

೧) ತಾಲೂಕುಗಳ ಒಟ್ಟು ಭೌಗೋಳಿಕ ವಿಸ್ತೀರ್ಣವು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದೊಡನೆ ತಾಳೆಯಾಗುವುದಿಲ್ಲ. ಏಕೆಂದರೆ ತಾಲೂಕಿನ ಒಟ್ಟು ಪ್ರದೇಶದ ಅಂಕಿ ಅಂಶಗಳು ಭೂಬಳಕೆ ಪ್ರದೇಶವನ್ನು ಮಾತ್ರ ಪ್ರತಿನಿಧಿಸುತ್ತವೆ. ಈ ಅಂಶವನ್ನು ನಿರ್ದೇಶಕರು, ಭೂಮಾಪನ, ಕಂದಾಯ ವ್ಯವಸ್ಥೆ ಹಾಗೂ ಭೂ ದಾಖಲೆ ಇಲಾಖೆಯವರು ಒದಗಿಸಿರುವ ಮಾಹಿತಿಯಿಂದ ದೃಢೀಕರಿಸಿಕೊಳ್ಳಲಾಗಿದೆ.

೨) ಸರ್ಕಾರವು ಮಾರ್ಚ್ ೨೦೦೦ದಲ್ಲಿ ಕೃಷ್ಣರಾಜಸಾಗರ ಅಧಿಸೂಚಿತ ಪ್ರದೇಶವನ್ನು ಗ್ರಾಮ ಪಂಚಾಯತಿಯನ್ನಾಗಿ ಮಾರ್ಪಡಿಸಿದೆ. ಆದರೂ ೨೦೦೧ ರ ಜನಗಣತಿಯ ಮೇರೆಗೆ ಕೃಷ್ಣರಾಜಸಾಗರವನ್ನು ಅಧಿಸೂಚಿತ ಪ್ರದೇಶವೆಂದೇ ಪರಿಗಣಿಸಿದೆ. ಪ್ರಸ್ತುತ ಜಿಲ್ಲೆಯಲ್ಲಿರುವ ಒಟ್ಟು ಏಳು ನಗರ ಪ್ರದೇಶಗಳಲ್ಲಿ ಒಂದು ನಗರ ಸಭೆ(ಮಂಡ್ಯ), ಮೂರು ಪುರಸಭೆ (ಮದ್ದೂರು, ಮಳವಳ್ಳಿ ಮತ್ತು ಶ್ರೀರಂಗಪಟ್ಟಣ) ಮತ್ತು ಮೂರು ಪಟ್ಟಣ ಪಂಚಾಯತಿಗಳಿವೆ (ಕೃಷ್ಣರಾಜಪೇಟೆ, ಪಾಂಡವಪುರ ಮತ್ತು ನಾಗಮಂಗಲ).

**ಕೋಷ್ಟಕ ೧.೫ ಜಿಲ್ಲೆಯ ಹೋಬಳಿವಾರು ಕಂದಾಯ ಗ್ರಾಮಗಳ ವಿವರ (ಬೇಚರಾಕ್ ಗ್ರಾಮಗಳೂ ಸೇರಿದಂತೆ)–೨೦೦೧**

| ತಾಲೂಕು | ಹೋಬಳಿ | ಗ್ರಾಮಗಳು |
|---|---|---|
| ೧ | ೨ | ೩ |
| | **ಮಂಡ್ಯ ಉಪವಿಭಾಗ** | |
| ಮಂಡ್ಯ | ೧. ಮಂಡ್ಯ | ೧೭ |
| | ೨. ಕೊತ್ತತ್ತಿ | ೩೫ |
| | ೩. ದುದ್ದ | ೫೪ |
| | ೪. ಬಸರಾಳು | ೫೦ |
| | ೫. ಕೆರಗೋಡು | ೨೭ |
| | **ಒಟ್ಟು** | **೧೮೩** |
| ೨. ಮದ್ದೂರು | ೧. ಮದ್ದೂರು | ೪೩ |
| | ೨. ಚಿಕ್ಕರಸಿನಕೆರೆ | ೪೨ |
| | ೩. ಕೊಪ್ಪ | ೪೪ |
| | ೪. ಆತಕೂರು | ೩೩ |
| | **ಒಟ್ಟು** | **೧೬೨** |
| ೩. ಮಳವಳ್ಳಿ | ೧. ಮಳವಳ್ಳಿ | ೫೧ |
| | ೨. ಹಲಗೂರು | ೪೫ |
| | ೩. ಬೊಪ್ಪಗೌಡನಪುರ | ೪೫ |
| | ೪. ಕಿರುಗಾವಲು | ೪೫ |
| | **ಒಟ್ಟು** | **೧೮೬** |
| | **ಪಾಂಡವಪುರ ಉಪವಿಭಾಗ** | |
| ೬. ಪಾಂಡವಪುರ | ೧. ಪಾಂಡವಪುರ | ೫೭ |
| | ೨. ಚಿನಕುರಳಿ | ೬೫ |
| | ೩. ಮೇಲುಕೋಟೆ | ೪೯ |
| | **ಒಟ್ಟು** | **೧೭೧** |
| ೧. ಕೃಷ್ಣರಾಜಪೇಟೆ | ೧.ಕೃಷ್ಣರಾಜಪೇಟೆ | ೫೧ |
| | ೨. ಸಂತೇಬಾಚಹಳ್ಳಿ | ೫೯ |
| | ೩. ಶೀಳನೆರೆ | ೫೨ |
| | ೪. ಬೂಕಿನಕೆರೆ | ೪೮ |
| | ೫. ಅಕ್ಕಿಹೆಬ್ಬಾಳ | ೪೯ |
| | ೬. ಕಿಕ್ಕೇರಿ | ೫೭ |
| | **ಒಟ್ಟು** | **೩೧೬** |
| ೫. ನಾಗಮಂಗಲ | ೧. ನಾಗಮಂಗಲ | ೬೪ |
| | ೨. ದೇವಲಾಪುರ | ೬೩ |
| | ೩. ಹೊಣಕೆರೆ | ೮೨ |
| | ೪. ಬಿಂಡಿಗನವಿಲೆ | ೭೫ |
| | ೫. ಬೆಳ್ಳೂರು | ೮೨ |
| | **ಒಟ್ಟು** | **೩೬೬** |
| ೭. ಶ್ರೀರಂಗಪಟ್ಟಣ | ೧. ಶ್ರೀರಂಗಪಟ್ಟಣ | ೧೭ |
| | ೨. ಬೆಳಗೊಳ | ೨೦ |
| | ೩. ಕುರುಬರ ಶೆಟ್ಟಿಹಳ್ಳಿ | ೨೭ |
| | ೪. ಅರಕೆರೆ | ೩೧ |
| | **ಒಟ್ಟು** | **೯೫** |

**ಆಡಳಿತಾತ್ಮಕ ಬದಲಾವಣೆಗಳು**

ಮಂಡ್ಯ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಜನವಸತಿಯಿದ್ದ ಪ್ರದೇಶವಾಗಿದೆ. ಈ ಜಿಲ್ಲೆಯ ಹಂಗರಹಳ್ಳಿ, ಬೆಳಕವಾಡಿ, ಮುತ್ತತ್ತಿ, ಪಾಂಡವಪುರ ಮೊದಲಾದೆಡೆಗಳಲ್ಲಿ ಆದಿಶಿಲಾಯುಗ, ನವಶಿಲಾಯುಗ, ಕಬ್ಬಿಣದ ಯುಗ ಮತ್ತು ಆದಿ ಚಾರಿತ್ರಿಕ ಕಾಲದ ನೆಲೆಗಳು ಕಂಡುಬಂದಿವೆ. ಸುಮಾರು ನಾಲ್ಕನೆಯ ಶತಮಾನದಲ್ಲಿ ಜಿಲ್ಲೆಯ ಬಹುಭಾಗ ತಲಕಾಡಿನ ಗಂಗರಿಗೆ ಸೇರಿದ್ದು, ಶಿಂಷಾ ಕಣಿವೆಯ ಪ್ರದೇಶಕ್ಕೆ ಚಿಕ್ಕಗಂಗವಾಡಿ ಎಂಬ ಹೆಸರಿತ್ತು. ಒಂಭತ್ತನೇ ಶತಮಾನದ ಪ್ರಾರಂಭದಲ್ಲಿ ಮಳಖೇಡದ ರಾಷ್ಟ್ರಕೂಟರು ಗಂಗರ ಎರಡನೇ ಶಿವಮಾರನನ್ನು ಸೋಲಿಸಿ ಗಂಗವಾಡಿಯ ಪ್ರಾಂತ್ಯಕ್ಕೆ ತಮ್ಮ ಅಧಿಕಾರಿಯನ್ನು ನೇಮಿಸಿದರೂ, ನಂತರ ರಾಜ್ಯವನ್ನು ಗಂಗ ದೊರೆಗೆ ಹಿಂತಿರುಗಿಸಲಾಯಿತು. ಪುನಃ ಹತ್ತನೆಯ ಶತಮಾನದಲ್ಲಿ ಗಂಗರ ಆಳ್ವಿಕೆ ಜಿಲ್ಲೆಯಲ್ಲಿ ನೆಲೆಗೊಂಡರೂ ಗಂಗರ ಕೊನೆಯ ದೊರೆ ರಕ್ಕಸಗಂಗನ ಕಾಲದಲ್ಲಿ ಗಂಗವಾಡಿ ಚೋಳರ ಆಡಳಿತಕ್ಕೆ ಒಳಗಾಯಿತು. ಆಗ ಈ ಪ್ರದೇಶವು ಚೋಳ ರಾಜ್ಯದ ಮುಡಿಗೊಂಡ ಚೋಳಮಂಡಲ ಪ್ರಾಂತ್ಯದ ಭಾಗವಾಗಿತ್ತು. ಶಿವಸಮುದ್ರ ಹಾಗೂ ಮಳವಳ್ಳಿ ಭಾಗಗಳಿಗೆ ರಾಜೇಂದ್ರಚೋಳವಳನಾಡು ಎಂಬ ಹೆಸರಿತ್ತು. ಹೊಯ್ಸಳ ವಿಷ್ಣುವರ್ಧನನು ತಲಕಾಡನ್ನು ಗೆದ್ದ ನಂತರ ಮಂಡ್ಯ ಜಿಲ್ಲಾ ಪ್ರದೇಶವು ಹೊಯ್ಸಳರ ರಾಜ್ಯಕ್ಕೆ ಸೇರಿತು. ಮೇಲುಕೋಟೆ ಸಮೀಪ ಇರುವ ತೊಣ್ಣೂರು ಹೊಯ್ಸಳ ವಿಷ್ಣುವರ್ಧನನ ಉಪರಾಜಧಾನಿಯಾಗಿತ್ತೆಂಬ ಹೇಳಿಕೆಯಿದೆ. ಹೊಯ್ಸಳರ ನಂತರ ಈ ಭಾಗ ವಿಜಯನಗರದ ಅರಸರಿಗೆ ಸೇರಿತು. ಆಗ ಈ ಜಿಲ್ಲೆಯ ಹೆಚ್ಚು ಭಾಗ ವಿಜಯನಗರದ ಸಾಮಂತರಾಗಿದ್ದ ನಾಗಮಂಗಲ ಮತ್ತು ಚನ್ನಪಟ್ಟಣದ ಪಾಳೆಯಗಾರರ ಅಧೀನದಲ್ಲಿತ್ತೆಂದು ತಿಳಿದುಬರುತ್ತದೆ. ೧೪೫೪ ರಲ್ಲಿ ನಾಗಮಂಗಲದ ತಿಮ್ಮ ಒಡೆಯನು ವಿಜಯನಗರದ ಅರಸರ ಅಪ್ಪಣೆ ಪಡೆದು ಶ್ರೀರಂಗಪಟ್ಟಣದ ಕೋಟೆಯನ್ನು ಕಟ್ಟಿಸಿದನು. ಮುಂದೆ ೧೬ನೆಯ ಶತಮಾನದಿಂದ ೧೭ನೆಯ ಶತಮಾನದ ಆರಂಭದವರೆಗೂ ವಿಜಯನಗರದ ರಾಜಪ್ರತಿನಿಧಿ ಶ್ರೀರಂಗಪಟ್ಟಣದಲ್ಲಿ ನೆಲೆಸಿದ್ದರು. ಮುಂದೆ ೧೬೧೦ ರಲ್ಲಿ ಮೈಸೂರಿನ ರಾಜ ಒಡೆಯರು ಶ್ರೀರಂಗಪಟ್ಟಣವನ್ನು ಆಕ್ರಮಿಸಿ ಅದನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದಲ್ಲದೆ, ಆಗಿನ ಮಂಡ್ಯ ಜಿಲ್ಲೆಯ ಬಹುಭಾಗವನ್ನೂ ಸಂಸ್ಥಾನಕ್ಕೆ ಸೇರಿಸಿಕೊಂಡ ನಂತರ ಈ ಪ್ರದೇಶ ಮೈಸೂರು ಸಂಸ್ಥಾನದಲ್ಲಿ ಮುಂದುವರಿಯಿತು. ಶ್ರೀರಂಗಪಟ್ಟಣವು ಚಿಕ್ಕದೇವರಾಯರ ಆಡಳಿತದ ಅವಧಿಯಲ್ಲಿ ಪ್ರಖ್ಯಾತವಾಗಿತ್ತು.

ಹೈದರಾಲಿಯು ೧೭೬೧ ರಿಂದ ೨೧ ವರ್ಷಗಳ ಕಾಲ ಸರ್ವಾಧಿಕಾರಿಯಾಗಿ ಆಳ್ವಿಕೆ ನಡೆಸಿದನು. ಆಗ ಅವನ ಆಳ್ವಿಕೆಯಲ್ಲಿದ್ದ ಪ್ರದೇಶವನ್ನು ಪ್ರಮುಖವಾಗಿ ಎರಡು ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಮೊದಲನೇ ವಿಭಾಗವು ಬಾರಾಮಹಲ್‌ಗಳನ್ನು ಸೇರಿದ ಘಟ್ಟದ ಕೆಳಗಿನ ಪಯನ್ ಘಾಟ್ ಪ್ರದೇಶ, ಸೇಲಂ ಮತ್ತು ಈರೋಡ್‌ಗಳನ್ನು ಒಳಗೊಂಡಿತ್ತು. ಎರಡನೇಯ ವಿಭಾಗವು ಘಟ್ಟದ ಮೇಲಿನ ಪ್ರದೇಶಗಳಾದ ಮೈಸೂರು, ಶ್ರೀರಂಗಪಟ್ಟಣ, ಬೆಂಗಳೂರು, ಕೋಲಾರ, ಬಿದನೂರು/ಹೈದರ್ ನಗರ ಮತ್ತು ಚಿತ್ರದುರ್ಗ ಪ್ರದೇಶಗಳನ್ನು ಒಳಗೊಂಡ ಬಾಲಘಾಟ್ ಪ್ರದೇಶವಾಗಿತ್ತು. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಮೇಲಿನ ಎರಡು ವಿಭಾಗಗಳನ್ನು ಅಷ್ಟಗ್ರಾಮ ಫೌಜುದಾರಿ, ಬೆಂಗಳೂರು, ಮಧುಗಿರಿ, ಚಿತ್ರದುರ್ಗ, ನಗರ ಮತ್ತು ಮಂಜರಾಬಾದ್ ಎಂದು ಪುನರ್ ವಿಂಗಡಿಸಲಾಯಿತು. ಟಿಪ್ಪುಸುಲ್ತಾನನ ಕಾಲದಲ್ಲಿ ರಾಜ್ಯವನ್ನು ಮೂರು ಪ್ರಮುಖ ಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಅ) ಸುಭಾಯಂ(ಸಮುದ್ರ)– ಕರಾವಳಿ ಪ್ರದೇಶ, ಆ) ಸುಭಾ ತರಂ– ಬೆಟ್ಟಗುಡ್ಡಗಳು ಹಾಗೂ ಕಾಡುಗಳಿಂದ ಆವೃತ್ತವಾದ ನಗರ/ಪಟ್ಟಣ ಪ್ರದೇಶಗಳು ಮತ್ತು ಇ) ಸುಭಾ ಗುಬ್ರ(ಭೂಮಿ)– ಬಯಲು/ಮೈದಾನ ಪ್ರದೇಶ. ಟಿಪ್ಪುವು ೧೭೮೨ ರಿಂದ ೧೭೯೯ ರವರೆಗೆ ಅಧಿಕಾರದಲ್ಲಿದ್ದು, ಅವನ ಮರಣಾನಂತರ (೧೭೯೯) ಮರಾಠರು, ನಿಜಾಮರು ಹಾಗೂ ಬ್ರಿಟೀಷರ ನಡುವೆ ಆದ ಒಪ್ಪಂದದಂತೆ (೨೨–೬–೧೭೯೯) ಕೆನರಾ, ಕೊಯಮತ್ತೂರು

ಮತ್ತು ವೈನಾಡು ಜಿಲ್ಲೆ ಪ್ರದೇಶಗಳು ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಗೆ, ಗೂಟಿ ಪ್ರದೇಶ ನಿಜಾಮರಿಗೆ, ಹರಪನಹಳ್ಳಿ, ಹರಿಹರ ಹಾಗೂ ಸೂಂಡ(ಸಂಡೂರು) ಪ್ರದೇಶ ಮರಾಠರಿಗೆ ಹಾಗೂ ಉಳಿದ ಮೈಸೂರು ಪ್ರದೇಶವನ್ನು ರಾಜಮನೆತನದ ಒಡೆಯರಿಗೆ ನೀಡಲಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ೩೦–೬–೧೭೯೯ ರಲ್ಲಿ ಮೈಸೂರು ಅರಸರನ್ನಾಗಿ ಮಾಡಿ, ಮೈಸೂರನ್ನು ಆಡಳಿತದ ಕೇಂದ್ರವನ್ನಾಗಿ ಮಾಡಲಾಯಿತು.

೧೭೯೯ ರಲ್ಲಿ ಶ್ರೀರಂಗಪಟ್ಟಣ ಪ್ರದೇಶವು ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿ ಒಡೆತನಕ್ಕೆ ಬಂದಾಗ ಶ್ರೀರಂಗಪಟ್ಟಣದ ಕೋಟೆಯನ್ನು ಬ್ರಿಟೀಷ್ ಸೈನ್ಯದ ವಶಕ್ಕೆ ನೀಡಿ ಅದನ್ನು ಸೈನ್ಯದ (ಸಬ್ಸಿಡಿಯರಿ ದಳ – ಸಹಾಯಕ ಸೈನ್ಯ ದಳ) ಕೇಂದ್ರವನ್ನಾಗಿ ಮಾಡಲಾಯಿತು. ೧೮೦೫ ರವರೆಗೆ ಕರ್ನಲ್ ಆರ್ಥರ್ ವೆಲ್ಲೆಸ್ಲಿ ಸೈನ್ಯದ ಅಧಿಪತಿಯಾಗಿದ್ದನು. ಶ್ರೀರಂಗಪಟ್ಟಣದ ದರಿಯಾ ದೌಲತ್ ಕರ್ನಲ್‌ನ ವಾಸಸ್ಥಳವಾಗಿದ್ದಿತು. ಪ್ರವಾಸಿಗ ಬುಕಾನನ್ ಅಂದಾಜಿನಂತೆ. ಶ್ರೀರಂಗಪಟ್ಟಣದ ಜನಸಂಖ್ಯೆಯು ೧,೫೦,೦೦೦ ಇದ್ದದ್ದು ೧೮೦೦ ರಲ್ಲಿ ೩೨,೦೦೦ ಕ್ಕೆ ಇಳಿಯಿತು. ಶ್ರೀರಂಗಪಟ್ಟಣದ ಪ್ರತಿಕೂಲ ವಾತಾವರಣದಲ್ಲಿರಲು ಬ್ರಿಟೀಷ್ ಸೈನಿಕರು ಅಸಮಾಧಾನಗೊಂಡಿದ್ದರಿಂದ ೧೮೦೯ ರಿಂದ ೧೮೧೧ ರ ಅವಧಿಯಲ್ಲಿ ಸೈನ್ಯದ ಕೇಂದ್ರಸ್ಥಾನವನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು. ಜೊತೆಗೆ ಶ್ರೀರಂಗಪಟ್ಟಣದಲ್ಲಿ ಒಂದು ತುಕಡಿ ಸೈನ್ಯ ಹಾಗೂ ಈರೋಡ್, ಫ್ರೆಂಚ್‌ರಾಕ್ಸ್(ಪಾಂಡವಪುರ)ಗಳಲ್ಲಿ ಸೈನ್ಯದ ಕೆಲವು ತುಕಡಿಗಳನ್ನು ನೆಲೆಗೊಳಿಸಲಾಯಿತು. ಶ್ರೀರಂಗಪಟ್ಟಣದಲ್ಲಿದ್ದ ಸೈನ್ಯದ ತುಕಡಿ ಹಾಗೂ ಬಂದೂಕಿನ ಗುಂಡುಗಳ ತಯಾರಿಕಾ ಕೇಂದ್ರವನ್ನು ೧೮೩೦ ರಲ್ಲಿ ಆಗಿನ ಮದ್ರಾಸ್‌ನ ಸೈಂಟ್ ಜಾರ್ಜ್‌ಗೆ ಸ್ಥಳಾಂತರಿಸಲಾಯಿತು. ಇದರೊಂದಿಗೆ ಶ್ರೀರಂಗಪಟ್ಟಣವು ರಾಜಕೀಯವಾಗಿ ಮೂಲೆಗುಂಪಾಯಿತು.

ಆಡಳಿತದ ಹಿತದೃಷ್ಟಿಯಿಂದ ೧೮೭೯ರಲ್ಲಿ ಮೈಸೂರು ಜಿಲ್ಲೆಯನ್ನು ೧೪ ತಾಲೂಕುಗಳಾಗಿ ವಿಂಗಡಿಸಲಾಗಿತ್ತು. ಅವುಗಳ ವಿವರ ಕೆಳಕಂಡಂತೆ ಇದ್ದಿತು.

| ಕ್ರಮ ಸಂಖ್ಯೆ | ತಾಲೂಕು | ವಿಸ್ತೀರ್ಣ(ಚ.ಮೈ) | ಜನಸಂಖ್ಯೆ |
|---|---|---|---|
| ೧ | ಮೈಸೂರು | ೪೩೬ | ೯೯,೫೮೯ |
| ೨ | ಚಾಮರಾಜನಗರ | ೩೪೨ | ೭೬,೬೨೨ |
| ೩ | ಪಟ್ಟಣ ಅಷ್ಟಗ್ರಾಮ (ಶ್ರೀರಂಗಪಟ್ಟಣ ದ್ವೀಪವೂ ಸೇರಿದಂತೆ) | ೨೦೦ | ೬೭,೧೭೭ |
| ೪ | ಪಿರಿಯಾಪಟ್ಟಣ | ೫೨೪ | ೮೭,೫೮೭ |
| ೫ | ಯಡತೊರೆ | ೨೪೬ | ೩೯,೦೮೨ |
| ೬ | ಹೆಗ್ಗಡದೇವನಕೋಟೆ | ೫೪೪ | ೪೦,೩೦೦ |
| ೭ | ಗುಂಡ್ಲುಪೇಟೆ | ೬೫೮ | ೪೬,೬೬೯ |
| ೮ | ನಂಜನಗೂಡು | ೩೧೮ | ೪೨,೮೫೬ |
| ೯ | ಮೈಸೂರು ಅಷ್ಟಗ್ರಾಮ | ೧೭೧ | ೩೪,೪೧೦ |
| ೧೦ | ತಲಕಾಡು | ೨೬೭ | ೫೮,೯೫೦ |
| ೧೧ | ಮಂಡ್ಯ | ೨೪೮ | ೪೫,೧೯೯ |
| ೧೨ | ಮದ್ದೂರು | ೧೯೨ | ೩೨,೧೯೩ |
| ೧೩ | ಮಳವಳ್ಳಿ | ೨೮೪ | ೫೨,೮೧೦ |
| ೧೪ | ಯಳಂದೂರು (ಜಹಗೀರು) | ೯೫ | ೨೩,೧೨೪ |
|  | **ಒಟ್ಟು** | **೪,೪೯೫** | **೭,೪೬,೫೬೮** |

ಮೇಲಿನ ಒಟ್ಟು ೧೪ ತಾಲೂಕುಗಳ ಪೈಕಿ ಪಟ್ಟಣ ಅಷ್ಟಗ್ರಾಮ, ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ತಾಲೂಕುಗಳು ಈಗಿನ ಮಂಡ್ಯ ಜಿಲ್ಲೆಗೆ ಸೇರಿವೆ. ಮದ್ದೂರು ತಾಲೂಕು ೧೮೭೫ರಲ್ಲಿ ಉಪ-ತಾಲೂಕಾಗಿ ರಚಿತವಾಗಿ, ೧೮೮೬ರಲ್ಲಿ ಮಂಡ್ಯ ತಾಲೂಕಿನಲ್ಲಿ ವಿಲೀನಗೊಂಡಿತು. ಈ ನಡುವೆ ೧೮೮೨ರಲ್ಲಿ ಆದ ಆಡಳಿತಾತ್ಮಕ ಬದಲಾವಣೆಗಳಲ್ಲಿ ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಗಳನ್ನು ರದ್ದುಗೊಳಿಸಲಾಯಿತು. ಹಾಸನ ಜಿಲ್ಲೆಯ ಅರಕಲಗೂಡು, ಚನ್ನರಾಯಪಟ್ಟಣ, ನಾಗಮಂಗಲ, ಮತ್ತು ಅತ್ತಿಗುಪ್ಪೆ (ಈಗಿನ ಕೃಷ್ಣರಾಜಪೇಟೆ) ತಾಲೂಕುಗಳನ್ನು ಮೈಸೂರು ಜಿಲ್ಲೆಗೆ ಸೇರಿಸಲಾಯಿತು. ಹತ್ತು ಹೋಬಳಿಗಳನ್ನು ಒಳಗೊಂಡಿದ್ದ, ಅರಕಲಗೂಡು ತಾಲೂಕನ್ನು ೧೮೮೨ರಲ್ಲಿ ರದ್ದುಗೊಳಿಸಿ, ಸದರಿ ಹೋಬಳಿಗಳನ್ನು ನೆರೆಯ ತಾಲೂಕುಗಳಿಗೆ ವರ್ಗಾಯಿಸಲಾಯಿತು. ಪಟ್ಟಣ ಅಷ್ಟಗ್ರಾಮದ ಹೆಸರನ್ನು ಅದೇ ವರ್ಷ ಶ್ರೀರಂಗಪಟ್ಟಣವೆಂದು ಬದಲಾಯಿಸಲಾಯಿತು. ಕಿಕ್ಕೇರಿ ಹೋಬಳಿಗೆ ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ತಾಲೂಕುಗಳಿಂದ ಕೆಲವು ಗ್ರಾಮಗಳನ್ನು ವರ್ಗಾಯಿಸಲಾಯಿತು. ಮೇಲುಕೋಟೆ ಹೋಬಳಿಯನ್ನು ಶ್ರೀರಂಗಪಟ್ಟಣ ತಾಲೂಕಿಗೂ ಹಾಗೂ ಸಂತೇಬಾಚಹಳ್ಳಿ ಹೋಬಳಿಯ ಕೆಲವು ಗ್ರಾಮಗಳನ್ನು ನಾಗಮಂಗಲ ತಾಲೂಕಿಗೂ ವರ್ಗಾಯಿಸಲಾಯಿತು.

ಫ್ರೆಂಚ್‌ರಾಕ್ಸ್(ಹಿರೋಡೆ), ಕ್ಲೋಸ್‌ಪೇಟೆ(ರಾಮನಗರ), ಸಾಗರ ಮತ್ತು ಚಿಕ್ಕಬಳ್ಳಾಪುರ ಉಪ ವಿಭಾಗಗಳನ್ನು ೧೮೮೨ರಲ್ಲಿ ರಚಿಸಲಾಯಿತು. ಹಾಸನ ಜಿಲ್ಲೆಯನ್ನು ೧೮೮೬ರಲ್ಲಿ ಪುನರ್‌ರಚಿಸಲಾಯಿತು. ಪುನರ್‌ರಚನೆಗೊಂಡ ಅರಕಲಗೂಡು ತಾಲೂಕಿಗೆ ಅರಕಲಗೂಡು, ಬಸವಾಪಟ್ಟಣ, ಕೊಣನೂರು, ಕೃಷ್ಣರಾಜಕಟ್ಟೆ, ಮಲ್ಲಿಪಟ್ಟಣ ಮತ್ತು ಮರೂರು ಹೋಬಳಿಗಳನ್ನು ಸೇರಿಸಲಾಯಿತು. ಅರಕಲಗೂಡು ಮತ್ತು ಚನ್ನರಾಯಪಟ್ಟಣ ತಾಲೂಕುಗಳನ್ನು ಹಾಸನ ಜಿಲ್ಲೆಗೆ ವರ್ಗಾಯಿಸಲಾಯಿತು. ನಾಗಮಂಗಲ ಮತ್ತು ಅತ್ತಿಗುಪ್ಪೆ ತಾಲೂಕುಗಳನ್ನು ಮೈಸೂರು ಜಿಲ್ಲೆಯಲ್ಲಿ ಉಳಿಸಿಕೊಳ್ಳಲಾಯಿತು. ಫ್ರೆಂಚ್‌ರಾಕ್ಸ್ ಉಪತಾಲೂಕನ್ನು ೧೮೯೮ರ ನಂತರ ರಚಿಸಲಾಯಿತು. ನಂತರ ೧೯೨೩ರಲ್ಲಿ ಅದನ್ನು ರದ್ದುಗೊಳಿಸಿ ಕ್ಯಾತನಹಳ್ಳಿ, ಪಾಂಡವಪುರ ಮತ್ತು ಕಸಬ ಹೋಬಳಿಗಳ ಜೊತೆಗೆ ಮೇಲುಕೋಟೆ ಉಪತಾಲೂಕನ್ನೂ ಶ್ರೀರಂಗಪಟ್ಟಣ ತಾಲೂಕಿಗೆ ಸೇರಿಸಲಾಯಿತು. ಅತ್ತಿಗುಪ್ಪೆಗೆ ೧೮೯೧ರಲ್ಲಿ ಕೃಷ್ಣರಾಜಪೇಟೆ ಎಂದು ನಾಮಕರಣ ಮಾಡಲಾಯಿತು. ಮೈಸೂರು ಜಿಲ್ಲೆಯಲ್ಲಿ ೧೯೩೦ರಲ್ಲಿ ೧೩ ತಾಲೂಕುಗಳು ಹಾಗೂ ಒಂದು ಉಪತಾಲೂಕು ಇದ್ದವು. ಅವುಗಳೆಂದರೆ-ನಂಜನಗೂಡು ಉಪವಿಭಾಗಕ್ಕೆ ಸೇರಿದ ನಂಜಗೂಡು, ಚಾಮರಾಜನಗರ, ಗುಂಡ್ಲುಪೇಟೆ, ಮತ್ತು ತಿರುಮಕೂಡಲು ನರಸೀಪುರ ತಾಲೂಕುಗಳು, ಮೈಸೂರು ಉಪ ವಿಭಾಗಕ್ಕೆ ಸೇರಿದ ಮೈಸೂರು, ಹುಣಸೂರು, ಹೆಗ್ಗಡದೇವನಕೋಟೆ ಮತ್ತು ಯಡತೊರೆ ತಾಲೂಕುಗಳು, ಹಾಗೂ ಫ್ರೆಂಚ್‌ರಾಕ್ಸ್ ಉಪವಿಭಾಗಕ್ಕೆ ಸೇರಿದ ಶ್ರೀರಂಗಪಟ್ಟಣ, ಮಂಡ್ಯ, ಮಳವಳ್ಳಿ, ನಾಗಮಂಗಲ ಮತ್ತು ಕೃಷ್ಣರಾಜಪೇಟೆ ತಾಲೂಕುಗಳು. ಈ ನಡುವೆ ಮಂಡ್ಯ, ಮಳವಳ್ಳಿ ಹಾಗೂ ಮದ್ದೂರು ತಾಲೂಕುಗಳನ್ನು ಒಳಗೊಂಡ ಮಂಡ್ಯ ಉಪವಿಭಾಗವನ್ನು ೧೯೨೮ರಲ್ಲಿ ರಚಿಸಲಾಯಿತು. ೧೯೩೯ರಲ್ಲಿ ಮೈಸೂರು ಜಿಲ್ಲೆಗೆ ಸೇರಿದ್ದ ತಾಲೂಕುಗಳ ವಿವರ ಮುಂದಿನ ಕೋಷ್ಟಕ ೧.೭ ರಲ್ಲಿ ನೀಡಿದೆ.

**ಕೋಷ್ಟಕ ೧.೭ ಮೈಸೂರು ಜಿಲ್ಲೆಯಲ್ಲಿದ್ದ ತಾಲೂಕುಗಳ ವಿವರ(೧೯೩೯)**

| ಕ್ರಮಸಂಖ್ಯೆ | ಉಪವಿಭಾಗ | ತಾಲೂಕು |
|---|---|---|
| ೧ | ೨ | ೩ |
| ೧ | ಮೈಸೂರು | ಮೈಸೂರು<br>ಹುಣಸೂರು<br>ಹೆಗ್ಗಡದೇವನಕೋಟೆ<br>ಕೃಷ್ಣರಾಜನಗರ (ಯಡತೊರೆ)ಮತ್ತು<br>ಪಿರಿಯಾಪಟ್ಟಣ ಉಪತಾಲೂಕು |

| ೧ | ೨ | ೩ |
|---|---|---|
| ೨ | ನಂಜನಗೂಡು | ನಂಜನಗೂಡು<br>ಗುಂಡ್ಲುಪೇಟೆ<br>ಚಾಮರಾಜನಗರ<br>ತಿರುಮಕೂಡಲು ನರಸೀಪುರ ಮತ್ತು<br>ಯಳಂದೂರು ಜಹಗೀರು |
| ೩ | ಫ್ರೆಂಚ್‌ರಾಕ್ಸ್ (ಪಾಂಡವಪುರ) | ಶ್ರೀರಂಗಪಟ್ಟಣ<br>ಫ್ರೆಂಚ್‌ರಾಕ್ಸ್<br>ನಾಗಮಂಗಲ<br>ಕೃಷ್ಣರಾಜಪೇಟೆ |
| ೪ | ಮಂಡ್ಯ | ಮಂಡ್ಯ<br>ಮಳವಳ್ಳಿ<br>ಮದ್ದೂರು |

ಮೈಸೂರು ಜಿಲ್ಲೆಯನ್ನು ಮೈಸೂರು ಮತ್ತು ಮಂಡ್ಯ ಜಿಲ್ಲೆಗಳೆಂದು ೧೯೩೯ರ ಜುಲೈ ೧ ರಂದು ವಿಭಜಿಸಲಾಯಿತು. ಮಂಡ್ಯ ಜಿಲ್ಲೆಗೆ ಮಂಡ್ಯ ಮತ್ತು ಫ್ರೆಂಚ್‌ರಾಕ್ಸ್ ಉಪವಿಭಾಗಗಳ ಏಳು ತಾಲೂಕುಗಳನ್ನು ಸೇರಿಸಲಾಯಿತು. ಉಳಿದ ಎಂಟು ತಾಲೂಕುಗಳು ಮೈಸೂರು ಜಿಲ್ಲೆಯಲ್ಲಿಯೇ ಉಳಿದುಕೊಂಡವು. ಆ ವರ್ಷದಲ್ಲಿ ನೂತನ ಮಂಡ್ಯ ಜಿಲ್ಲೆಯ ವಿಸ್ತೀರ್ಣ ೧,೯೩೬.೧೪ ಚದರ ಮೈಲಿಗಳಾಗಿದ್ದು, ೨೯ ಹೋಬಳಿ ಹಾಗೂ ೧,೪೯೧ ಗ್ರಾಮಗಳನ್ನು ಹೊಂದಿದ್ದು, ಒಟ್ಟು ೫,೮೫,೯೩೮ ಜನಸಂಖ್ಯೆಯನ್ನು ಹೊಂದಿತ್ತು.

ಮದ್ದೂರು ತಾಲೂಕನ್ನು ೧೯೩೧ ರ ಮೇ ಒಂದರಂದು ರಚಿಸಲಾಯಿತು. ಮದ್ದೂರು ಕೇಂದ್ರವಾಗಿದ್ದ ಈ ತಾಲೂಕಿಗೆ ಮಂಡ್ಯ ತಾಲೂಕಿನಿಂದ ಮದ್ದೂರು ಹೋಬಳಿ(೪೩ ಗ್ರಾಮಗಳು), ಕೊಪ್ಪ ಹೋಬಳಿ(೪೪ ಗ್ರಾಮಗಳು) ಮತ್ತು ಅತಕೂರು ಹೋಬಳಿಗಳನ್ನೂ(೩೩ ಗ್ರಾಮಗಳನ್ನು) ಹಾಗೂ ಮಳವಳ್ಳಿ ತಾಲೂಕಿನಿಂದ ಚಿಕ್ಕರಸಿನಕೆರೆ ಹೋಬಳಿ(೪೦ ಗ್ರಾಮಗಳು) ಯನ್ನು ಸೇರಿಸಲಾಯಿತು. ಈ ತಾಲೂಕು ಒಟ್ಟು ೧೬೦ ಗ್ರಾಮಗಳನ್ನು ಹಾಗೂ ೧,೦೭,೯೪೯ ಎಕರೆ ವಿಸ್ತೀರ್ಣವನ್ನೂ ಹೊಂದಿತ್ತು. ದೊಡ್ಡರಸಿನಕೆರೆಯನ್ನು ಮೂರು ಹಳ್ಳಿಗಳನ್ನಾಗಿ ವಿಭಜಿಸಲಾಯಿತು. ಅವುಗಳೆಂದರೆ ದೊಡ್ಡರಸಿನಕೆರೆ,  ಮಟನಹಳ್ಳಿ ಮತ್ತು ದೇವರಹಳ್ಳಿ. ಆ ಪ್ರಯುಕ್ತ ಒಟ್ಟು ಗ್ರಾಮಗಳ ಸಂಖ್ಯೆ ೧೬೨ ಕ್ಕೆ ಏರಿತು. ಮಳವಳ್ಳಿ ತಾಲೂಕಿನ ಏಳು ಗ್ರಾಮಗಳನ್ನು (ಹೊನ್ನಿಗಾನಹಳ್ಳಿ, ಹರಿಹರ, ಭೂಹಳ್ಳಿ, ಬನ್ನಾನೆ, ಸಾಲಿಗೆರಿ, ಸಂಬಾಪುರ ಹಾಗೂ ಕಾಡಹಳ್ಳಿ) ಕನಕಪುರ ತಾಲೂಕಿನ ಸಾತನೂರು ಹೋಬಳಿಗೆ ೧೯೩೬ ರ ಮೇ ೧೬ ರಂದು ವರ್ಗಾಯಿಸಲಾಯಿತು. ಮದ್ದೂರು ತಾಲೂಕಿಗೆ ವರ್ಗಾಯಿಸಿದ ೪೨ ಗ್ರಾಮಗಳನ್ನು ಹೊರತುಪಡಿಸಿ ಮಳವಳ್ಳಿ ತಾಲೂಕಿನಲ್ಲಿ ೧೮೬ ಗ್ರಾಮಗಳಿದ್ದವು. ೧೯೩೭ ಏಪ್ರಿಲ್ ೩೦ ರಂದು ಫ್ರೆಂಚ್‌ರಾಕ್ಸ್(ಪಾಂಡವಪುರ) ತಾಲೂಕನ್ನು ರಚಿಸಲಾಯಿತು.

ಶ್ರೀರಂಗಪಟ್ಟಣ ತಾಲೂಕಿನ ಆರು ಹೋಬಳಿಗಳನ್ನು ನಾಲ್ಕಕ್ಕೂ ಹಾಗೂ ಕೃಷ್ಣರಾಜಪೇಟೆ ತಾಲೂಕಿನ ಆರು ಹೋಬಳಿಗಳನ್ನು ಐದಕ್ಕೆ ಇಳಿಸಲಾಯಿತು. ಫ್ರೆಂಚ್‌ರಾಕ್ಸ್  ತಾಲೂಕಿನಲ್ಲಿ ಹಿರೋಡೆ, ಮೇಲುಕೋಟೆ ಮತ್ತು ಚಿನಕುರಳಿ ಹೋಬಳಿಗಳಿದ್ದವು. ಪುನರ್ ರಚನೆಯ ನಂತರ ಹೊಸ ಹಿರೋಡೆ ಹೋಬಳಿಗೆ ಮೊದಲಿನ ೫೧ ಗ್ರಾಮಗಳ ಜೊತೆಗೆ ಶ್ರೀರಂಗಪಟ್ಟಣ ತಾಲೂಕಿನ ಕ್ಯಾತನಹಳ್ಳಿ ಹೋಬಳಿಯಿಂದ ೧೦ ಗ್ರಾಮಗಳನ್ನು ಸೇರಿಸಲಾಯಿತು. ಚಿನಕುರಳಿ ಹೋಬಳಿಗೆ ಮೊದಲಿನ ೫೪ ಗ್ರಾಮಗಳ ಜೊತೆಗೆ ಕೃಷ್ಣರಾಜಪೇಟೆ ತಾಲೂಕಿನ ಕನ್ನಂಬಾಡಿ ಹೋಬಳಿಯಿಂದ ೨೧ ಗ್ರಾಮಗಳನ್ನೂ ಹಾಗೂ ಅದೇ ತಾಲೂಕಿನ ಕಸಬ ಹೋಬಳಿಯಿಂದ ಒಂದು ಗ್ರಾಮವನ್ನೂ

ವರ್ಗಾಯಿಸಲಾಯಿತು. ಮೇಲುಕೋಟೆ ಹೋಬಳಿಯಲ್ಲಿ ೪೯ ಗ್ರಾಮಗಳಿದ್ದು ಇವೆಲ್ಲಾ ಸೇರಿ ಫ್ರೆಂಚ್ ರಾಕ್ಸ್ ತಾಲೂಕಿನಲ್ಲಿ ಒಟ್ಟು ೧೮೬ ಗ್ರಾಮಗಳಾದವು. ೧೯೩೯ ರ ಸೆಪ್ಟೆಂಬರ್ ೨೨ ರಿಂದ ಪುನರ್ ರಚಿತವಾದಂತೆ ಶ್ರೀರಂಗಪಟ್ಟಣ ತಾಲೂಕಿನಲ್ಲಿ ಹೊಸ ಹೋಬಳಿಯನ್ನೂ ರಚಿಸಿ, ಕುರುಬರಶೆಟ್ಟಿಹಳ್ಳಿಯನ್ನು ಅದರ ಕೇಂದ್ರ ಸ್ಥಾನವನ್ನಾಗಿ ಮಾಡಲಾಯಿತು.

೧೯೪೦ ರ ಮೇ ೧೦ ರಂದು ಮಂಡ್ಯ ತಾಲೂಕಿನ ಅಸಲಿ ಇನಾಂ ಗೌಡಗೆರೆ ಗ್ರಾಮವನ್ನು ಕೆಬ್ಬಹಳ್ಳಿ ದಾಖಲೆ ಗ್ರಾಮದಿಂದ ಬೇರ್ಪಡಿಸಲಾಯಿತು. ೧೯೪೩ ರ ಸೆಪ್ಟೆಂಬರ್ ೨೫ ರಂದು ಮಂಡ್ಯ ಕಸಬಾ ಹೋಬಳಿಯನ್ನು(೪೩ ಗ್ರಾಮಗಳು) ಮಂಡ್ಯ ಕಸಬಾ(೧೭ ಗ್ರಾಮಗಳು) ಮತ್ತು ಕೆರಗೋಡು (೨೬ಗ್ರಾಮಗಳು) ಹೋಬಳಿಗಳಾಗಿ ವಿಭಾಗಿಸಲಾಯಿತು. ಶ್ರೀರಂಗಪಟ್ಟಣ ತಾಲೂಕಿನ ಕುರಗಹಳ್ಳಿ ಮತ್ತು ಮೈದನಹಳ್ಳಿ ಗ್ರಾಮಗಳನ್ನು ೧೯೫೭ ರ ಮೇ ೭ ರಂದು ಮೈಸೂರು ತಾಲೂಕಿಗೆ ವರ್ಗಾಯಿಸಲಾಯಿತು. ೨೦೦೧-೦೨ರಲ್ಲಿದ್ದಂತೆ ಜಿಲ್ಲೆಯ ಆಡಳಿತಾತ್ಮಕ ವಿಭಾಗಗಳ ವಿವರಗಳನ್ನು ಕೋಷ್ಟಕ ೧.೮ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧.೮ ಜಿಲ್ಲೆಯ ಉಪವಿಭಾಗಗಳ ವಿವರ - ೨೦೦೨**

| ಉಪವಿಭಾಗ-ತಾಲೂಕು | ವಿಸ್ತೀರ್ಣ ಚ.ಕಿ.ಮೀ. | ಹೋಬಳಿಗಳ ಸಂಖ್ಯೆ | ಗ್ರಾಮಗಳು ೧೯೯೧ರ ಜನಗಣತಿ ವರದಿ ಪ್ರಕಾರ | |
|---|---|---|---|---|
| | | | ಜನವಸತಿ ಇರುವ ಗ್ರಾಮಗಳು | ಜನವಸತಿ ಇಲ್ಲದ ಗ್ರಾಮಗಳು |
| | | **೧. ಮಂಡ್ಯ ಉಪವಿಭಾಗ** | | |
| ೧. ಮಂಡ್ಯ | ೭೧೬ | ೪ | ೧೭೪ | ೯ |
| ೨. ಮದ್ದೂರು | ೬೧೮ | ೫ | ೧೫೩ | ೭ |
| ೩. ಮಳವಳ್ಳಿ | ೮೧೦ | ೪ | ೧೭೨ | ೧೪ |
| **ಒಟ್ಟು** | **೨,೧೪೪** | **೧೩** | **೪೯೯** | **೩೦** |
| | | **೨. ಪಾಂಡವಪುರ** | | |
| ೧. ಕೃಷ್ಣರಾಜಪೇಟೆ | ೯೦೫ | ೬ | ೨೯೬ | ೨೦ |
| ೨. ನಾಗಮಂಗಲ | ೧,೦೪೫ | ೫ | ೩೪೩ | ೨೩ |
| ೩. ಪಾಂಡವಪುರ | ೫೪೦ | ೩ | ೧೪೦ | ೩೧ |
| ೪. ಶ್ರೀರಂಗಪಟ್ಟಣ | ೩೫೭ | ೪ | ೮೭ | ೯ |
| **ಒಟ್ಟು** | **೨,೮೪೭** | **೧೮** | **೮೬೬** | **೮೩** |
| **ಜಿಲ್ಲೆಯ ಒಟ್ಟು ಮೊತ್ತ** | **೪,೯೯೧** | **೩೧** | **೧,೩೬೫** | **೧೧೩** |

## ಭೂ ವಿಜ್ಞಾನ

ಜಿಲ್ಲೆಯ ಬಹು ಭಾಗ ನೈಸ್ ಶಿಲಾ ಪ್ರದೇಶವಾಗಿದೆ. ಸಾಮಾನ್ಯವಾಗಿ ಈ ಶಿಲೆ ಬೂದು ಬಣ್ಣದ್ದಾಗಿದ್ದು ಪದರಯುಕ್ತವಾಗಿರುತ್ತದೆ. ಚಿನಕುರಳಿಯ ಬಳಿ ಇಂಥ ಶಿಲಾ ಸ್ವರೂಪ ಸ್ಪಷ್ಟವಾಗಿ ಕಾಣುತ್ತದೆ. ಕೃಷ್ಣರಾಜಪೇಟೆ, ಮೇಲುಕೋಟೆ, ಸಿಂಧಘಟ್ಟ ಮುಂತಾದೆಡೆಗಳಲ್ಲಿ ಸ್ವಲ್ಪ ಭಿನ್ನ ರೀತಿಯ ನೈಸ್ ಶಿಲೆಗಳಿವೆ. ಧಾರವಾಡ ಶಿಲಾವರ್ಗದ ಶಿಸ್ಟ್ ಕಲ್ಲುಗಳ ಹೆಚ್ಚು ಅಗಲವಿಲ್ಲದ ಪಟ್ಟೆಗಳು ಉದ್ದುದ್ದವಾಗಿ ಜಿಲ್ಲೆಯ ಹಲವೆಡೆ ಸಾಗಿವೆ. ಬೆಳ್ಳಿಬೆಟ್ಟ ಮತ್ತು ಹದನೂರು ಪಟ್ಟೆ, ಕೃಷ್ಣರಾಜಪೇಟೆ ಮತ್ತು ಚಿನಕುರಳಿಗಳ ಮಧ್ಯದಲ್ಲಿರುವ ಪಟ್ಟೆಗಳು ಇವುಗಳಲ್ಲಿ ಮುಖ್ಯವಾದವು. ಕೃಷ್ಣರಾಜಪೇಟೆಯಿಂದ ಸುಮಾರು ಆರು ಕಿ.ಮೀ. ಪಶ್ಚಿಮದಲ್ಲಿರುವ ಬೆಳ್ಳಿಬೆಟ್ಟದ ಸಮೀಪದಿಂದ ಬೆಳ್ಳಿಬೆಟ್ಟ ಪಟ್ಟೆ ಸುಮಾರು ೨೫ ಕಿ.ಮೀ ದೂರ ದಕ್ಷಿಣಾಭಿಮುಖವಾಗಿ ಕಾವೇರಿ ನದಿಯವರೆಗೆ ಹಬ್ಬಿದೆ. ಇದರ ಅಗಲ ಸಾಮಾನ್ಯವಾಗಿ ಐದು ಕಿ.ಮೀ.ಗಳಷ್ಟಿದೆ. ಆದರೆ ಕಾವೇರಿಯ ಬಳಿಗೆ ಸಾಗುತ್ತಿದ್ದಂತೆ ಕಿರಿದಾಗುತ್ತಾ ಹೋಗುತ್ತದೆ.

ಹದನೂರು ಪಟ್ಟೆ ಕೃಷ್ಣರಾಜಪೇಟೆ ಮತ್ತು ಚಿನಕುರುಳಿಗಳ ಮಧ್ಯದಲ್ಲಿರುವ ಹದನೂರು ಗ್ರಾಮದ ಬಳಿ ಇದೆ. ಇದು ನುಗ್ಗೇಹಳ್ಳಿಯಿಂದ ಮುಂದೆ ಸಾಗಿ ಬಂದಿರುವ ಪಟ್ಟೆ. ಮತ್ತೊಂದು ಪಟ್ಟೆ ಎಡೆಯೂರಿನಿಂದ ಕರಿಘಟ್ಟದವರೆಗೆ ಸಾಗುತ್ತದೆ. ಕಪ್ಪು ಹಾರ್ನಬ್ಲೆಂಡ್ ಇವುಗಳಲ್ಲಿ ಕಂಡುಬರುವ ಶಿಲೆ. ಕಬ್ಬಿಣದ ಅದಿರಿನಿಂದ ಕೂಡಿದ ಒಂದು ಪಟ್ಟೆ ಮದ್ದೂರು ಚನ್ನಪಟ್ಟಣದ ನಡುವೆ ಹಾದುಹೋಗಿದೆ. ಈ ಪಟ್ಟೆಗಳ ಮಧ್ಯದಲ್ಲಿ ಅಲ್ಲಲ್ಲಿ ಬೆಣಚು ಕಲ್ಲಿನ ಪಟ್ಟೆಗಳೂ ಇವೆ. ವಿಠಲಾಪುರ ಮತ್ತು ಕರಿಘಟ್ಟದ ಬಳಿ ಅಂಥ ಪಟ್ಟೆಗಳಲ್ಲಿ ಅಲ್ಪ ಪ್ರಮಾಣದಲ್ಲಿ ಚಿನ್ನದ ಅಂಶವೂ ಕಂಡು ಬರುತ್ತದೆ. ಪಾರ್ಫಿರಿ ಜಾತಿಯ ಉತ್ತಮ ಕಲ್ಲುಗಳ ಹರವುಗಳು ಈ ಜಿಲ್ಲೆಯ ತಲಗವಾಡಿ, ಸಿದ್ದಲಿಂಗಪುರ, ಕನಗಟ್ಟಿ ನಾರಣಕೆರೆ, ತುರಗನೂರು ಮೊದಲಾದೆಡೆಗಳಲ್ಲಿವೆ.

**ಭೂ ವಿಕಾಸ :** ಜಿಲ್ಲೆಯು, ಭಾರತದ ಪರ್ಯಾಯ ದ್ವೀಪದ ಒಂದು ಭಾಗವಾಗಿದ್ದು ಅದರ ಭೂ ಚರಿತ್ರೆಯ ಪ್ರಮುಖ ಲಕ್ಷಣಗಳು, ಭಾರತದ ಪರ್ಯಾಯ ದ್ವೀಪದ ಚರಿತ್ರೆಯನ್ನು ಬಹುವಾಗಿ ಹೋಲುತ್ತವೆ. ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಶಿಲಾಸಮೂಹ ಆರ್ಕೀಯನ್ ಕಲ್ಪಕ್ಕೆ ಸೇರಿದೆ. ಆರ್ಕೀಯನ್ ಕಲ್ಪ ಶಿಲೆಗಳು ವಿಶಾಲವಾದ ಪ್ರದೇಶದಲ್ಲಿ ಹರಡಿವೆ. ಇವು ಅನೇಕ ಹವಾಮಾನಗಳಿಗೆ ತುತ್ತಾಗುತ್ತಾ (ಎಕ್ಸ್‌ಪೋಸ್ ಆಗುತ್ತಾ) ವಿವಿಧ ರಾಸಾಯನಿಕ ಸಂಯೋಜನೆಗಳನ್ನು ಹೊಂದಿವೆ. ತತ್ಪರಿಣಾಮವಾಗಿ ಅವು ಕ್ಷೋಭೆಗೊಳಗಾಗಿ ಬಹಳ ರೂಪಾಂತರಗೊಂಡಿವೆ. ಹೀಗೆ ಅವು ಅತ್ಯಂತ ತೊಡಕಿನ ಶಿಲಾಸಮೂಹವಾಗಿದ್ದು, ಅನ್ವರ್ಥವಾಗಿ ಆರ್ಕೀಯನ್ ಕಲ್ಪದ ಶಿಲಾ ಸಂಕೀರ್ಣ ಎಂಬ ಹೆಸರನ್ನೂ ಪಡೆದಿವೆ. ಈ ಶಿಲಾ ವಿಧಗಳಲ್ಲಿ ಗ್ರಾನೈಟ್, ನೈಸು ಮತ್ತು ಶಿಸ್ಟುಗಳು ಬಹಳ ಸಾಮಾನ್ಯವಾಗಿ ಕಂಡುಬರುತ್ತವೆ. ಇವುಗಳೊಂದಿಗೆ ಕ್ವಾರ್ಟ್ಸೈಟ್ ಮತ್ತು ಸುಣ್ಣ ಶಿಲೆಯಂತಹ ಇತರ ಶಿಲಾ ವಿಧಗಳೂ ಕಾಣಸಿಗುತ್ತವೆ.

ಆರ್ಕೀಯನ್ ಶಿಲಾ ಸಂಕೀರ್ಣಕ್ಕೆ ಸೇರಿದ ಧಾರವಾಡ ಶಿಲಾ ಸಮೂಹವು ಅತ್ಯಂತ ಪುರಾತನವಾದುದು. ಧಾರವಾಡ ಶಿಲೆಗಳ ನಂತರದ ಆರ್ಕೀಯನ್ ಕಲ್ಪದ ಶಿಲೆಯ ಪ್ರಮುಖ ಭಾಗವನ್ನು ಪೆನಿನ್‌ಸುಲಾರ್ ನೈಸ್ ಆಕ್ರಮಿಸಿದೆ. ಈ ಶಿಲಾಸಮೂಹದ ಮುಖ್ಯ ಭಾಗವು ನೈಸ್ ಪಟ್ಟೆ ರಚನೆಯಿರುವ ಬೆಣಚು ಕಲ್ಲಾಗಿದೆ. ಈ ನೈಸ್ ಶಿಲೆಯು ಪರ್ಯಾಯ ದ್ವೀಪದ ಬಹುಭಾಗವನ್ನು ಆಕ್ರಮಿಸಿರುವುದರಿಂದ ಇದಕ್ಕೆ ಪೆನಿನ್ಸುಲಾರ್ ನೈಸ್ ಎಂಬ ಹೆಸರು ಬಂದಿದೆ. ಸಾಮಾನ್ಯವಾಗಿ ಈ ಶಿಲೆಗಳೆಲ್ಲ ಭೂಮಿಯ ಮೇಲ್ಪದರದ ಆಳದಿಂದ ಭೇದಿಸಿಕೊಂಡು ಅಥವಾ ಅಂತಸ್ಸರಣವಾಗಿ ಮೇಲಕ್ಕೆ ಬಂದ ಅಗ್ನಿ ಶಿಲೋತ್ಪನ್ನಗಳು. ಆನಂತರದ ನೈಸು ಮತ್ತು ಗ್ರಾನೈಟು ಪದರಗಳು ಹೊರಮೈಯ ಭಾಗವನ್ನಾಕ್ರಮಿಸಿವೆ. ಈ ಪೆನಿನ್ಸುಲಾರ್ ನೈಸುಗಳು ಆಗಾಗ್ಗೆ ಪೆಗ್ಮಟೈಟ್‌ಗಳೆಂಬ ಪದರಗಳನ್ನೊಳಗೊಂಡಿವೆ. ಕ್ಲೋಸ್‌ಪೇಟೆ ಗ್ರಾನೈಟ್ ಭೂವಲಯದ ದಕ್ಷಿಣದ ಕೊನೆಯಲ್ಲಿ ಮತ್ತು ಅದಕ್ಕೆ ಸಮೀಪದಲ್ಲಿಯೇ ಪಾರ್ಫಿರಿ ಎಂಬ ಇನ್ನೊಂದು ಶಿಲಾ ಸಮುದಾಯ ದೊರೆಯುತ್ತದೆ. ಅದನ್ನು ಕ್ಲೋಸ್‌ಪೇಟ್ ಗ್ರಾನೈಟ್ ಸಮೂಹದ ಭಾಗವೆಂದು ಪರಿಗಣಿಸಲಾಗಿದೆ. ಅವುಗಳ ಅತ್ಯುತ್ತಮವಾದ ಹೊರಚಾಚುಗಳು ಶ್ರೀರಂಗಪಟ್ಟಣದ ಸಮೀಪದಲ್ಲಿವೆ.

ಕರ್ಣಾಟಕ ಪ್ರದೇಶವು ಆದಿಜೀವಕಲ್ಪದ ಅಂತ್ಯದಿಂದಲೂ ಭೂಭಾಗವಾಗಿಯೇ ಉಳಿದಿದೆ. ಅದರಿಂದೀಚೆಗೆ ಕಳೆದಿರುವ ಅಗಾಧವಾದ ಕಾಲಾವಧಿಯಲ್ಲಿ ವಿವಿಧ ಶಿಲಾವರ್ಗಗಳಿಂದ ರಚಿತವಾದ ಈ ಪುರಾತನ ಭೂಭಾಗವು ಅವಿರತವಾದ ಶಿಲಾಕುಸಿತ ಮತ್ತು ಭೂ ಸವೆತಕ್ಕೆ ಒಳಗಾಗಿದೆ. ಇದರ ಪರಿಣಾಮವಾಗಿ ಸಾವಿರಾರು ಅಡಿ ದಪ್ಪದ ಶಿಲಾವಸ್ತುಗಳು ಬೇರ್ಪಟ್ಟು ಸ್ಥಳಾಂತರಗೊಂಡಿವೆ. ಆದ್ದರಿಂದ ಇಂದು ನಮಗೆ ಕಂಡುಬರುವುದು ಭೂ ಸವೆತದ ನಂತರ ಉಳಿದಿರುವ ಭಾಗಗಳು ಮಾತ್ರ. ಭೂ ಸವೆತ ವ್ಯತ್ಯಾಸದಿಂದ ಕ್ರಮೇಣ ಭೂ ಹೊರಮೈಯಲ್ಲಿ ಅನೇಕ ವಿಧದ ಅಸಮಾನತೆಗಳುಂಟಾದವು. ಈಗ ನಾವು ಕಾಣುವಂತಹ ಈ ಜಿಲ್ಲಾ ಪ್ರದೇಶವು ಆರ್ಕೀಯನ್ ಶಿಲಾಸಮೂಹದ ಪೆನಿನ್ಸುಲಾರ್ ನೈಸು ಮತ್ತು ಕ್ಲೋಸ್‌ಪೇಟ್ ಗ್ರಾನೈಟುಗಳನ್ನು ಒಳಗೊಂಡಿದೆ. ಈ ಆರ್ಕೀಯನ್

ಕಲ್ಪದ ಶಿಲಾಸಮೂಹದಲ್ಲಿ ಅನೇಕ ಲೋಹಗಳ ಅದಿರುಗಳು ಹಾಗೂ ಅದಿರುಗಳಲ್ಲದ ಖನಿಜಗಳೂ ದೊರೆತಿದ್ದು ಅವುಗಳಲ್ಲಿ ಮುಖ್ಯವಾದ ಲೋಹ ನಿಕ್ಷೇಪಗಳನ್ನು ಮುಂದೆ ಚರ್ಚಿಸಲಾಗಿದೆ.

**ಫೆಲ್ಸೈಟ್ ಮತ್ತು ಪಾರ್ಫಿರಿ ಶಿಲೆಗಳು :** ವಿವಿಧ ವರ್ಣ ಮತ್ತು ಒಳರಚನೆಗಳಿರುವ ಸುಮಾರು ೩೦ ರಿಂದ ೪೦ ವಿಧಗಳ ಫೆಲ್ಸೈಟ್ ಮತ್ತು ಪಾರ್ಫಿರಿ ಡೈಕುಗಳು ಶ್ರೀರಂಗಪಟ್ಟಣ ಮತ್ತು ಮಂಡ್ಯ ತಾಲೂಕುಗಳಲ್ಲಿ ಹರಡಿವೆ. ಅವುಗಳು ಬೂದುಹಸಿರು, ತಿಳಿಹಸಿರು, ಅಚ್ಚಹಸಿರು, ಊದಾಬಣ್ಣ, ಕಂದುಬಣ್ಣ, ಚಾಕೋಲೇಟ್ ಮತ್ತು ನಶ್ಯದ ಬಣ್ಣಗಳ ಬೇರೆ ಬೇರೆ ಛಾಯೆಗಳಲ್ಲಿರುತ್ತವೆ. ಅವುಗಳ ಕಣ ಪರಿಮಾಣ ಮತ್ತು ಒಳ ರಚನೆಗಳಲ್ಲಿ ಹಲವು ವ್ಯತ್ಯಾಸಗಳಿವೆ. ಈ ಶಿಲೆಗಳು ಗ್ರಾನೈಟ್ ಮತ್ತು ನೈಸ್ ಶಿಲಾ ಪ್ರದೇಶಗಳಲ್ಲಿ ಉದ್ದವಾದ ಮೊನಚಾದ ಏರಿಯಂತಿರುವ ಡೈಕ್‌ಗಳಾಗಿರುತ್ತವೆ. ಇವುಗಳ ಸ್ವಾಭಾವಿಕ ಬಿರುಕು ರಚನೆಯಿಂದಲೂ, ವರ್ತುಲಾಕಾರದ ಅಥವಾ ಗೋಳಾಕೃತಿಯ ಶಿಥಿಲತೆಯಿಂದಲೂ ಈ ಶಿಲೆಗಳನ್ನು ತೆಳುವಾದ ಚಪ್ಪಡಿಗಳಾಗಿ ವಿಂಗಡಿಸಲಾಗುವುದಿಲ್ಲ. ಈ ಶಿಲಾವರ್ಗಗಳ ತುಣುಕುಗಳನ್ನು ಅಲಂಕಾರಿಕ ನೆಲಹಾಸು ಹಾಗೂ ಅಂಚುಗಳ (ಮಾರ್ಬಲ್ ಟೈಲ್ಸ್) ತಯಾರಿಕೆಗೆ ಉಪಯೋಗಿಸಬಹುದು. ಅಲಂಕಾರಿಕ ಕಂಬ, ದಿಂಡು, ಗದ್ದುಗೆ, ಸ್ಮಾರಕಶಿಲೆ, ಹೂವಿನ ಕುಂಡ, ಪೇಪರ್ ವೈಟ್‌ಗಳೇ ಮುಂತಾದ ವಸ್ತುಗಳ ತಯಾರಿಕೆಯಲ್ಲಿಯೂ ಉಪಯೋಗಿಸಬಹುದು. ಹಸಿರು ಕ್ವಾರ್ಟ್ಸೈಟ್ ಅಥವಾ ಕ್ರೋಮಿಯಂ ಅಭ್ರಕದಿಂದ ಕೂಡಿದ ಸಿಕತ ಪದರ ಶಿಲೆಯು ಕೃಷ್ಣರಾಜಪೇಟೆ ತಾಲೂಕಿನ ಮಲ್ಲೇನಹಳ್ಳಿಯ ಬಳಿ ಕಂಡುಬರುತ್ತವೆ. ಫೆಲ್ಸೈಟ್ ಮತ್ತು ಪಾರ್ಫಿರಿಗಳಂತೆಯೇ ಈ ಶಿಲೆಯನ್ನು ದೊಡ್ಡ ಚಪ್ಪಡಿಗಳನ್ನಾಗಿ ಹೊರತೆಗೆಯಲು ಸಾಧ್ಯವಾಗುವುದಿಲ್ಲ. ಈ ಶಿಲೆಯನ್ನು ಅಲಂಕಾರಿಕ ಕೆತ್ತನೆ ಕಾರ್ಯ ಮತ್ತು ಅಲಂಕಾರಿಕ ವಸ್ತುಗಳ ತಯಾರಿಕೆಯಲ್ಲಿಯೂ ಉಪಯೋಗಿಸಬಹುದು.

**ಬೆರಿಲ್ :** ಜಿಲ್ಲೆಯ ಮೇಲುಕೋಟೆಯಲ್ಲಿ ಮತ್ತು ಅದಕ್ಕೂ ದಕ್ಷಿಣದಲ್ಲಿ ಪೆಗ್ಮಟೈಟ್ ದೊರೆಯುವ ಕೆಲವು ಸ್ಥಳಗಳಲ್ಲಿಯೂ ಹಳದಿ ಮಿಶ್ರಿತ ಹಸಿರು ಛಾಯೆಯ ಬೆರಿಲ್ ಹರಳುಗಳು ದೊರಕಿವೆ. ಇವುಗಳಲ್ಲೆಲ್ಲಾ ಉತ್ತಮವಾದವೆಂದರೆ ಕೃಷ್ಣರಾಜಸಾಗರಕ್ಕೆ ಉತ್ತರದಲ್ಲಿರುವ ಕಟ್ಟೇರಿ ಮತ್ತು ಚಿಕ್ಕಯಾರಳ್ಳಿಯ ನಿಕ್ಷೇಪಗಳು. ಈ ಹರಳುಗಳು ಬಿಳಿ, ಹಸಿರು, ನೀಲಿ, ಮತ್ತು ಅಚ್ಚ ನೀಲಿಯ ಬಣ್ಣಗಳನ್ನು ಹೊಂದಿರುತ್ತವೆ. ಪಾಂಡವಪುರ ತಾಲೂಕಿನ ಬೇಬಿಗ್ರಾಮ ಮತ್ತು ಲಿಂಗನಕೊಪ್ಪಗಳ ಬಳಿ ಬೆರಿಲ್ ಹರಳುಗಳು ದೊರೆತಿರುವುದಾಗಿ ವರದಿಯಾಗಿದೆ. ಕೃಷ್ಣರಾಜಪೇಟೆ ತಾಲೂಕಿನ ಕುರುಬರ ಮಂಚೇನಹಳ್ಳಿ ಮತ್ತು ರಾಗಿಮುದ್ದನಹಳ್ಳಿ ಪ್ರದೇಶಗಳಲ್ಲಿ ನಸು ಹಸುರು ಛಾಯೆಯ ಕೆಲವು ಬೆರಿಲ್ ಹರಳುಗಳು ದೊರೆತಿರುವುದಾಗಿ ತಿಳಿದುಬಂದಿದೆ.

**ಮ್ಯಾಗ್ನಟೈಟ್:** ಹಿಂದೆ ಕಬ್ಬಿಣದ ಅದುರನ್ನು ದೇಶೀಯ ಕುಲುಮೆಗಳಲ್ಲಿ ಕರಗಿಸಿ ಬೀಡು ಕಬ್ಬಿಣವನ್ನು, ಉಕ್ಕನ್ನು ಪಡೆಯುತ್ತಿದ್ದುದು ತಿಳಿದುಬಂದಿದೆ. ಮದ್ದೂರು ಹಾಗೂ ಮಳವಳ್ಳಿ ಪ್ರದೇಶಗಳ ಕೆಲವು ಭಾಗಗಳಲ್ಲಿ ಕಬ್ಬಿಣವನ್ನು ಕರಗಿಸಿದ್ದ ಕಿಟ್ಟಗಳು ಸಣ್ಣ ಸಣ್ಣ ಗುಡ್ಡಗಳಂತೆ ರಾಶಿ ಬಿದ್ದಿರುವುದು ಕಂಡು ಬರುತ್ತದೆ. ಪಾಶ್ಚಾತ್ಯ ದೇಶಗಳಿಂದ ಉತ್ತಮ ದರ್ಜೆಯ ಕಬ್ಬಿಣ ಮತ್ತು ಉಕ್ಕಿನ ವಸ್ತುಗಳು ಸುಲಭ ದರದಲ್ಲಿ ಆಮದಾಗಿ ಬಂದು ಮಾರುಕಟ್ಟೆಗಳಲ್ಲಿ ಹೇರಳವಾಗಿ ದೊರಕುತ್ತಿದ್ದುದರಿಂದ ದೇಶೀಯ ಕಬ್ಬಿಣ ಮತ್ತು ಉಕ್ಕು ತಯಾರಿಕೆಯು ಸ್ಥಗಿತಗೊಂಡಿತು.

**ಅಭ್ರಕ:** ಪೊಟ್ಯಾಷಿಯಂ ಮತ್ತು ಅಲ್ಯೂಮಿನಿಯಂ ಸಿಲಿಕೇಟುಗಳಿಂದ ಕೂಡಿದ, ಅಭ್ರಕವು(ಕಾಗೆಬಂಗಾರ) ಅನೇಕ ಶಿಲಾವರ್ಗಗಳಲ್ಲಿ ಕಂಡು ಬರುವ ಅಗ್ಗದ ಲೋಹವಾಗಿದೆ. ಸಣ್ಣ ಎಸಳುಗಳ ರೂಪದಲ್ಲಿಯೂ ಹಾಗೂ ಹಾಳೆಗಳ ರೂಪದಲ್ಲಿಯೂ ಇದು ಕಂಡು ಬರುತ್ತದೆ. ಗ್ರಾನಿಟಿಕ್ ನೈಸ್ ಶಿಲೆಯೊಂದಿಗಿರುವ ಪೆಗ್ಮಟೈಟ್ ಪ್ರದೇಶಗಳಲ್ಲಿ ಇದು ಹಾಳೆಗಳಂತೆ ಇರುವುದು ಕಂಡು ಬಂದಿದೆ. ಕೃಷ್ಣರಾಜಸಾಗರದ ಸಮೀಪ ಇರುವ ಉಂದವಾಡಿ ಮತ್ತು ಪಾಂಡವಪುರ ತಾಲೂಕಿನ ವಡೆಸಮುದ್ರದ ಬಳಿ ಅಭ್ರಕದ ನಿಕ್ಷೇಪಗಳಿವೆ.

**ವರ್ಮಿಕ್ಯುಲೈಟ್:** ವರ್ಮಿಕ್ಯುಲೈಟ್ ಖನಿಜ ನಿಕ್ಷೇಪವು ಮೇಲುಕೋಟೆ ಹಾಗೂ ಕೃಷ್ಣರಾಜಪೇಟೆ ಪ್ರದೇಶಗಳಲ್ಲಿ ಕಂಡು ಬರುತ್ತದೆ. ಇದು ಹಾರ್ನಬ್ಲೆಂಡ್ ಮತ್ತು ಬಯೋಟೈಟ್ ಪದರಶಿಲೆಗಳ ಮಸೂರಾಕಾರದ ಮಡಿಗಳನ್ನೊಳಗೊಂಡು ಅಧಿಕ ಪ್ರಮಾಣದಲ್ಲಿ ಶಿಥಿಲವಾಗಿರುವ ಬಯೋಟೈಟ್ ಗ್ರಾನೈಟ್ ಶಿಲಾಹರವುಗಳಲ್ಲಿ ಮತ್ತು ಇವೆರಡೂ ಶಿಲಾವರ್ಗಗಳ ಸಂಪರ್ಕ ಪ್ರದೇಶಗಳಲ್ಲಿ ಕಂಡು ಬಂದಿದೆ.

**ಶಿಲಾಸ್ಫಟಿಕ :** ಸ್ವಚ್ಛವಾಗಿ ಪಾರದರ್ಶಕವಾಗಿರುವ ಶಿಲಾಸ್ಫಟಿಕಗಳು ಮೇಲುಕೋಟೆ ಪ್ರದೇಶದಲ್ಲಿ ಕಣಶಿಲೆಗಳ ಟೊಳ್ಳುಗಳಲ್ಲಿ ಮಿತ ಪಾರದರ್ಶಕ ಉರುಟುಕಲ್ಲುಗಳಂತೆ ಅಲ್ಲಲ್ಲಿ ಗುಂಪುಗೊಂಡು ಹರಡಿರುವುದಾಗಿ ತಿಳಿದು ಬಂದಿದೆ. ಇವುಗಳನ್ನು ಸಾಣೆ ಹಿಡಿದು ಮೆರುಗಿಟ್ಟರೆ ವಜ್ರದಂತೆ ಹೊಳೆಯುವ ಸಾಧಾರಣ ರತ್ನಗಳಾಗುತ್ತವೆ.

**ಚಿನ್ನ :** ಕೃಷ್ಣರಾಜಪೇಟೆಯ ಪಶ್ಚಿಮಕ್ಕಿರುವ ಬೆಳ್ಳಿ ಬೆಟ್ಟದ ಬಳಿಯ ವಳಗೆರೆ ಪ್ರದೇಶದಲ್ಲಿ ೧೮೮೨ ರಿಂದ ೧೯೧೩ರ ಅವಧಿಯಲ್ಲಿ ಚಿನ್ನದ ಶೋಧಕ್ಕಾಗಿ ಗಣಿಗಾರಿಕೆ ನಡೆದು ಸುಮಾರು ೪೦ ಮೀಟರ್ ಆಳಕ್ಕೆ ಗಣಿಯನ್ನು ತೋಡಿರುವ ವಿಷಯ ತಿಳಿದುಬರುತ್ತದೆ. ಒಂದು ಟನ್ ಅದಿರಿಗೆ ಸುಮಾರು ಐದು ಗ್ರಾಂ ಚಿನ್ನವು ಸಿಕ್ಕಿರುವುದಾಗಿ ತಿಳಿದುಬಂದಿದೆ. ಆದರೆ ಈ ಪ್ರದೇಶದ ಒಟ್ಟು ಚಿನ್ನದ ಅದಿರಿನ ಪ್ರಮಾಣದ ಅಂದಾಜು ತಿಳಿದುಬಂದಿಲ್ಲ. ನಾಗಮಂಗಲದ ದಕ್ಷಿಣಭಾಗದಲ್ಲಿ ಶ್ರೀರಂಗಪಟ್ಟಣದ ಹುಂಜನಕೆರೆ ಬಳಿ ಮತ್ತು ಬನ್ನೂರಿನ ಉತ್ತರಕ್ಕಿರುವ ಬೂತಗನಹಳ್ಳಿಯಲ್ಲಿಯೂ ಚಿನ್ನದ ಶೋಧ ಕಾರ್ಯವು ನಡೆದಿದ್ದು, ಅಲ್ಲಿ ಅಲ್ಪ ಪ್ರಮಾಣದ ಚಿನ್ನವಿರುವುದು ಪತ್ತೆಯಾಗಿದೆ.

**ಕಬ್ಬಿಣದ ಅದಿರು :** ಮದ್ದೂರು ಮತ್ತು ಮಳವಳ್ಳಿ ತಾಲೂಕುಗಳ ಹುಣಸೂರು, ಹುಲ್ಲಹಳ್ಳಿ, ಕರಾಳುಕಟ್ಟೆ, ಚಟ್ಟನಹಳ್ಳಿ, ಬೊಮ್ಮನಾಯಕನಹಳ್ಳಿ ಮತ್ತು ಅರಳಾಪುರ ಮೊದಲಾದ ಕಡೆ ಬೆಣಚು ಮ್ಯಾಗ್ನಟೈಟ್ ಪದರಗಳು ವಿಸ್ತಾರವಾಗಿ ಹರಡಿವೆ. ಈ ಪದರು ಶಿಲೆಗಳ ಕೆಲವು ಭಾಗಗಳಲ್ಲಿ ಮ್ಯಾಗ್ನಟೈಟ್ ಅದಿರಿನ ಸಂಗ್ರಹಗಳೂ ಇವೆ. ಇವುಗಳಲ್ಲಿಯ ಅದಿರನ್ನು ೬೦ ಮೆಶ್ ಪ್ರಮಾಣಕ್ಕೆ ಪುಡಿ ಮಾಡಿ ಸಂಸ್ಕರಿಸಿದಾಗ ಸಾಂದ್ರತೆಯಲ್ಲಿ ಶೇಕಡಾ ೬೬.೩೭ ಭಾಗ ಕಬ್ಬಿಣಾಂಶವೂ, ಶೇಕಡಾ ೮.೩೬ ಘನಶೇಷ ಇರುವುದೂ ಕಂಡುಬಂದಿದೆ. ಈ ನಿಕ್ಷೇಪಗಳ ಒಟ್ಟು ಪ್ರಮಾಣ ಸುಮಾರು ೪೧.೪೭ ದಶಲಕ್ಷ ಟನ್ನುಗಳು

**ಕೊರಂಡಂ (ಕುರಂದ) :** ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲೂಕಿನ ಕುಪ್ಯದಿಂದ ಮಂಡ್ಯದವರೆಗೆ ಉತ್ತರ–ದಕ್ಷಿಣಾಭಿಮುಖವಾಗಿ ಸುಮಾರು ೩೦ ಕಿ.ಮೀ. ಉದ್ದದ ಪಟ್ಟಿಯಲ್ಲಿ, ಕೆಂಪು ಬಣ್ಣದ ಕುರಂದದ ತುಣುಕುಗಳು ದೊರೆಯುತ್ತವೆ. ಇದರ ಪ್ರಮುಖ ನಿಕ್ಷೇಪಗಳು ಮಂಡ್ಯ ಬಳಿಯ ಸಾತನೂರು, ಯರೆಹಳ್ಳಿ, ಕಿರಂಗೂರು ಮತ್ತು ರಾಮನಹಳ್ಳಿ ಪ್ರದೇಶಗಳಲ್ಲಿವೆ. ರಾಮನಗರ ಸಮೀಪದಿಂದ ಮಳವಳ್ಳಿಯವರೆಗೆ ಸುಮಾರು ೬೦ ಕಿ.ಮೀ. ಉದ್ದಕ್ಕೆ ಹರಡಿರುವ ಕುರಂದದ ವಲಯದಲ್ಲಿ ಬರುವ ಮದ್ದೂರು ಮತ್ತು ಮಳವಳ್ಳಿ ಬಳಿಯೂ ಕುರಂದದ ನಿಕ್ಷೇಪಗಳಿವೆ,

**ಚೈನಾಕ್ಲೇ (ಪಿಂಗಾಣಿ ಮಣ್ಣು) :** ಮೇಲುಕೋಟೆ ಸಮೀಪದಲ್ಲಿ ಹರಡಿರುವ ಶಿಥಿಲಗೊಂಡಿರುವ ಕೆಲವು ಕಣಶಿಲೆಗಳಲ್ಲಿ ಅಚ್ಚ ಬಿಳಿಯ ಜೇಡಿನ (ಪಿಂಗಾಣಿ) ಸಣ್ಣ ಸಣ್ಣ ಮಡಿಗಳಿರುವುದು ಕಂಡುಬಂದಿದೆ. ಇದನ್ನು ಸ್ಥಳೀಯರು ಧಾರ್ಮಿಕ ಕಾರ್ಯಗಳಿಗೆ ಬಳಸುವುದಾಗಿ ತಿಳಿದುಬರುತ್ತದೆ.

**ಭೂಕಂಪಗಳು :** ಜಿಲ್ಲೆಯು ಬಹುತೇಕ ಭೂಕಂಪ ಮುಕ್ತ ವಲಯವಾಗಿದೆ. ಆದರೂ ಅಲ್ಪ ಪ್ರಮಾಣದಲ್ಲಿ ಭೂಕಂಪವಾದುದರ ಬಗ್ಗೆ ವರದಿಗಳು, ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ, ಮಾರ್ಚ್ ೧೯೬೭, ನವೆಂಬರ್ ಮತ್ತು ಡಿಸೆಂಬರ್ ೧೯೬೮, ಆಗಸ್ಟ್ ೧೯೬೯, ಜನವರಿ ೧೯೭೦, ಸೆಪ್ಟೆಂಬರ್ ೧೯೭೦, ಜನವರಿ ೧೯೭೧, ಮಾರ್ಚ್ ೧೯೭೧, ಮೇ ೧೯೭೧ ಮತ್ತು ಮೇ ೧೯೭೨ ರಂದು ದಾಖಲಾಗಿವೆ. ದೊಡ್ಡೇಗೌಡನ ಕೊಪ್ಪಲಲ್ಲಿ ೧೬ನೇ

ಮೇ ೧೯೭೨ ರಂದು ರಿಕ್ಟರ್ ಮಾಪನದಲ್ಲಿ ೪.೨ ರಿಂದ ೪.೫ರ ಪ್ರಮಾಣದ ಭೂಕಂಪನವು ದಾಖಲಾಗಿದ್ದು, ಈ ಭೂಕಂಪನವು ಜಿಲ್ಲೆಯಲ್ಲಿ ದಾಖಲಾದ ಭೂಕಂಪನಗಳಲ್ಲಿ ಪ್ರಮುಖವಾದುದಾಗಿದೆ.

## ಭೂಮಿಯ ಮೇಲ್ಮೈ ಲಕ್ಷಣಗಳು

ಜಿಲ್ಲೆಯ ಭೂ ಭಾಗವು ದಕ್ಷಿಣ ಪ್ರಸ್ಥಭೂಮಿಗೆ ಸೇರಿದ್ದು ಬಹುತೇಕ ಸಮತಟ್ಟಾದ ಬಯಲುಗಳಿಂದ ಕೂಡಿದೆ. ಅಲ್ಲಲ್ಲಿ ಕೆಲವು ಪ್ರಮುಖ ಬೆಟ್ಟ ಗುಡ್ಡಗಳಿವೆ. ಈ ಪ್ರದೇಶವು ಸಮುದ್ರ ಮಟ್ಟದಿಂದ ಸರಾಸರಿ ೭೬೦ ರಿಂದ ೯೨೦ ಮೀಟರುಗಳಷ್ಟು ಎತ್ತರದಲ್ಲಿದೆ. ಬಿಳಿಗಿರಿರಂಗನ ಬೆಟ್ಟದ ಸಾಲಿನಿಂದ ಮುಂದುವರಿದ ಗಿರಿ ಶ್ರೇಣಿಯೇ, ಜಿಲ್ಲೆಯ ಮಳವಳ್ಳಿ ತಾಲೂಕಿನ ಪೂರ್ವದ ಅಂಚಿನಲ್ಲಿ ಹರಡಿಕೊಂಡಿರುವ ಏಕೈಕ ಪ್ರಮುಖ ಪರ್ವತ ಶ್ರೇಣಿಯಾಗಿದೆ. ಶಿವಸಮುದ್ರದ ಬಳಿ ಕಾವೇರಿ ನದಿಯು ಈ ಶ್ರೇಣಿಯನ್ನು ಭೇದಿಸಿ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳನ್ನು ಸೃಷ್ಟಿಸಿದೆ. ಪಾಂಡವಪುರ, ತೊಣ್ಣೂರು, ಮೇಲುಕೋಟೆ, ನಾರಾಯಣದುರ್ಗ ಮತ್ತು ಬಸವನಕಲ್ಲು ಬೆಟ್ಟಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ. ಜಿಲ್ಲೆಯ ದಕ್ಷಿಣದ ಅಂಚಿನಲ್ಲಿ ಹುಲಿಕೆರೆ ಮತ್ತು ಕರಿಘಟ್ಟ ಬೆಟ್ಟಗಳ ಶ್ರೇಣಿಯು ಗಮನ ಸೆಳೆಯುತ್ತದೆ. ಕೃಷ್ಣರಾಜಪೇಟೆ ಮತ್ತು ನಾಗಮಂಗಲ ತಾಲೂಕುಗಳಲ್ಲಿಯೂ ಸಹ ಅಲ್ಲಲ್ಲಿ ಸಣ್ಣ ಬೆಟ್ಟಗುಡ್ಡಗಳನ್ನು ಕಾಣಬಹುದು. ಅವುಗಳಲ್ಲಿ ಚುಂಚನಗಿರಿಯು ಪ್ರಮುಖವಾಗಿದೆ. ಈ ಬೆಟ್ಟ ಶ್ರೇಣಿಗಳನ್ನು ಹೊರತುಪಡಿಸಿದಲ್ಲಿ ಉಳಿದ ಪ್ರದೇಶವು ನಯವಾದ ಏರಿಳಿತಗಳಿಂದ ಕೂಡಿದ ಬಯಲು ಪ್ರದೇಶವಾಗಿದೆ.

ಜಿಲ್ಲೆಯ ಗಡಿಯಲ್ಲಿರುವ ನೆರೆಯ ಕನಕಪುರ ತಾಲೂಕಿನ ಕಬ್ಬಾಳದುರ್ಗ ಬೆಟ್ಟ (ಸಮುದ್ರಮಟ್ಟದಿಂದ ೧,೦೬೩ಮೀ ಅಥವಾ ೩,೫೦೭ ಅಡಿಗಳು) ಪ್ರಮುಖವಾಗಿದೆ. ಈ ಬೆಟ್ಟದ ಒಂದು ಪಾರ್ಶ್ವ ಕಡಿದಾಗಿದ್ದು, ಇನ್ನೊಂದು ಭಾಗದಿಂದ ಈ ಬೆಟ್ಟವನ್ನು ಏರಬಹುದು. ಕರಿಘಟ್ಟ (ಸಮುದ್ರ ಮಟ್ಟದಿಂದ ೭೨೬ ಮೀ./೨,೯೯೭ ಅಡಿಗಳು) ಬೆಟ್ಟವು ಶ್ರೀರಂಗಪಟ್ಟಣಕ್ಕೆ ಸಮೀಪದಲ್ಲಿದೆ. ಮೇಲುಕೋಟೆ (ಸಮುದ್ರ ಮಟ್ಟದಿಂದ ೧,೦೮೮ ಮೀ/ ೩,೫೮೯ ಅಡಿಗಳು) ಯ ಗ್ರಾನೈಟ್ ಬೆಟ್ಟವು ಒಂದು ಪ್ರಮುಖ ಪ್ರವಾಸೀ ಆಕರ್ಷಣೆಯಾಗಿದ್ದು, ಯದುಗಿರಿ ಎಂದೂ ಕರೆಯಲ್ಪಟ್ಟಿದೆ. ಸಿಂಧಘಟ್ಟದ ಬಳಿಯ ನಾರಾಯಣದುರ್ಗ ಬೆಟ್ಟವು ಸಮುದ್ರ ಮಟ್ಟದಿಂದ ೧,೦೮೮ ಮೀ/ ೩,೫೮೯ ಅಡಿಗಳಷ್ಟು ಎತ್ತರವಾಗಿದೆ.

ಜಿಲ್ಲೆಯಲ್ಲಿ ಉನ್ನತ ಶಿಖರ ಶ್ರೇಣಿಗಳಿಲ್ಲದಿದ್ದರೂ ಪೂರ್ವದ ಅಂಚಿನ ಬೆಟ್ಟಸಾಲಿನ ಮುಂದುವರಿದ ಭಾಗ ಮತ್ತು ಅವುಗಳ ಚಾಚನ್ನೂ ಕಾಣಬಹುದು. ಜಿಲ್ಲೆಯ ಪ್ರದೇಶದ ಭೂದೃಶ್ಯವು ಸಾಧಾರಣ ಏರುತಗ್ಗುಗಳಿಂದ ಕೂಡಿದೆ. ಮೃದು ಶಿಲಾಭಾಗಗಳು ಹಳ್ಳಗಳ ಕೊರೆತದಿಂದ ಸವೆದಿದ್ದು, ಸೀಳುಗಳು ಮತ್ತು ಬಿರುಕುಗಳಿಂದ ಏರುತಗ್ಗುಗಳ ವ್ಯತ್ಯಾಸವು ಹೆಚ್ಚಾಗಿದೆ. ನಡುನಡುವೆ ಗ್ರಾನೈಟ್ ಶಿಲಾ ರಚನೆಯ ಬೋಳು ಬಂಡೆಗಳ ಭೂಪ್ರದೇಶವನ್ನೂ ಕಾಣಬಹುದು. ಹಲವೆಡೆ ಮಂದಗತಿಯಲ್ಲಿ ಹರಿಯುವ ಕಾವೇರಿಯು ಇಲ್ಲಿನ ಬಯಲು ಪ್ರದೇಶಕ್ಕೆ ನಯವಾದ ಏರಿಳಿತವನ್ನು ಒದಗಿಸಿದೆ.

### ಜಲಸಂಪನ್ಮೂಲಗಳು

ಜಿಲ್ಲೆಯಲ್ಲಿ – ೧. ಕಾವೇರಿ, ೨. ಶಿಂಷಾ ಮತ್ತು ೩. ಲೋಕಪಾವನಿ ನದೀ ಜಲಾನಯನಗಳಿದ್ದು, ಅನೇಕ ಹಳ್ಳ ಮತ್ತು ತೊರೆಗಳು ಈ ನದಿಗಳನ್ನು ಸೇರುತ್ತವೆ. ಕಾವೇರಿ, ಹೇಮಾವತಿ, ಲೋಕಪಾವನಿ, ಶಿಂಷಾ ಮತ್ತು ವೀರವೈಷ್ಣವಿ ಜಿಲ್ಲೆಯ ಪ್ರಮುಖ ನದಿಗಳಾಗಿವೆ. ಬಿಂಡೇನಹಳ್ಳಿ ತೊರೆ, ಅಮೃತೂರು ತೊರೆ, ನಿಡಶಾಲೆ ತೊರೆ, ಹಂದಿಹಳ್ಳ, ಹೆಬ್ಬಳ್ಳ ಹಾಗೂ ಭೀಮಾ ಮುಖ್ಯವಾದ ತೊರೆಗಳು. ಜಿಲ್ಲೆಯ ಜಲಸಂಪನ್ಮೂಲಗಳನ್ನು ಬಳಸಿಕೊಂಡು ಈವರೆಗೆ ಜಿಲ್ಲೆಯಲ್ಲಿ ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ೧.೪೩ ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ

ಒದಗಿಸಲಾಗಿದೆ. ಜಿಲ್ಲೆಯಲ್ಲಿರುವ ಒಟ್ಟು ಜಲಾಶಯಗಳ ಜಲಾವೃತ ಪ್ರದೇಶವು ೧೪,೭೩೫ ಹೆಕ್ಟೇರ್‌ಗಳಾಗಿದ್ದು, ಇದರಲ್ಲಿ ಕೃಷ್ಣರಾಜಸಾಗರವು ೧೨,೯೨೪ ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿದೆ(ಮುಳುಗಡೆಯಾದ ಪ್ರದೇಶ). ಜಿಲ್ಲೆಯಲ್ಲಿ ೨೨೪ ದೊಡ್ಡಕೆರೆಗಳಿದ್ದು ಅವುಗಳ ಜಲಾವೃತ ಪ್ರದೇಶ ೯,೭೭೯ ಹಕ್ಟೇರ್‌ಗಳಾಗಿವೆ. ಜಿಲ್ಲೆಯಲ್ಲಿರುವ ೫೯೬ ಸಣ್ಣ ಕೆರೆಗಳ ಜಲಾವೃತ ಪ್ರದೇಶವು ೧,೭೩೩ ಹೆಕ್ಟೇರ್‌ಗಳಾಗಿವೆ. ಜಿಲ್ಲೆಯ ಭೂ ಪ್ರದೇಶವು ಪೂರ್ವದೆಡೆ ಇಳಿಜಾರಾಗಿದ್ದು, ನದಿಯ ನೀರು ಬಂಗಾಳಕೊಲ್ಲಿಗೆ ಸೇರುತ್ತದೆ.

**ಕಾವೇರಿ :** ಜಿಲ್ಲೆಯ ಮುಖ್ಯ ನದಿಯಾದ ಕಾವೇರಿಯು ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನಲ್ಲಿ ಭಾಗಮಂಡಲ ಸಮೀಪ ಬ್ರಹ್ಮಗಿರಿ ಬೆಟ್ಟದ ತಲಕಾವೇರಿಯಲ್ಲಿ ಉಗಮಿಸಿ ಹಾಸನ ಹಾಗೂ ಮೈಸೂರು ಜಿಲ್ಲೆಗಳ ಮೂಲಕ ಹರಿದು, ಕೃಷ್ಣರಾಜಸಾಗರದಲ್ಲಿ ಹೇಮಾವತಿಯನ್ನು ತನ್ನೊಡಲಿಗೆ ಸೇರಿಸಿಕೊಳ್ಳುತ್ತದೆ. ನಂತರ ಕಾವೇರಿ ನದಿಯು ಶ್ರೀರಂಗಪಟ್ಟಣ ತಾಲೂಕನ್ನು ಪ್ರವೇಶಿಸಿ ಪಾಂಡವಪುರ ಹಾಗೂ ಶ್ರೀರಂಗಪಟ್ಟಣ ತಾಲೂಕಗಳ ಗಡಿ ರೇಖೆಯಂತೆ ಪೂರ್ವಾಭಿಮುಖವಾಗಿ ಹರಿಯುತ್ತದೆ. ಮುಂದೆ ರಂಗನತಿಟ್ಟು ಮತ್ತು ಶ್ರೀರಂಗಪಟ್ಟಣ ದ್ವೀಪಗಳನ್ನು ಬಳಸಿ ಮಹದೇವಪುರದ ಬಳಿ ಆಗ್ನೇಯಾಭಿಮುಖವಾಗಿ ಹರಿದು ತಿರುಮಕೂಡಲು ನರಸೀಪುರ ತಾಲೂಕನ್ನು ಪ್ರವೇಶಿಸುತ್ತದೆ. ಅಲ್ಲಿಂದಾಚೆಗೆ ಇದು ಜಿಲ್ಲೆಯ ಆಗ್ನೇಯ ಅಂಚಿನಲ್ಲಿ ಮಳವಳ್ಳಿ ಮತ್ತು ಕೊಳ್ಳೇಗಾಲ ತಾಲೂಕುಗಳ ಗಡಿಯಾಗಿ ಹರಿಯುತ್ತದೆ. ಈ ನದಿಯು ಮಳವಳ್ಳಿ ತಾಲೂಕಿನ ಆಗ್ನೇಯದ ಅಂಚಿನಲ್ಲಿ ಬೆಳಕವಾಡಿಯ ಬಳಿ ಇಬ್ಭಾಗವಾಗಿ ಶಿವಸಮುದ್ರ ದ್ವೀಪವನ್ನು ಸೃಷ್ಟಿಸುತ್ತದೆ. ಇಲ್ಲಿ ಇಕ್ಕಟ್ಟಾದ ಕಂದರದ ಮೂಲಕ ಹರಿದು ಸುಮಾರು ೯೨ ಮೀ ಎತ್ತರದಿಂದ ಗಗನಚುಕ್ಕಿ ಮತ್ತು ಭರಚುಕ್ಕಿಗಳೆಂಬ ಜಲಪಾತಗಳಾಗಿ ಧುಮುಕುತ್ತದೆ. ಮತ್ತೆ ಒಂದುಗೂಡಿ ಪೂರ್ವಗಾಮಿಯಾಗಿ ಕೊಳ್ಳೇಗಾಲ ತಾಲೂಕಿನ ಈಶಾನ್ಯ ಮೂಲೆಯಲ್ಲಿ ಹೊಗೇನಕಲ್ ಜಲಪಾತವಾಗಿ ರೂಪುಗೊಳ್ಳುತ್ತದೆ. ಮಹದೇಶ್ವರ ಬೆಟ್ಟಶ್ರೇಣಿಯ ಆಗ್ನೇಯ ಅಂಚಿನಲ್ಲಿ ಬೋಡಮಲೈ ಬೆಟ್ಟದ ಬಳಿ ರಾಜ್ಯದ ಎಲ್ಲೆಯನ್ನು ಬಿಟ್ಟು ತಮಿಳುನಾಡನ್ನು ಹಸಿರಾಗಿಸಿ ಮುಂದೆ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಪಶ್ಚಿಮ ಘಟ್ಟದಲ್ಲಿ ವಿಶೇಷ ಮಳೆಯಾಗುವುದರಿಂದ, ಆ ಕಾಲದಲ್ಲಿ ಕಾವೇರಿಯು ತುಂಬಿ ಹರಿಯುತ್ತದೆ.

ಕಾವೇರಿ ನದಿಗೆ ಅಡ್ಡಲಾಗಿ ಅನೇಕ ಅಣೆಕಟ್ಟುಗಳನ್ನು ಕಟ್ಟಿ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ನದಿಯ ಇಕ್ಕೆಲಗಳಲ್ಲಿರುವ ವಿಶಾಲ ಮೆಕ್ಕಲು ಹರವುಗಳಿಗೆ ನೀರಾವರಿ ಸೌಕರ್ಯವೂ ಇರುವುದರಿಂದ ಈ ಭಾಗದಲ್ಲಿ ಸಮೃದ್ಧ ಬೆಳೆಯಾಗುತ್ತದೆ. ಕೃಷ್ಣರಾಜಸಾಗರ ಅಣೆಕಟ್ಟನ್ನು ಬಿಟ್ಟರೆ ಉಳಿದವೆಲ್ಲಾ ಚಿಕ್ಕ ಅಣೆಕಟ್ಟುಗಳು. ಕೃಷ್ಣರಾಜಸಾಗರದಿಂದ ಕೇವಲ ಮೂರು ಕಿ.ಮೀ ಕೆಳಗೆ ಸೀತಾಪುರದ ಬಳಿ ಮಾಡದಕಟ್ಟೆ ಇದೆ. ಈ ಚಿಕ್ಕ ಅಣೆಕಟ್ಟಿನಿಂದ ಎಡದಂಡೆಯಲ್ಲಿ ಹೊರಡುವ ಚಿಕ್ಕದೇವರಾಯನಾಲೆ ಮಂಡ್ಯ ಮತ್ತು ಮೈಸೂರು ಜಿಲ್ಲೆಯ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿದೆ. ಮಾಡದಕಟ್ಟೆಯಿಂದ ಕೆಲವೇ ಮೀಟರುಗಳ ಕೆಳಗೆ ದೇವರಾಯ ಅಣೆಕಟ್ಟಿದೆ. ಮತ್ತಷ್ಟು ಕೆಳಗೆ ಬೆಳಗೊಳದಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿ ಬಲಮುರಿ ಅಣೆಕಟ್ಟಿದೆ. ಇಲ್ಲಿಂದ ಹೊರಡುವ ವಿರಿಜಾ ನಾಲೆ ಸು.೬೦ ಕಿ.ಮೀ.ಉದ್ದವಿದ್ದು, ಮಂಡ್ಯ ಮತ್ತು ಮೈಸೂರು ಜಿಲ್ಲಾ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಿದೆ. ಅಲ್ಲಿಂದ ಮುಂದೆ ಬಂಗಾರದೊಡ್ಡಿ ಅಣೆಕಟ್ಟಿದೆ. ಇದನ್ನು ಕಾವೇರಿಯಿಂದ ಕವಲಾದ ಪಶ್ಚಿಮವಾಹಿನಿಗೆ ಅಡ್ಡವಾಗಿ ನಿರ್ಮಿಸಲಾಗಿದೆ. ಕಾವೇರಿಯು ಕಟ್ಟೆಯ ಎಡದಂಡೆ ದಾಟಿ, ಶ್ರೀರಂಗಪಟ್ಟಣವನ್ನು ತಲುಪಿ, ಅಲ್ಲಿ ಮೂರು ಕವಲಾಗುತ್ತದೆ. ಶ್ರೀರಂಗಪಟ್ಟಣ ದ್ವೀಪದಿಂದ ಸ್ವಲ್ಪ ಕೆಳಗೆ ರಾಮಸ್ವಾಮಿ ಕಟ್ಟೆಯಿದೆ. ಇಲ್ಲಿಂದ ಎಡದಂಡೆಯಲ್ಲಿ ಹೊರಡುವ ರಾಮಸ್ವಾಮಿ ನಾಲೆ ಸು.೫೦ ಕಿ.ಮಿ. ಹಾಗೂ ಬಲದಂಡೆಯ ರಾಜಪರಮೇಶ್ವರಿ ನಾಲೆ ಸು.೩೦ ಕಿ.ಮೀ. ಉದ್ದವಿದ್ದು, ಮಂಡ್ಯ ಮತ್ತು ಮೈಸೂರು ಜಿಲ್ಲಾ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಿದೆ. ಶಿವಸಮುದ್ರದ ವಿದ್ಯುದುತ್ಪಾದನಾ ಕೇಂದ್ರಕ್ಕೆ ನೀರೊದಗಿಸುವ ಸಲುವಾಗಿ ಜಲಪಾತದಿಂದ ಸ್ವಲ್ಪ ಮೇಲೆ ಚಿಕ್ಕ ಅಣೆಕಟ್ಟನ್ನೂ ಕಟ್ಟಲಾಗಿದೆ.

**ಹೇಮಾವತಿ :** ಕಾವೇರಿ ನದಿಯ ಪ್ರಮುಖ ಉಪನದಿಯಾದ ಹೇಮಾವತಿಗೆ ಎಣ್ಣೆಹೊಳೆ ಎಂಬ ಹೆಸರೂ ಇದೆ. ಈ ನದಿಯು ಚಿಕ್ಕಮಗಳೂರಿನ ಮೂಡಿಗೆರೆ ತಾಲೂಕಿನಲ್ಲಿ ಮೆಲಬಂಗಾಡಿಯ ಜಾವಳಿಯ ಬಳಿ ಹುಟ್ಟಿ ದಕ್ಷಿಣಾಭಿಮುಖವಾಗಿ ಪರಿಯುತ್ತದೆ. ಮಂಡ್ಯ ಜಿಲ್ಲೆಯ ಪಶ್ಚಿಮದ ಅಂಚಿನಲ್ಲಿ ಇದು ಸ್ವಲ್ಪ ದೂರ ಹಾಸನ, ಮಂಡ್ಯ ಜಿಲ್ಲೆಗಳ ಗಡಿಯಾಗಿ ದಕ್ಷಿಣಾಭಿಮುಖವಾಗಿ ಪರಿಯುತ್ತದೆ. ನಂತರ ಕೃಷ್ಣರಾಜಪೇಟೆ ತಾಲೂಕಿನ ಗುಡ್ಡೆಹೊಸಹಳ್ಳಿಯ ಬಳಿ ಮಂಡ್ಯ ಜಿಲ್ಲೆಯನ್ನು ಪ್ರವೇಶಿಸಿ, ಉತ್ತರ ದಕ್ಷಿಣವಾಗಿ ಪರಿದು ಮುಂದೆ ಕೃಷ್ಣರಾಜಸಾಗರದ ನೈಋತ್ಯದಲ್ಲಿ ಕಾವೇರಿಯನ್ನು ಕೂಡಿಕೊಳ್ಳುತ್ತದೆ. ಈ ನದಿಗೆ ಕೃಷ್ಣರಾಜಪೇಟೆ ತಾಲೂಕಿನ ಮಂದಗೆರೆ ಹಾಗೂ ಹೇಮಗಿರಿ (ಬಂಡಿಹೊಳೆ)ಗಳ ಬಳಿ ಅಣೆಕಟ್ಟನ್ನು ನಿರ್ಮಿಸಲಾಗಿದೆ.

**ಲೋಕಪಾವನಿ :** ಲೋಕಪಾವನಿ ನದಿಯು ಕಾವೇರಿ ನದಿಯ ಇನ್ನೊಂದು ಉಪನದಿ. ಜಿಲ್ಲೆಯ ನಾಗಮಂಗಲ ತಾಲೂಕಿನ ಹೊಣಕೆರೆ ಹೋಬಳಿಯಲ್ಲಿ ಹುಟ್ಟಿ ಉತ್ತರ ದಕ್ಷಿಣಾಭಿಮುಖವಾಗಿ ನಾಗಮಂಗಲ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲೂಕುಗಳಲ್ಲಿ ಹರಿದು ಶ್ರೀರಂಗಪಟ್ಟಣದ ಸಂಗಮದ ಬಳಿ ಕಾವೇರಿ ನದಿಯನ್ನು ಸೇರುತ್ತದೆ. ಎಲ್ಲಾ ಕಾಲಗಳಲ್ಲೂ ಹರಿಯುವ ಈ ನದಿಯ ಅಗಲ ಸು. ೧೫೦ ಅಡಿಗಳಾಗಿದೆ. ಕಾವೇರಿಯನ್ನು ಸೇರುವ ಮೊದಲು ಈ ನದಿಗೆ ಮೋತಿತಲಾಬ್‌ನಿಂದ ಹರಿದು ಬರುವ ತೊರೆಯೊಂದು ಕೂಡಿಕೊಳ್ಳುತ್ತದೆ. ಈ ನದಿಗೆ ನಾಗಮಂಗಲ ತಾಲೂಕಿನ ಉಯ್ಯನಹಳ್ಳಿ ಬಳಿ ಹಾಗೂ ಮೇಲುಕೋಟೆ ಹೋಬಳಿಯ ಬೋಳೇನಹಳ್ಳಿ ಬಳಿ ಅಣೆಕಟ್ಟನ್ನು ಕಟ್ಟಲಾಗಿದೆ.

**ಶಿಂಷಾ :** ಕಾವೇರಿಯ ಇನ್ನೊಂದು ಉಪ ನದಿಯಾದ ಶಿಂಷಾ ನದಿಗೆ ಕದಂಬ, ಕಡಬಕೊಳ್ಳ ಎಂಬ ಹೆಸರುಗಳೂ ಇವೆ. ಈ ನದಿಯು ತುಮಕೂರು ಜಿಲ್ಲೆಯ ದೇವರಾಯನದುರ್ಗದ ದಕ್ಷಿಣ ಭಾಗದಲ್ಲಿ ಹುಟ್ಟಿ, ನೈಋತ್ಯದತ್ತ ಸಾಗಿ, ತುರುವೇಕೆರೆ ತಾಲೂಕನ್ನು ಪ್ರವೇಶಿಸಿ, ಅಲ್ಲಿಂದ ಆಗ್ನೇಯಾಭಿಮುಖವಾಗಿ ಕುಣಿಗಲ್ ತಾಲೂಕಿನ ಪಶ್ಚಿಮ ಭಾಗದಲ್ಲಿ ಹರಿಯುತ್ತದೆ. ನಂತರ ದಕ್ಷಿಣಾಭಿಮುಖವಾಗಿ ಪ್ರವಹಿಸಿ ಮದ್ದೂರು ತಾಲೂಕಿನ ವಾಯವ್ಯ ದಿಕ್ಕಿನಲ್ಲಿರುವ ಕಿರಂಗೂರಿನ ಬಳಿ ಮಂಡ್ಯ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಇದು ಮದ್ದೂರಿನ ಪಕ್ಕದಲ್ಲಿ ಹರಿಯುವುದರಿಂದ ಇದನ್ನು ಮದ್ದೂರು ಹೊಳೆ ಎಂದೂ ಕರೆಯುತ್ತಾರೆ. ಮದ್ದೂರು ತಾಲೂಕನ್ನು ದಾಟಿ ಆಗ್ನೇಯ ದಿಕ್ಕಿನಲ್ಲಿ ಹರಿದು ಮಳವಳ್ಳಿ ತಾಲೂಕನ್ನು ಪ್ರವೇಶಿಸಿ, ಧನಗೂರಿನ ಬಳಿ ಶಿಂಷಾ ಜಲಪಾತವನ್ನು ಸೃಷ್ಟಿಸಿ ಸ್ವಲ್ಪ ಮುಂದೆ ಕಾವೇರಿಯನ್ನು ಸೇರುತ್ತದೆ. ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುವ ಶಿಂಷಾ ನದಿಗೆ (ಹರಿವಿನ ಒಟ್ಟು ಉದ್ದ ೧೩೦ ಕಿ.ಮೀ.) ಶಿಂಷಾಪುರದ ಬಳಿ ೧೯೪೦ರಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಂಷಾ ವಿದ್ಯುತ್ ಉತ್ಪಾದನಾ ಕೇಂದ್ರ ದಲ್ಲಿ ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ. ಈ ನದಿಗೆ ತಗಹಳ್ಳಿ (ಮದ್ದೂರು ತಾಲೂಕು) ಬಳಿ ಅಣೆಕಟ್ಟನ್ನು ನಿರ್ಮಿಸಲಾಗಿದೆ.

**ವೀರವೈಷ್ಣವಿ :** ಶಿಂಷಾ ನದಿಯ ಉಪನದಿಯಾದ ಇದು ನಾಗಮಂಗಲ ತಾಲೂಕಿನ ಬೆಳ್ಳೂರು ಹೋಬಳಿಯಲ್ಲಿ ಜಿಲ್ಲೆಯನ್ನು ಪ್ರವೇಶಿಸಿ ಪೂರ್ವಾಭಿಮುಖವಾಗಿ ಹರಿದು ಮುಂದೆ ಶಿಂಷಾ ನದಿಯನ್ನು ಸೇರುತ್ತದೆ. ಇದಕ್ಕೆ ನಾಗಮಂಗಲ ತಾಲೂಕಿನ ದುಮ್ಮಸಂದ್ರದ ಬಳಿ ಅಣೆಕಟ್ಟನ್ನು ನಿರ್ಮಿಸಲಾಗಿದೆ.

ಜಿಲ್ಲೆಯು ಕಾವೇರಿ ಜಲಾನಯನ ಪ್ರದೇಶದಲ್ಲಿದೆ. ಕಾವೇರಿ ಜಲಾನಯನದ ಕಾವೇರಿ, ಲೋಕಪಾವನಿ, ಹಂದಿಹಳ್ಳ ಉಪಕಣಿವೆಗಳೂ ಹಾಗೂ ಶಿಂಷಾ ಜಲಾನಯನದ ವೀರವೈಷ್ಣವಿ ಉಪಕಣಿವೆಯ ಪ್ರದೇಶಗಳೂ ಜಿಲ್ಲೆಯಲ್ಲಿದೆ. ಕಾವೇರಿ ಜಲಾನಯನ ಪ್ರದೇಶವನ್ನು ೧. ಮೇಲಿನ ಕಾವೇರಿ ಉಪಜಲಾನಯನ (ಅಪ್ಪರ್ ಕಾವೇರಿ ಬೇಸಿನ್) ೨. ಮಧ್ಯ ಕಾವೇರಿ ಉಪಜಲಾನಯನ(ಮಿಡ್ಲ್ ಕಾವೇರಿ ಬೇಸಿನ್) ೩. ಕಬಿನಿ ಉಪಜಲಾನಯನ ೪. ಶಿಂಷಾ ಉಪಜಲಾನಯನ ಮತ್ತು ೫. ಅರ್ಕಾವತಿ ಉಪಜಲಾನಯನಗಳೆಂದು ವಿಭಾಗಿಸಲಾಗಿದೆ. ಮಂಡ್ಯ ಜಿಲ್ಲೆಯಲ್ಲಿರುವ ತಾಲೂಕುವಾರು ಪ್ರಮುಖ ಜಲಾನಯನಗಳ ವಿವರಗಳನ್ನು ಮುಂದಿನ ಪುಟದಲ್ಲಿ ನೀಡಿದೆ.

| ತಾಲೂಕು | ಒಟ್ಟು ವಿಸ್ತೀರ್ಣ ಚ.ಕಿ.ಮೀ. | ಶಿಂಷಾ ಉಪಜಲಾನಯನ | ಮೇಲಿನ ಕಾವೇರಿ ಉಪಜಲಾನಯನ | ಮಧ್ಯಕಾವೇರಿ ಉಪಜಲಾನಯನ |
|---|---|---|---|---|
| ಮದ್ದೂರು | ೬೧೮ | ೬೧೮ | – | – |
| ಮಳವಳ್ಳಿ | ೮೧೦ | ೫೬೭ | – | ೨೪೩ |
| ಮಂಡ್ಯ | ೭೧೬ | ೬೫೯ | – | ೫೭ |
| ಕೃಷ್ಣರಾಜಪೇಟೆ | ೬೦೪ | – | ೬೦೪ | – |
| ನಾಗಮಂಗಲ | ೧,೦೪೫ | ೯೨೦ | ೪೨ | ೮೩ |
| ಪಾಂಡವಪುರ | ೫೩೯ | – | ೫೪ | ೪೮೫ |
| ಶ್ರೀರಂಗಪಟ್ಟಣ | ೩೫೪ | – | ೨೧ | ೩೩೩ |

೧೯೮೬–೮೭ರ ನೀರಾವರಿ ಗಣತಿ ಮೇರೆಗೆ ಜಿಲ್ಲೆಯಲ್ಲಿ ೭,೭೫೯ ಬಳಕೆಯಲ್ಲಿರುವ ತೋಡುಬಾವಿಗಳಿದ್ದು ಅವುಗಳಲ್ಲಿ ೬,೧೩೧ ತೋಡುಬಾವಿಗಳಿಗೆ ವಿದ್ಯುತ್ ಪಂಪುಗಳನ್ನು ಅಳವಡಿಸಲಾಗಿದೆ. ಇವುಗಳಿಂದ ೯,೭೨೦ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದೆ. ಜಿಲ್ಲೆಯಲ್ಲಿ ಕಡಿಮೆ ಆಳವಿರುವ ೧೧೨ ಹಾಗೂ ಹೆಚ್ಚು ಆಳದ ೧೧ ನೀರಾವರಿ ಕೊಳವೆ ಬಾವಿಗಳಿದ್ದು, ಇವುಗಳಿಂದ ಸುಮಾರು ೩೦೦ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಬಹುದಾಗಿದೆ.

## ಸಸ್ಯ ಮತ್ತು ಪ್ರಾಣಿ ಸಂಪತ್ತು

ಬಹುತೇಕ ಸಮತಟ್ಟಾದ ಪ್ರದೇಶವುಳ್ಳ ಮಂಡ್ಯ ಜಿಲ್ಲೆಯಲ್ಲಿ ಪಶ್ಚಿಮ ಘಟ್ಟದ ಜಿಲ್ಲೆಗಳಲ್ಲಿರುವಂತೆ ಪ್ರಾಕೃತಿಕ ಅರಣ್ಯ ಕಂಡು ಬರದಿದ್ದರೂ, ಹಲವೆಡೆ ಮೀಸಲು ಹಾಗೂ ರಕ್ಷಿತ ಅರಣ್ಯ ಪ್ರದೇಶಗಳು ಕಂಡುಬರುತ್ತವೆ. ಅರಣ್ಯದಲ್ಲಿ ಕಂಡು ಬರುವ ಸಸ್ಯ ಹಾಗೂ ಪ್ರಾಣಿ ಸಂಪತ್ತನ್ನು ರಕ್ಷಿಸಿ, ಅದನ್ನು ಮಾನವನ ಒಳಿತಿಗೆ ಯಶಸ್ವಿಯಾಗಿ ಬಳಸಿಕೊಳ್ಳುವುದೇ ಅರಣ್ಯ ಶಾಸ್ತ್ರದ ಗುರಿಯಾಗಿದೆ.

ಟಿಪ್ಪುಸುಲ್ತಾನನ ಆಳ್ವಿಕೆಯಲ್ಲಿ ಮೈಸೂರು ರಾಜ್ಯದಲ್ಲಿ ತೇಗದ ಮರವು ರಾಜವೃಕ್ಷ ಎಂದು ಘೋಷಿಸಲ್ಪಟ್ಟಿತ್ತು. ಅನಂತರ ಶ್ರೀಗಂಧದ ಮರವೂ ರಾಜ್ಯದ ಸ್ವಾಮ್ಯಕ್ಕೊಳಗಾಯಿತು. ಆದರೆ ೧೮೬೪ ರವರೆಗೂ ಮೈಸೂರು ರಾಜ್ಯದಲ್ಲಿ ಸರಿಯಾದ ಅರಣ್ಯಾಡಳಿತವಿರಲಿಲ್ಲ. ೧೮೩೧ ರಿಂದ ೧೮೮೧ರವರೆಗೆ ಮೈಸೂರು ಸಂಸ್ಥಾನವು ಆಂಗ್ಲ ಸರ್ಕಾರದ ಆಡಳಿತಕ್ಕೆ ಒಳಪಟ್ಟಿದ್ದಾಗ ಅರಣ್ಯ ಪ್ರದೇಶಗಳನ್ನು ಮೀಸಲು ಅರಣ್ಯಗಳು ಮತ್ತು ರಕ್ಷಿತ ಅರಣ್ಯಗಳೆಂದು ಎರಡು ವಿಧವಾಗಿ ವಿಂಗಡಿಸಲಾಯಿತು. ೧೮೬೫ರಲ್ಲಿ ಜಾರಿಗೆ ಬಂದ ಅರಣ್ಯ ಶಾಸನದ ಪ್ರಕಾರ ಅರಣ್ಯ ಪ್ರದೇಶಗಳ ನಕ್ಷೆಗಳನ್ನು ತಯಾರಿಸಲಾಯಿತು. ೧೮೯೪ರಲ್ಲಿ ಅರಣ್ಯ ನೀತಿಯು ಜಾರಿಗೆ ಬಂದ ನಂತರ ಸೂಕ್ತವಾದ ರಕ್ಷಣಾ ಕ್ರಮಗಳನ್ನು ತೆಗೆದುಕೊಂಡಿದ್ದರಿಂದ ಮತ್ತು ಸ್ಥಳೀಯ ಜನರು ಹೊಂದಿದ್ದ ಅನಿರ್ಬಂಧಿತ ಹಕ್ಕು ಬಾಧ್ಯತೆಗಳನ್ನು ಮೊಟಕುಗೊಳಿಸಿದ್ದರಿಂದ ಅರಣ್ಯಗಳ ಬೆಳವಣಿಗೆ ಸುಸೂತ್ರವಾಗಿ ನಡೆಯುವಂತಾಯಿತು. ಗಿಡ–ಮರಗಳನ್ನು ಕಡಿದಿದ್ದರಿಂದ ಬಯಲಾದ ಅರಣ್ಯ ಪ್ರದೇಶಗಳಲ್ಲಿ ತೇಗ ಮತ್ತು ಪ್ಲಾಂಟೇಷನ್ ಮರಗಳನ್ನು ನೆಡಲಾಯಿತು. ನಂತರ ಹೆಚ್ಚಿದ ಜನಸಂಖ್ಯೆ ಹಾಗೂ ದನಕರುಗಳ ಹೆಚ್ಚಳದಿಂದಾಗಿ ಅರಣ್ಯ ಪ್ರದೇಶಗಳ ಉಪಯೋಗ ಹೆಚ್ಚಿತು. ಈ ಕಾರಣಗಳಿಂದಾಗಿ, ಅರಣ್ಯ ನೀತಿಯಲ್ಲಿ ಕೆಲವೊಂದು ಮಾರ್ಪಾಡು ಮಾಡಿ ೧೯೫೨ರಲ್ಲಿ ಹೊಸ ಅರಣ್ಯ ನೀತಿಯನ್ನು ಜಾರಿಗೆ ತರಲಾಯಿತು.

ಸಸ್ಯಶಾಸ್ತ್ರ ತಜ್ಞರಾದ ಚಾಂಪಿಯನ್ ಮತ್ತು ಸೇತ್ ಅವರು ವಾಯುಗುಣದ ಆಧಾರದ ಮೇಲೆ ಭಾರತದ ಅರಣ್ಯಗಳನ್ನು ೧೬ ವರ್ಗಗಳಾಗಿ ವಿಂಗಡಿಸಿದ್ದಾರೆ. ಅದರಂತೆ ಈ ಜಿಲ್ಲೆಯಲ್ಲಿ ಕಂಡು ಬರುವ ಅರಣ್ಯವು ದಕ್ಷಿಣ

ಉಷ್ಣವಲಯದ ಒಣ ಉದುರೆಲೆ ಅರಣ್ಯ ವರ್ಗಕ್ಕೆ ಸೇರುತ್ತದೆ. ಇಲ್ಲಿಯ ಮರಗಿಡಗಳು ಹಾರ್ಡ್ವಿಕಿಯಾ ಬಿನ್ನಾಟ, ಟಿರೊಕಾರ್ಪಸ್ ಮಾರ್ಸೂಪಿಯಂ, ಆಲ್ಬೀಜಿಯ, ಟರ್ಮಿನೇಲಿಯ ಪಾನಿಕುಲೇಟ, ಟರ್ಮಿನೇಲಿಯಾ ಚೆಬುಲಾ, ಸಂಟಾಲಂ ಆಲ್ಬಂ (ಶ್ರೀಗಂಧ), ಅಜಡಿರಾಕ್ಟ ಇಂಡಿಕ ಇತ್ಯಾದಿ ಮುಖ್ಯ ಜಾತಿಗೆ ಸೇರಿದ್ದಾಗಿವೆ.

ಜಿಲ್ಲೆಯಲ್ಲಿ ಒಟ್ಟು ಭೌಗೋಳಿಕ ಕ್ಷೇತ್ರದ ಶೇ.೮.೧೫ರಷ್ಟು ಭಾಗ ಅಂದರೆ ೪೦೪.೬ ಚ.ಕಿ.ಮೀ. ಅರಣ್ಯ ಪ್ರದೇಶವಿದೆ. ಅದರಲ್ಲಿ ೨೪೦.೭ ಚ.ಕಿ.ಮೀ. ಮೀಸಲು ಅರಣ್ಯ ೨೦.೬೯ ಚ.ಕಿ.ಮೀ. ರಕ್ಷಿತ ಅರಣ್ಯ ಮತ್ತು ಉಳಿದ ಪ್ರದೇಶ ಯಾವುದೇ ವರ್ಗಕ್ಕೂ ಸೇರದ ಸಾಮಾನ್ಯ ಅರಣ್ಯ ಪ್ರದೇಶವಾಗಿದೆ. ಜಿಲ್ಲೆಯ ಮೀಸಲು ಅರಣ್ಯದ ವಿವರಗಳನ್ನು ಕೋಷ್ಟಕ ೧.೯ರಲ್ಲಿ ನೀಡಿದೆ.

**ಕೋಷ್ಟಕ ೧.೯ ಜಿಲ್ಲೆಯ ಮೀಸಲು ಅರಣ್ಯದ ವಿವರ**

| | ಮೀಸಲು ಅರಣ್ಯ | ವಲಯ/ತಾಲೂಕು | ವಿಸ್ತೀರ್ಣ(ಹೆಕ್ಟೇರ್‌ಗಳಲ್ಲಿ) |
|---|---|---|---|
| ೧. | ನಾರಾಯಣದುರ್ಗ | ನಾಗಮಂಗಲ, ಕೃಷ್ಣರಾಜಪೇಟೆ, ಪಾಂಡವಪುರ | ೪,೪೦೨ |
| ೨. | ಹಸುವಿನ ಕಾವಲ್ | ನಾಗಮಂಗಲ | ೩೩೯ |
| ೩. | ಕೋಣನಕಲ್ಲು | ನಾಗಮಂಗಲ | ೯೫೩ |
| ೪. | ಹೆಚ್.ಎನ್ ಕಾವಲ್ | ನಾಗಮಂಗಲ | ೩೧೨ |
| ೫. | ಬಸವನಕಲ್ಲು | ನಾಗಮಂಗಲ | ೧,೧೭೬ |
| ೬. | ಮೂಡಿಬೆಟ್ಟ | ನಾಗಮಂಗಲ | ೪೭೦ |
| ೭. | ಬಿಟ್ಟೆಹಳ್ಳಿ | ಶ್ರೀರಂಗಪಟ್ಟಣ | ೭೨೦ |
| ೮. | ಕರಿಘಟ್ಟ | ಶ್ರೀರಂಗಪಟ್ಟಣ | ೧೬೩ |
| ೯. | ಬಸವನಬೆಟ್ಟ | ಮಳವಳ್ಳಿ | ೧೦,೦೩೫ |
| ೧೦. | ದನಗೂರು | ಮಳವಳ್ಳಿ | ೨,೬೨೩ |
| ೧೧. | ಬೇವುಕಲ್ಲು | ಮಂಡ್ಯ | ೧,೨೮೫ |
| ೧೨. | ಹುಲಿಕೆರೆ (ಮೇಲಿನಪ್ರದೇಶ)ಅರಣ್ಯ | ಮಂಡ್ಯ | ೩೧೮ |
| ೧೩. | ಹುಲಿಕೆರೆ (ಕೆಳಪ್ರದೇಶ) ಅರಣ್ಯ | ಮಂಡ್ಯ | ೧,೨೬೭ |
| | **ಒಟ್ಟು** | | **೨೪,೦೬೩** |

ಜಿಲ್ಲೆಯಲ್ಲಿ ೧. ಶೊರಿಯ ತಲೂರ– ಜಲರಿ, ೨. ಟರ್ಮಿನೇಲಿಯ ಚೆಬುಲ – ಅಳಲೆ, ೩. ಅನಜಿಸಸ್ ಲ್ಯಾಟಿಪೋಲಿಯ – ದಿಂಡಿಗ, ೪. ಎರಿತ್ರೋಕ್ಸೈಲಾನ್ ಮೊನೊಗೈನಂ – ದೇವದಾರು, ೫. ಆಲ್ಬಿಜಿಯ ಅಮರ – ಚುಗ್ಗಲು, ೬. ಲ್ಯಾಗರ್‌ಸ್ಟ್ರೋಮಿಯ ಪಾರ್ವಿಪ್ಲೋರ– ಚುನ್ನಂಗಿ, ೭. ವೈಟರ್ಸ್ ಆಲ್ಪ್ರಿಸ್ಸಿನ – ನವಿಲಾದಿ, ೮.ಬಂಬಾಕ್ಸ್ ಮಲಬಾರಿಕಂ – ಬುರುಗಲು, ೯. ಟರ್ಮಿನೇಲಿಯ ಟೊಮೆಂಟೋಸ – ಬಿಳಿಮತ್ತಿ, ೧೦. ಫೆರೋನಿಯ ಎಲಿಫೆಂಟಂ – ನೈಬೆಲ, ೧೧. ಡೊಡೋನಿಯ ವಿಸ್ಕೋಸ – ಬಂಡಾರಿ, ೧೨. ಟ್ಯಾಮರಿಂಡಸ್ ಇಂಡಿಕಸ್ – ಹುಣಸೆ, ೧೩. ಪೊಂಗೇಮಿಯ ಪಿನ್ನಾಟ – ಹೊಂಗೆ, ೧೪. ಡೆಂಡ್ರೊಕ್ಲಾಲಮಸ್ ಸ್ಟ್ರಿಕ್ಟ್‌ಸ್–ಕಿರುಬಿದಿರು, ೧೫. ಫಿಲ್ಯಾಂತಸ್ ಎಂಬ್ಲೀಕ – ನೆಲ್ಲಿ, ೧೬. ಆರ್ಟೊಕಾರ್ಫ್‌ಸ್ ಹೆಟಿರೊಫಿಲಸ್ – ಹಲಸು, ೧೭. ಮ್ಯಾಂಗಿಫೆರ ಇಂಡಿಕ – ಮಾವು ಮುಂತಾದ ಪ್ರಮುಖ ಗಿಡಮರಗಳು ಕಂಡು ಬರುತ್ತವೆ.

ದಟ್ಟ ಕಾಡುಗಳು ಇಲ್ಲದ ಪ್ರಯುಕ್ತ ಜಿಲ್ಲೆಯಲ್ಲಿ ಕ್ರೂರ ಕಾಡುಪ್ರಾಣಿಗಳು ವಿರಳ. ಮೈದಾನ ಪ್ರದೇಶವು ಕಾಡುಪ್ರಾಣಿಗಳ ವಾಸಕ್ಕೆ ಯೋಗ್ಯವಾಗಿಲ್ಲ. ಹಿಂದೆ ಪೂರಿಗಾಲಿ (ಮಳವಳ್ಳಿ ತಾಲೂಕು) ಪರಿಸರದಲ್ಲಿ ಹುಲಿ; ಹುಲಿಕೆರೆ ಹಾಗೂ ಕರಿಘಟ್ಟ ಪ್ರದೇಶಗಳಲ್ಲಿ ಚಿರತೆಗಳು ಇದ್ದುವೆಂದು ತಿಳಿದುಬರುತ್ತದೆ. ಮೀಸಲು ಅರಣ್ಯ

ಪ್ರದೇಶಗಳಲ್ಲಿ ಆನೆ, ತೋಳ, ಕಾಡುನಾಯಿ, ಮುಳ್ಳುಹಂದಿ, ಮೊಲ, ಜಿಂಕೆ, ಮುಂತಾದ ಪ್ರಾಣಿಗಳು ಈಗಲೂ ವಿರಳವಾಗಿ ಕಂಡುಬರುತ್ತವೆ.

**ರಂಗನತಿಟ್ಟು ಪಕ್ಷಿಧಾಮ**

ರಂಗನತಿಟ್ಟು ಪಕ್ಷಿಧಾಮವು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿ, ಶ್ರೀರಂಗಪಟ್ಟಣದಿಂದ ಮೂರು ಕಿಲೋಮೀಟರ್ ದೂರದಲ್ಲಿದೆ. ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟಿನ ಹಿನ್ನೀರಿನಲ್ಲಿರುವ ಆರು ಸಣ್ಣ ದ್ವೀಪಗಳನ್ನೊಳಗೊಂಡ ಪಕ್ಷಿಧಾಮಕ್ಕೆ ವಿವಿಧ ಜಾತಿಯ ಪಕ್ಷಿಗಳು ನಿಗದಿತ ಋತುಮಾನದಲ್ಲಿ ದೇಶ–ವಿದೇಶಗಳಿಂದ ವಲಸೆ ಬರುತ್ತವೆ. ಇದನ್ನು ೧೯೪೧ರಲ್ಲಿ ಪಕ್ಷಿಧಾಮವೆಂದು ಹೆಸರಿಸಲಾಯಿತು. ಪಕ್ಷಿಧಾಮದ ಪ್ರದೇಶದಲ್ಲಿನ ನದಿಯ ಇಕ್ಕೆಲಗಳಲ್ಲಿರುವ ಮೃದುವಾದ ಜೇಡಿಮಣ್ಣು ವಿವಿಧ ಕೀಟಗಳಿಗೆ ವಾಸಸ್ಥಾನವಾಗಿದೆ. ಈ ಸಮೃದ್ಧ ಕೀಟ ಸಂಕುಲವು ವಿವಿಧ ಪಕ್ಷಿಗಳನ್ನು ಆಕರ್ಷಿಸುತ್ತದೆ. ಈ ಪಕ್ಷಿಧಾಮದಲ್ಲಿರುವ ಬಂಡೆಗಲ್ಲು, ಗಿಡಗಂಟೆ ಹಾಗೂ ವಿವಿಧ ಜಾತಿಯ ಮರಗಳು ವಲಸೆ ಬರುವ ಪಕ್ಷಿಸಂಕುಲಕ್ಕೆ ಆಶ್ರಯ ನೀಡುತ್ತವೆ. ಬೇಸಿಗೆಯಲ್ಲಿ ಗರಿಷ್ಟ ಉಷ್ಣತೆ ೩೬ ಡಿಗ್ರಿ ಸೆಲ್ಸಿಯಸ್ ತಲುಪಿದರೆ, ಚಳಿಗಾಲದಲ್ಲಿ ಕನಿಷ್ಟ ಉಷ್ಣತೆ ೧೪ ಡಿಗ್ರಿ ಸೆಲ್ಸಿಯಸ್ ಇರುತ್ತದೆ.

*ಪಕ್ಷಿಧಾಮದ ಕೆಲವು ಪ್ರಮುಖ ಪಕ್ಷಿ ಜಾತಿಗಳು ಕೆಳಕಂಡಂತಿವೆ :*

೧. ಸಣ್ಣ ನೀರ ಕಾಗೆ ಅಥವಾ ಕೆಂಗಲ್ ಪಾರಿವಾಳ (ಲಿಟ್ಟಲ್ ಕಾರ್ಮೊರೆಂಟ್–ಪಾಲಕ್ರೊಕೊರಾಕ್ಸ್ ನೈಜರ್) Little Cormorant – *Phalacrocorax niger,* ೨. ದೊಡ್ಡ ನೀರ ಕಾಗೆ ಅಥವಾ ನೀರಬಾತು (ಲಾರ್ಜ್ ಕಾರ್ಮೊರೆಂಟ್–ಪಾಲಕ್ರೊಕೊರಾಕ್ಸ್ ಕಾರ್ಬೊ) Large Cormorant – *Phalacrocorax carbo,* ೩. ರಾತ್ರಿ ಬಕ (ನೈಟ್ ಹೆರಾನ್ – ನಿಕ್ಟಿ ಕೊರಾಕ್ಸ್ ನಿಕ್ಟಿಕೊರಾಕ್ಸ್) Night Heron - *Nicticorax nicticorax*, ೪. ನೀರು ಕೋಳಿ ಅಥವಾ ಹಾವಕ್ಕಿ (ಡಾರ್ಟರ್ ಅಥವಾ ಸ್ನೇಕ್ ಬರ್ಡ್ – ಅನಿಂಗ ರೂಫ) Darter or Snake bird - *Anhinga rufa* , ೫. ಕರಿತಲೆ ಹಕ್ಕಿ (ವೈಟ್ ಐಬಿಸ್– ತ್ರೆಸ್ಕಿ ಒರ್ನಿಸ್ ಏತಿಯೋಪಿಕ್ಸ್) White ibis – *Threskiornis aethiopica*, ೬. ದೊಡ್ಡಕಲ್ಲು ಪ್ಲೋವರ್ (ಗ್ರೇಟ್ ಸ್ಟೋನ್‌ಪ್ಲೋವರ್–ಎಸಾಕಸ್ ಮಾಗ್ನಿರಾಷ್ಟ್ರಿಸ್) Great Stone Plover-*Esacus magnirostris*, ೭. ಚಮಚ ಕೊಕ್ಕಿನ ಹಕ್ಕಿ (ಸ್ಪೂನ್ ಬಿಲ್ – ಪ್ಲಟೆಲಿಯ ಲ್ಯೂಕೊರೊಡಿಯ) Spoon bill – *Platalea lucorodia*, ೮. ತೆರೆದ ಕೊಕ್ಕಿನ ಹಕ್ಕಿ – (ಒಪನ್ ಬಿಲ್ಡ್ ಸ್ಟಾರ್ಕ್ – ಅನಸ್ಟೋಮಸ್ ಆಸಿಟನ್ಸ್) open billed stork-*Anastomus oscitans*, ೯. ಕವಲು ತೊಕೆ (ಇಂಡಿಯನ್ ಕ್ಲಿಫ್ ಸ್ವಾಲೊ – ಹಿರುಂಡ್ಸ್ ಫ್ಲೂವಿಕೊಲ ) Indian Cliff Swallow – *Hirunds fluvicola*, ೧೦. ಚರಲೆ ದಸಗೊರೆ – (ಲೆಸ್ಸರ್ ವಿಷಲಿಂಗ್ ಟೀಲ್ – ಡೆಂದ್ರೊಸಿಗ್ನ ಜವಾನಿಕ) Lesser whistling Teal – *Dendrocygna javanica*, ೧೧. ಗಂಗ ಕುರಾರಿ – ರಿವರ್ ಟರ್ನ್ – ಸ್ಟೆರ್ನ ಅರಂಟಿಯ River tern- *Sterna aurantia*, ೧೨. ಕೊಕ್ಕರೆ ಬೆಳ್ಳಕ್ಕಿ – ಕ್ಯಾಟಲ್ ಎಗ್ರೆಟ್ – ಬುಬಲ್ಕಸ್ ಐಬಿಸ್ Cattle Egret – *Bubulcus ibis*, ೧೩. ಕೊಕ್ಕರೆ ಬೆಳ್ಳಕ್ಕಿ – ಲಿಟ್ಲ್ ಎಗ್ರೇಟ್ – ಎಗ್ರೆಟ್ಟ ಗಾರ್ಜೆಟ್ಟಾ Little Egret- *Egretta garzetta*, ೧೪. ಕೊಕ್ಕರೆ ಬೆಳ್ಳಕ್ಕಿ – ಲಾರ್ಜ್ ಎಗ್ರೇಟ್ – ಎಗ್ರೆಟ್ಟ ಆಲ್ಬ large Egret- *Egretta alba*, ೧೫. ಕೊಕ್ಕರೆ ಬೆಳ್ಳಕ್ಕಿ – ಮೀಡಿಯನ್ ಎಗ್ರೇಟ್ – ಎಗ್ರೆಟ್ಟ ಇಂಟರ್‌ಮೀಡಿಯ Median Egret- *Egretta intermedia*, ೧೬. ಕಾರಂಜಿ ಕೊಕ್ಕರೆ ಅಥವಾ ಕೊಳದ ಬಕ – ಪಾಂಡ್ ಹೆರಾನ್ ಅಥವಾ ಪ್ಯಾಡಿ ಬರ್ಡ್ – ಆರ್ಡಿಯೋಲಾ ಗ್ರಾಯಿ Pond heron or paddy bird- *Ardeola grayii*. ಶ್ರೀರಂಗಪಟ್ಟಣ ತಾಲೂಕಿನ ಗೆಂಡೆಹೊಸಳ್ಳಿಯಲ್ಲಿ ನೂತನ ಪಕ್ಷಿಧಾಮವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. (ವಿವರಗಳಿಗೆ ಅಧ್ಯಾಯ ೧೭ ನೋಡಿ.)

**ಮೇಲುಕೋಟೆ ವನ್ಯಜೀವಿ ಉದ್ಯಾನವನ :** ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಪರಿಷತ್ತಿನ ಆವರಣದಲ್ಲಿ ಸುಮಾರು ಐವತ್ತು ಚ.ಕಿ.ಮೀ. ವಿಸ್ತೀರ್ಣದ ಸುಂದರ ಉದ್ಯಾನವನವಿದೆ. ಮೇಲ್ಕಂಡ ಪರಿಷತ್ತಿನ ನಿರ್ದೇಶಕರ ಉಸ್ತುವಾರಿಯಲ್ಲಿ ಇಲ್ಲಿ ವಿವಿಧ ರೀತಿ ಹಾಗೂ ಜಾತಿಯ ಅಲಂಕಾರಿಕ ಹೂ ಹಾಗೂ ಹಣ್ಣುಗಳ ಗಿಡಮರಗಳು, ೨೭ ಜಾತಿ ಪ್ರಭೇದಗಳ ಸಂಪಿಗೆ ಮರಗಳು, ಹತ್ತಾರು ಜಾತಿಯ ದಾಸವಾಳ, ವಿವಿಧ ದೇಶಗಳಿಂದ ತರಿಸಿ ಬೆಳೆಸಲ್ಪಟ್ಟ ಸುವಾಸನೆಯ ಗಿಡಬಳ್ಳಿಗಳು ಕಾಣಸಿಗುತ್ತವೆ. ಇದಕ್ಕೆ ಹೊಂದಿಕೊಂಡಿರುವ ಅರಣ್ಯದಲ್ಲಿ ತೋಳ, ಕಾಡುಹಂದಿ, ಕಾಡುನಾಯಿ, ಕೃಷ್ಣಮೃಗ(ಬ್ಲಾಕ್ ಬಕ್), ಸ್ಪಾಟೆಡ್ ಜಿಂಕೆ, ಮಂಗೂಸ್ (ಕೀರ), ನವಿಲು, ಕಾಡುಕೋಳಿ, ಪೆಟ್ರಿಡ್ಜ್, ಕಲ್ಲುಕೊರಮ, ಸರ್ಪ, ಉಡ, ಓತಿಕ್ಯಾತ, ಕಪ್ಪೆ; ಸಾಕಿದ ಕಾಟ್ಲ, ರಾಹು ಮೀನುಗಳು, ಪತಂಗ, ಜೇನುನೊಣ, ಮುಂತಾದ ಪ್ರಾಣಿ, ಪಕ್ಷಿ ಮತ್ತು ಕೀಟಗಳನ್ನು ಕಾಣಬಹುದು.

**ಆದಿಚುಂಚನಗಿರಿ ಮಯೂರ ವನ :** ನಾಗಮಂಗಲ ತಾಲೂಕಿನ ಆದಿಚುಂಚನಗಿರಿಯಲ್ಲಿರುವ ಕುರುಚಲು ಗಿಡದ ಗುಡ್ಡದಲ್ಲಿ ಕಂಡುಬರುವ ನವಿಲುಗಳನ್ನು ರಕ್ಷಿಸಿ, ಅವುಗಳ ಸಂತಾನಾಭಿವೃದ್ಧಿಗೆ ಪ್ರಾಧಾನ್ಯತೆ ನೀಡಲಾಗಿದೆ. ಈ ವನದಲ್ಲಿ ಸ್ಲಾತ್ ಕರಡಿ, ಕೃಷ್ಣಮೃಗ(ಬ್ಲಾಕ್ ಬಕ್), ಕಾಡುಹಂದಿ, ಗುಳ್ಳೆನರಿ, ಬಾನೆಟ್ ಕೋತಿ, ಕೀರ, ಪೆಟ್ರಿಡ್ಜ್, ಹೂಪೆ, ಡ್ರೋಂಗೋ (ಕಾಜಾಣ) ರೇಸಿಸ್, ಮರಕುಟುಕ, ಪ್ಯಾರಾಕೀಟ್, ಕಲ್ಲುಕೊರಮ, ನಾಗರಹಾವು, ಕೇರೆಹಾವು, ಉಡ, ಮುಂತಾದವು ಆಶ್ರಯ ಪಡೆದಿವೆ.

**ಇಂಡವಾಳು ಪ್ರಕೃತಿ ಉದ್ಯಾನ ಕೇಂದ್ರ ಮತ್ತು ಸಸ್ಯಕ್ಷೇತ್ರ :** ಇಂಡವಾಳು ಪ್ರಕೃತಿ ಉದ್ಯಾನ ಕೇಂದ್ರವು ಮಂಡ್ಯ ನಗರದಿಂದ ಸುಮಾರು ಆರು ಕಿ.ಮೀ. ದೂರದಲ್ಲಿದೆ. ಈ ಉದ್ಯಾನಕೇಂದ್ರದ ಆವರಣದಲ್ಲಿ ಜಿಂಕೆ, ಮೊಲ, ಗಿನಿಪಿಗ್ಸ್, ಬಾತುಕೋಳಿ, ಮುಂತಾದ ಪ್ರಾಣಿಗಳನ್ನು ರಕ್ಷಿಸುವ ಏರ್ಪಾಡು ಮಾಡಲಾಗಿದೆ. ಇದು ಒಂದು ಪ್ರೇಕ್ಷಣೀಯ ಸ್ಥಳವಾಗಿಯೂ ಅಭಿವೃದ್ಧಿಗೊಳ್ಳುತ್ತಿದೆ.

**ಕೊಕ್ಕರೆ ಬೆಳ್ಳೂರು:** ಮದ್ದೂರಿನಿಂದ ಸುಮಾರು ೧೨ ಕಿ.ಮೀ. ದೂರದಲ್ಲಿರುವ ಈ ಊರಿಗೆ ಕೊಕ್ಕರೆಗಳು ಸಾವಿರಾರು ಸಂಖ್ಯೆಯಲ್ಲಿ ವಲಸೆ ಬರುವುದರಿಂದ, ಇದನ್ನು ಕೊಕ್ಕರೆ ಬೆಳ್ಳೂರು ಎಂದು ಕರೆಯಲಾಗಿದೆ. ಪೈಂಟೆಡ್ ಸ್ಟಾರ್ಕ ಮತ್ತು ಪೆಲಿಕನ್ ಎಂಬ ಎರಡು ಪ್ರಭೇದದ ಪಕ್ಷಿಗಳು ತಮ್ಮ ಆಹಾರ, ಆಶ್ರಯ ಹಾಗೂ ಸಂತಾನಾಭಿವೃದ್ಧಿಗಾಗಿ ಈ ಹಳ್ಳಿಗೆ ಪ್ರತೀ ವರ್ಷ ಮಾರ್ಚಿ ತಿಂಗಳಿನಲ್ಲಿ ವಲಸೆ ಬರುತ್ತವೆ. ಈ ಪಕ್ಷಿಗಳಲ್ಲಿ ಕಂಡು ಬರುವ ಸಂತಾನ ರಕ್ಷಣಾ ಶಕ್ತಿ ಗಮನಾರ್ಹವಾಗಿದೆ. ಮರಿಗಳು ಬೆಳೆದು ರೆಕ್ಕೆಪುಕ್ಕಗಳು ಬಲಿತು ಅವುಗಳಿಗೆ ಹಾರುವ ಶಕ್ತಿ ಬಂದ ನಂತರ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ತಮ್ಮ ಮೂಲ ನೆಲೆಗೆ ಮರಿಗಳೊಡನೆ ವಾಪಸಾಗುತ್ತವೆ. ಬೆಳ್ಳೂರಿನಲ್ಲಿ ಕೊಕ್ಕರೆಗಳು ಮನೆಗಳ ಅಕ್ಕಪಕ್ಕದ ಹಾಗೂ ಹತ್ತಿರದಲ್ಲಿರುವ ಮರಗಳ ಮೇಲೆ ನಿರ್ಭಯವಾಗಿ ವಾಸಿಸುತ್ತವೆ. ಪಕ್ಷಿಗಳಿಂದ ಹಳ್ಳಿಯವರ ಬೆಳೆಗಳಿಗಾಗಲಿ ಇಲ್ಲವೆ ಹಳ್ಳಿಯವರಿಂದ ಪಕ್ಷಿಗಳಿಗಾಗಲೀ ಯಾವ ರೀತಿಯ ಹಾನಿಯೂ ಇಲ್ಲ. ಅರಣ್ಯ ಇಲಾಖೆಯವರು ಪಕ್ಷಿಗಳು ವಾಸಿಸುವ ಪ್ರತಿ ಮರಕ್ಕೆ ೫೦ ರಿಂದ ೨೫೦ ರೂಪಾಯಿಗಳ ಗೌರವಧನವನ್ನು ಮರದ ಮಾಲೀಕರಿಗೆ ಕೊಡುತ್ತಿರುವುದರಿಂದ ಅವುಗಳ ಸಂರಕ್ಷಣೆಯಾಗುತ್ತಿದೆ.

## ಹವಾಮಾನ

ಪಕ್ಕದ ಮೈಸೂರು ಹಾಗೂ ಬೆಂಗಳೂರು ಜಿಲ್ಲೆಗಳಂತೆ ಮಂಡ್ಯ ಜಿಲ್ಲೆಯ ಹವಾಮಾನವೂ ಆಹ್ಲಾದಕರವಾಗಿದೆ. ಜಿಲ್ಲೆಯಲ್ಲಿ ನಾಲ್ಕು ಋತುಗಳನ್ನು ಗುರುತಿಸಲಾಗಿದೆ. ಡಿಸೆಂಬರ್ ನಿಂದ ಫೆಬ್ರವರಿ ತಿಂಗಳಿನವರೆಗಿನ ಋತುವಿನಲ್ಲಿ ಚಳಿ ಇದ್ದು, ಶುಭ್ರ ವಾತಾವರಣ ಹಾಗೂ ಒಣ ಹವೆಯು ಕಂಡುಬರುತ್ತದೆ. ಮಾರ್ಚಿ ತಿಂಗಳಿನಿಂದ ಮೇ ತಿಂಗಳವರೆಗಿನ ಅವಧಿಯನ್ನು ಬೇಸಿಗೆ ಕಾಲವೆಂದೂ, ಜೂನ್ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗಿನ ಅವಧಿಯನ್ನು ಮಳೆಗಾಲವೆಂದೂ ಹಾಗೂ ಅಕ್ಟೋಬರ್–ನವೆಂಬರ್ ತಿಂಗಳುಗಳ ಅವಧಿಯನ್ನು ಮಳೆಗಾಲೋತ್ತರ ಅವಧಿಯೆಂದು ವಿಭಾಗಿಸಲಾಗಿದೆ.

**ಮಳೆ :** ಜಿಲ್ಲೆಯ ಎಲ್ಲಾ ತಾಲೂಕುಗಳ ಮಳೆ ಮಾಪನ ಕೇಂದ್ರಗಳಲ್ಲಿ ೨೩ ರಿಂದ ಹಿಡಿದು ೮೨ ವರ್ಷಗಳ ವರೆಗಿನ ಮಳೆಯ ಅಂಕಿಅಂಶಗಳು ದೊರೆಯುತ್ತವೆ. ೧೯೦೧-೧೯೫೦ರವರೆಗೆ ಮಳೆ ಮಾಪನ ಕೇಂದ್ರವಾರು ಮತ್ತು ಮಾಹೆವಾರು ಮಳೆಯಾದ ವಿವರಗಳನ್ನು ಕೋಷ್ಟಕ ೧.೧೦ ರಲ್ಲಿ ಕೊಟ್ಟಿದೆ. ಜಿಲ್ಲೆಯ ವಾರ್ಷಿಕ ಸರಾಸರಿ ವಾಡಿಕೆ ಮಳೆಯ ಪ್ರಮಾಣ ೬೯೧.೨ ಮಿ.ಮೀ.ಆಗಿದೆ. ಜಿಲ್ಲೆಯ ಪಶ್ಚಿಮ ಭಾಗಗಳಲ್ಲಿ ಉಳಿದೆಡೆಗಳಿಗಿಂತ ಹೆಚ್ಚಿನ ಮಳೆಯಾಗುತ್ತದೆ. ಸಾಮಾನ್ಯವಾಗಿ ಏಪ್ರಿಲ್ ತಿಂಗಳಿನಿಂದ ನವೆಂಬರ್ ತಿಂಗಳ ಅವಧಿಯಲ್ಲಿ ಮಳೆಯಾಗುತ್ತದೆ. ನೈಋತ್ಯ ಮತ್ತು ಈಶಾನ್ಯ ಮಾರುತಗಳಿಂದ ಜಿಲ್ಲೆಯಲ್ಲಿ ಮಳೆ ಬೀಳುತ್ತಿದ್ದು, ಅದರ ಗರಿಷ್ಟ ಪ್ರಮಾಣ ಅಕ್ಟೋಬರ್ ತಿಂಗಳಿನಲ್ಲಿ ತಲುಪುತ್ತದೆ. ಕೆಲವೊಮ್ಮೆ ಗುಡುಗಿನಿಂದ ಕೂಡಿದ ಬಿರುಮಳೆಯಾಗುವುದು ಕಂಡುಬರುತ್ತದೆ.

ಜಿಲ್ಲೆಯ ವಾರ್ಷಿಕ ಮಳೆಯಲ್ಲಿ ಏರಿಳಿತಗಳು ಕಂಡುಬಂದಿದೆ. ೧೯೦೧ ರಿಂದ ೧೯೫೦ ರ ಅವಧಿಯಲ್ಲಿ ವಾಡಿಕೆ ಮಳೆಯ ಶೇ. ೧೬೬ ರಷ್ಟು ಹೆಚ್ಚು ಮಳೆಯು ೧೯೦೩ ರಲ್ಲೂ, ವಾಡಿಕೆ ಮಳೆಯ ಶೇ.೬೩ ರಷ್ಟು ಕಡಿಮೆ ಮಳೆಯು ೧೯೨೭ರಲ್ಲೂ ಆಗಿರುವುದು ದಾಖಲಾಗಿದೆ. ಇದೇ ಅವಧಿಯಲ್ಲಿ ವಾಡಿಕೆ ಮಳೆಗಿಂತ ಶೇ.೮೦ ರಷ್ಟು ಕಡಿಮೆ ಮಳೆಯು ಎಂಟು ವರ್ಷಗಳಲ್ಲಿ ದಾಖಲಾಗಿದೆ. ವರ್ಷದಲ್ಲಿ ಮಳೆ ಬೀಳುವ ದಿವಸಗಳ ಸಂಖ್ಯೆ ೪೫ ಆಗಿದೆ. (ಪ್ರತಿ ದಿವಸ ೨.೫ ಮಿ.ಮೀ.ಗಿಂತ ಹೆಚ್ಚು ಮಳೆಯಾಗಿರುವುದು). ಈ ಸಂಖ್ಯೆಯು ನಾಗಮಂಗಲದಲ್ಲಿ ೪೧ ಆಗಿದ್ದರೆ, ಕೃಷ್ಣರಾಜಪೇಟೆಯಲ್ಲಿ ೪೯ ಆಗಿದೆ. ನಾಗಮಂಗಲದಲ್ಲಿ ೧೯೨೫ನೇ ನವೆಂಬರ್ ೧೨ ರಂದು ಬಿದ್ದ ೨೦೦.೭ ಮಿಮೀ. ಮಳೆಯ ೨೪ ಗಂಟೆಗಳಲ್ಲಿ ದಾಖಲಾದ ಗರಿಷ್ಟ ಮಳೆಯಾಗಿದೆ. ಜಿಲ್ಲೆಯಲ್ಲಿ ೧೯೦೧ ರಿಂದ ೧೯೯೯ ರವರೆಗೆ ತಾಲೂಕುವಾರು ವಾರ್ಷಿಕ ಮಳೆ ವಿವರಗಳನ್ನು ಕೋಷ್ಟಕ ೧.೧೧ ರಲ್ಲಿ ನೀಡಿದೆ. ಕೋಷ್ಟಕ ೧.೧೨ ರಲ್ಲಿ ಮಳೆಮಾಪನ ಕೇಂದ್ರವಾರು ವಾರ್ಷಿಕ ಮಳೆಯ ವಿವರಗಳನ್ನು ಮಿಲಿ ಮೀಟರುಗಳಲ್ಲಿ ನೀಡಿದೆ. ಕೋಷ್ಟಕ ೧.೧೩ ರಲ್ಲಿ ೨೦೦೧ ರಲ್ಲಿ ತಾಲೂಕುವಾರು ಮಳೆಯಾದ ವಿವರಗಳನ್ನು ಮಿಲಿ ಮೀಟರುಗಳಲ್ಲಿ ನೀಡಿದೆ.

**ಉಷ್ಣತೆ :** ಜಿಲ್ಲೆಯಲ್ಲಿ ಮಾರ್ಚಿ ತಿಂಗಳಿನಿಂದ ಮೇ ತಿಂಗಳವರೆಗೆ ಉಷ್ಣತೆ ಏರುತ್ತಾ ಹೋಗುತ್ತದೆ. ಏಪ್ರಿಲ್ ತಿಂಗಳಿನಲ್ಲಿ ಅತಿ ಹೆಚ್ಚಿನ ಉಷ್ಣತೆ ಕಂಡು ಬರುತ್ತದೆ. ಆಗ ಸರಾಸರಿ ದೈನಂದಿನ ಉಷ್ಣತೆ ૩೯° ಸೆಲ್ಸಿಯಸ್ ತಲುಪಿದ ದಾಖಲೆಯಿದೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಮಳೆಯಾದಾಗ ಉಷ್ಣತೆ ಇಳಿಯುತ್ತದೆ. ಮಾನ್ಸೂನ್ ಅವಧಿಯಲ್ಲಿ ಉಷ್ಣತೆಯು ಕಡಿಮೆಯಾಗಿ ವಾತಾವರಣವು ಆಹ್ಲಾದಕರವಾಗಿರುತ್ತದೆ. ಮಾನ್ಸೂನ್ ನಂತರದ ಅವಧಿಯಲ್ಲಿ ಉಷ್ಣತೆಯಲ್ಲಿನ ಇಳಿತ ಗಮನಾರ್ಹವಾಗಿರುತ್ತದೆ. ಸಾಮಾನ್ಯವಾಗಿ ಡಿಸೆಂಬರ್ ತಿಂಗಳು ಅತಿ ಹೆಚ್ಚಿನ ಚಳಿ ಇರುವ ತಿಂಗಳಾಗಿದ್ದು ಆಗ ಸರಾಸರಿ ದೈನಂದಿನ ಗರಿಷ್ಟ ಉಷ್ಣತೆ ೨೭° ಸೆಲ್ಸಿಯಸ್ ಹಾಗೂ ಕನಿಷ್ಟ ಉಷ್ಣತೆ ೧೬° ಸೆಲ್ಸಿಯಸ್ ಇರುತ್ತದೆ. ಕೆಲವು ವೇಳೆ ಅತಿ ಕಡಿಮೆ ಉಷ್ಣತೆ ಅಂದರೆ ೧೦° ಸೆಲ್ಸಿಯಸ್ ತಲುಪಿದ ದಾಖಲೆಯೂ ಇದೆ.

**ಸಾಪೇಕ್ಷ ಆರ್ದ್ರತೆ :** ಮಾನ್ಸೂನ್ ಅವಧಿಯಲ್ಲಿ ಸಾಪೇಕ್ಷ ಆರ್ದ್ರತೆ ಶೇ.೭೫ ರಷ್ಟಿರುತ್ತದೆ. ಮಾನ್ಸೂನ್ ನಂತರದ ಅವಧಿಯಲ್ಲಿ ಸಾಪೇಕ್ಷ ಆರ್ದ್ರತೆ ಸಾಮಾನ್ಯವಾಗಿರುತ್ತದೆ. ಡಿಸೆಂಬರ್ ತಿಂಗಳಿನಿಂದ ಮೇ ತಿಂಗಳಿನವರೆಗಿನ ಅವಧಿಯಲ್ಲಿ ಒಣ ಹವೆಯಿದ್ದು, ಮಧ್ಯಾಹ್ನದ ಅವಧಿಯಲ್ಲಿ ಸಾಪೇಕ್ಷ ಆರ್ದ್ರತೆ ಶೇ.೪೦ ರಷ್ಟಿರುತ್ತದೆ.

**ಮೋಡಗಳು :** ಮಾನ್ಸೂನ್ ಅವಧಿಯಲ್ಲಿ ಆಕಾಶವು ಮೋಡಗಳಿಂದ ಮುಸುಕಿರುವುದು ಕಂಡುಬರುತ್ತದೆ. ಮಾನ್ಸೂನ್ ನಂತರದ ಅವಧಿಯಲ್ಲಿ ಮೋಡಗಳ ಮುಸುಕುವಿಕೆ ಕಡಿಮೆ ಪ್ರಮಾಣದಲ್ಲಿರುತ್ತದೆ. ವರ್ಷದ ಉಳಿದ ಅವಧಿಯಲ್ಲಿ ಆಕಾಶವು ನಿರ್ಮಲವಾಗಿರುತ್ತದೆ, ಇಲ್ಲವೇ ಅಲ್ಪ ಪ್ರಮಾಣದ ಮೋಡಗಳಿಂದ ಕೂಡಿರುತ್ತದೆ.

**ಗಾಳಿ :** ಮಾನ್ಸೂನ್ ಅವಧಿಯಲ್ಲಿ ಗಾಳಿಯು ಮಧ್ಯಮ ವೇಗದಲ್ಲಿ ಬೀಸುತ್ತವೆ. ಮೇ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳವರೆಗೆ ನೈಋತ್ಯ ಅಥವಾ ಪಶ್ಚಿಮದೆಡೆಯಿಂದ ಮತ್ತು ಅಕ್ಟೋಬರ್ ತಿಂಗಳಿನಿಂದ ಮುಂದಿನ ನಾಲ್ಕು ತಿಂಗಳವರೆಗೆ ಈಶಾನ್ಯ ಅಥವಾ ಪೂರ್ವದೆಡೆಯಿಂದ ಗಾಳಿಯು ಬೀಸುತ್ತದೆ. ಮಾರ್ಚಿ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಬೆಳಗಿನ ಸಮಯದಲ್ಲಿ ನೈಋತ್ಯ ಅಥವಾ ಪಶ್ಚಿಮದೆಡೆಯಿಂದ ಹಾಗೂ ಮಧ್ಯಾಹ್ನದ ಸಮಯದಲ್ಲಿ ಉತ್ತರ ಹಾಗೂ ಪೂರ್ವ ದಿಕ್ಕುಗಳಿಂದ ಗಾಳಿಯು ಬೀಸುತ್ತದೆ.

**ವಿಶೇಷ ಹವಾಮಾನ ಸಂಗತಿಗಳು :** ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಬಂಗಾಳ ಕೊಲ್ಲಿಯಲ್ಲಿ ಉಂಟಾಗುವ ವಾಯುಭಾರ ಕುಸಿತದಿಂದ ಜಿಲ್ಲೆಯಲ್ಲಿ ಕೆಲವೊಮ್ಮೆ ಮಳೆಯಾಗುತ್ತದೆ. ಹಲವು ಬಾರಿ ಮಳೆಯೊಂದಿಗೆ ಚಂಡಮಾರುತವೂ ಬೀಸುತ್ತದೆ. ಗುಡುಗಿನಿಂದ ಕೂಡಿದ ಬಿರುಮಳೆಯು ಮಾನ್ಸೂನ್ ಪೂರ್ವದ ಅವಧಿಯಲ್ಲಿ ಸುರಿಯುತ್ತದೆ. ಮಾನ್ಸೂನ್ ಅವಧಿಯಲ್ಲಿ ಗುಡುಗು ಸಿಡಿಲುಗಳಿಂದ ಕೂಡಿದ ಮಳೆ ಸುರಿಯುತ್ತದೆ.

**ಕೋಷ್ಟಕ ೧.೧೦ ಜಿಲ್ಲೆಯಲ್ಲಿ ೧೯೦೧ ರಿಂದ ೧೯೭೦ರವರೆಗೆ ತಾಲೂಕುವಾರು ಸರಾಸರಿ ಮಳೆಯ ಪ್ರಮಾಣ (ಮಿ.ಮೀ.)**

| ತಾಲೂಕು | ವರ್ಷಗಳ | ಅಂಕಿಅಂಶಗಳು | ಜನವರಿ | ಫೆಬ್ರವರಿ | ಮಾರ್ಚಿ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ |
|---|---|---|---|---|---|---|---|---|---|---|---|
| ಮಂಡ್ಯ | ೫೦ | ಅ | ೪.೮ | ೭.೪ | ೧೦.೭ | ೪೦.೪ | ೧೨೧.೨ | ೪೭.೨ | ೩೬.೬ | ೭೫.೭ | ೧೧೦.೦ |
| | | ಬ | ೦.೪ | ೦.೪ | ೦.೭ | ೩.೦ | ೭.೧ | ೩.೪ | ೩.೫ | ೪.೭ | ೬.೮ |
| ಶ್ರೀರಂಗಪಟ್ಟಣ | ೫೦ | ಅ | ೪.೧ | ೫.೬ | ೧೦.೭ | ೪೯.೦ | ೧೩೩.೧ | ೪೩.೪ | ೩೮.೩ | ೬೪.೩ | ೯೦.೨ |
| | | ಬ | ೦.೩ | ೦.೩ | ೦.೮ | ೩.೭ | ೭.೫ | ೪.೦ | ೩.೮ | ೪.೭ | ೬.೧ |
| ಮಳವಳ್ಳಿ | ೫೦ | ಅ | ೨.೩ | ೭.೯ | ೭.೬ | ೪೯.೩ | ೧೨೦.೧ | ೪೩.೯ | ೪೨.೭ | ೭೯.೫ | ೧೧೦.೭ |
| | | ಬ | ೦.೩ | ೦.೪ | ೦.೭ | ೩.೪ | ೭.೪ | ೩.೮ | ೩.೯ | ೫.೧ | ೬.೨ |
| ಕೃಷ್ಣರಾಜಪೇಟೆ | ೫೦ | ಅ | ೩.೬ | ೫.೮ | ೮.೧ | ೪೭.೦ | ೧೪೦.೫ | ೬೧.೦ | ೬೪.೩ | ೬೪.೮ | ೧೦೦.೩ |
| | | ಬ | ೦.೩ | ೦.೫ | ೦.೭ | ೩.೭ | ೮.೦ | ೪.೫ | ೬.೦ | ೫.೨ | ೬.೦ |
| ನಾಗಮಂಗಲ | ೫೦ | ಅ | ೪.೩ | ೫.೧ | ೭.೪ | ೪೩.೭ | ೧೧೨.೩ | ೩೯.೧ | ೩೧.೫ | ೬೧.೨ | ೧೨೨.೨ |
| | | ಬ | ೦.೩ | ೦.೪ | ೦.೫ | ೩.೨ | ೭.೧ | ೩.೧ | ೨.೭ | ೪.೧ | ೬.೪ |
| ಮದ್ದೂರು | ೧೮ | ಅ | ೧.೮೮ | ೪.೮ | ೨.೫ | ೪೯.೫ | ೯೧.೯ | ೩೫.೮ | ೪೪.೨ | ೯೮.೫ | ೧೦೭.೯ |
| | | ಬ | ೦.೩ | ೦.೪ | ೦.೩ | ೩.೭ | ೬.೬ | ೩.೪ | ೪.೭ | ೬.೧ | ೫.೮ |
| ಪಾಂಡವಪುರ | ೧೩ | ಅ | ೩.೩ | ೬.೬ | ೪.೮ | ೫೬.೪ | ೧೧೦.೨ | ೩೧.೨ | ೨೮.೨ | ೭೭.೦ | ೮೨.೦ |
| | | ಬ | ೦.೩ | ೦.೪ | ೦.೭ | ೪.೭ | ೬.೫ | ೨.೮ | ೩.೦ | ೫.೫ | ೬.೨ |
| ಜಿಲ್ಲೆಯ ಮೊತ್ತ | | ಅ | ೩.೫ | ೬.೨ | ೭.೪ | ೪೭.೯ | ೧೧೮.೫ | ೪೩.೧ | ೪೦.೮ | ೭೪.೪ | ೧೦೩.೩ |
| | | ಬ | ೦.೩ | ೦.೪ | ೦.೬ | ೩.೬ | ೭.೨ | ೩.೬ | ೩.೯ | ೫.೧ | ೬.೨ |

(ಮುಂದುವರೆದಿದೆ)

| ತಾಲೂಕು | ವರ್ಷಗಳ ಅಂಕಿ ಅಂಶಗಳು | | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ವಾರ್ಷಿಕ | ಸಾಮಾನ್ಯ ಮಳೆಯ ಶೇ. ಅತಿ ಹೆಚ್ಚು ಮಳೆ ಹಾಗೂ ವರ್ಷ ** | ಅತಿ ಕಡಿಮೆ ಮಳೆ ಹಾಗೂ ವರ್ಷ ** | ೨೪ ಘಂಟೆಗಳಲ್ಲಿ ಆದ ಹೆಚ್ಚು ಮಳೆ ಹಾಗೂ ವರ್ಷ * |
|---|---|---|---|---|---|---|---|---|---|
| ಮಂಡ್ಯ | ೫೦ | ಅ | ೧೫೪.೭ | ೬೭.೬ | ೧೨.೨ | ೬೮೮.೫ | ೧೭೯ (೧೯೦೯) | ೬೦ (೧೯೨೩) | ೧೭೭.೮ ೧೯೫೬ ಅಕ್ಟೋ. ೨ |
| | | ಬ | ೭.೯ | ೪.೦ | ೧.೧ | ೪೩.೦ | | | |
| ಶ್ರೀರಂಗಪಟ್ಟಣ | ೫೦ | ಅ | ೧೫೨.೪ | ೬೭.೬ | ೧೧.೯ | ೬೭೦.೬ | ೨೦೧ (೧೯೦೩) | ೬೫ (೧೯೧೨) | ೧೬೭.೬ ೧೯೫೭ ಮೇ. ೨೨ |
| | | ಬ | ೮.೫ | ೪.೦ | ೧.೦ | ೪೪.೭ | | | |
| ಮಳವಳ್ಳಿ | ೫೦ | ಅ | ೧೪೬.೮ | ೬೭.೧ | ೧೪.೦ | ೬೯೧.೯ | ೧೭೬ (೧೯೦೩) | ೫೪ (೧೯೨೭) | ೧೬೦.೫ ೧೯೫೭ ಮೇ. ೨೩ |
| | | ಬ | ೮.೦ | ೪.೧ | ೧.೦ | ೪೪.೩ | | | |
| ಕೃಷ್ಣರಾಜಪೇಟೆ | ೫೦ | ಅ | ೧೬೦.೮ | ೭೪.೪ | ೧೧.೪ | ೭೪೨.೦ | ೧೬೪ (೧೯೩೩) | ೫೩ (೧೯೧೪) | ೧೫೫.೫ ೧೯೪೦ ಅಕ್ಟೋ. ೮ |
| | | ಬ | ೮.೮ | ೪.೩ | ೦.೭ | ೪೮.೭ | | | |
| ನಾಗಮಂಗಲ | ೫೦ | ಅ | ೧೫೮.೨ | ೭೯.೦ | ೧೧.೯ | ೬೭೫.೯ | ೧೭೦ (೧೯೦೩) | ೫೪ (೧೯೧೩) | ೨೦೦.೭ ೧೯೨೫ ನವೆ. ೧೧ |
| | | ಬ | ೮.೦ | ೪.೭ | ೦.೯ | ೪೧.೪ | | | |
| ಮದ್ದೂರು | ೧೮ | ಅ | ೧೭೭.೫ | ೫೨.೩ | ೧೪.೨ | ೬೮೦.೯ | ೧೫೨ (೧೯೪೬) | ೬೧ (೧೯೪೦) | ೧೧೭.೩ ೧೯೫೮ ಸೆಪ್ಟೆ. ೨೧ |
| | | ಬ | ೯.೧ | ೩.೮ | ೧.೧ | ೪೫.೩ | | | |
| ಪಾಂಡವಪುರ | ೧೩ | ಅ | ೨.೫.೫ | ೬೪.೩ | ೧೯.೧ | ೬೮೮.೬ | ೧೩೯ (೧೯೪೯) | ೬೬ (೧೯೩೮) | ೧೧೨.೫ ೧೯೫೧ ಸೆಪ್ಟೆ. ೨೮ |
| | | ಬ | ೯.೩ | ೪.೩ | ೧.೧ | ೪೪.೮ | | | |
| ಜಿಲ್ಲೆಯ ಮೊತ್ತ | | ಅ | ೧೬೫.೧ | ೬೭.೫ | ೧೩.೫ | ೬೯೧.೨ | ೧೬೬ (೧೯೦೩) | ೬೩ (೧೯೨೭) | |
| | | ಬ | ೮.೫ | ೪.೨ | ೧.೦ | ೪೪.೬ | | | |

(ಅ) ಸಾಮಾನ್ಯ ಮಳೆ ಮಿ.ಮೀ, (ಬ) ಸರಾಸರಿ ಮಳೆಯಾದ ದಿನಗಳು (ಪ್ರತಿದಿನ ೨.೫ ಮಿ.ಮೀ ಗಿಂತ ಹೆಚ್ಚು ಮಳೆ.

** ವರ್ಷಗಳನ್ನು ಆವರಣದಲ್ಲಿ ನೀಡಿದೆ.

## ಕೋಷ್ಟಕ ೧.೧೧ ೧೯೦೧ ರಿಂದ ೧೯೯೯ ರವರೆಗೆ ಜಿಲ್ಲೆಯ ತಾಲೂಕುವಾರು ವಾರ್ಷಿಕ ಮಳೆಯ ವಿವರಗಳು (ಮಿ.ಮೀ.ಗಳಲ್ಲಿ)

| ವರ್ಷ | ಕೃಷ್ಣರಾಜಪೇಟೆ | ಮದ್ದೂರು | ಮಳವಳ್ಳಿ | ಮಂಡ್ಯ | ನಾಗ ಮಂಗಲ | ಪಾಂಡವ ಪುರ | ಶ್ರೀರಂಗ ಪಟ್ಟಣ | ಜಿಲ್ಲಾ ಸರಾಸರಿ |
|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ |
| ೧೯೦೧ | ೮೭೩.೬ | ೭೦೬.೫ | ೮೮೭ | ೭೬೧.೬ | ೮೨೯ | ೭೦೧.೩ | ೭೭೯.೩ | ೭೯೧.೧೯ |
| ೧೯೦೨ | ೭೪೬.೮ | ೬೬೨.೬ | ೫೬೬.೨ | ೬೦೦.೨ | ೬೪೯.೭ | ೫೦೪.೭ | ೫೪೬.೯ | ೬೧೧.೦೧ |
| ೧೯೦೩ | ೯೫೩.೭ | ೧೩೧೪.೮ | ೧೨೯೬.೪ | ೧೦೮೯ | ೧೧೪೮.೪ | ೧೨೨೩ | ೧೩೧೬ | ೧೧೯೧.೫೬ |
| ೧೯೦೪ | ೭೯೫.೪ | ೫೧೭.೮ | ೫೯೨.೧ | ೬೦೨.೮ | ೩೯೯.೪ | ೪೭೨.೫ | ೪೪೫ | ೫೪೬.೪೩ |
| ೧೯೦೫ | ೬೩೨.೯ | ೬೦೨.೨ | ೫೧೬.೮ | ೫೦೪.೪ | ೫೯೯.೭ | ೫೨೧.೬ | ೬೦೧.೫ | ೫೬೨.೭೩ |
| ೧೯೦೬ | ೭೮೯.೫ | ಲಭ್ಯವಿಲ್ಲ | ೭೮೦.೯ | ೭೧೬.೨ | ೭೭೧.೧ | ಲಭ್ಯವಿಲ್ಲ | ೬೬೦.೧ | ೭೪೩.೫೬ |

| ೧ | ೨ | ೩ | ೪ | ೫ | ೬ | ೭ | ೮ | ೯ |
|---|---|---|---|---|---|---|---|---|
| ೧೯೦೭ | ೬೪೯ | ೫೪೮.೧ | ೬೩೫.೮ | ೬೦೯.೮ | ೪೫೮.೪ | ೪೯೭.೨ | ೬೨೧.೧ | ೫೭೪.೨೦ |
| ೧೯೦೮ | ೫೩೪.೧ | ೧೧೦.೯ | ೭೧೯.೫ | ೫೦೯.೮ | ೪೧೦.೭ | ಲಭ್ಯವಿಲ್ಲ | ೫೪೬.೮ | ೪೭೧.೮೭ |
| ೧೯೦೯ | ೮೬೨.೬ | ೯೪೪.೫ | ೧೦೬೦.೨ | ೧೩೮೮ | ೮೪೫.೩ | ೯೪೧.೩ | ೯೩೫ | ೯೮೨.೪೧ |
| ೧೯೧೦ | ೧೦೧೩.೯ | ೬೯೯.೨ | ೭೭೯.೨ | ೭೭೦.೫ | ೮೪೮.೬ | ೭೩೧.೪ | ೮೦೭.೪ | ೮೦೦.೦೩ |
| ೧೯೧೧ | ೭೫೨.೧ | ೫೯೨.೧ | ೬೭೭ | ೬೫೯.೮ | ೫೪೬.೯ | ಲಭ್ಯವಿಲ್ಲ | ೬೦೦ | ೬೨೯.೬೫ |
| ೧೯೧೨ | ೮೪೫ | ಲಭ್ಯವಿಲ್ಲ | ೫೦೨.೧ | ೫೦೧.೬ | ೭೯೫.೭ | ಲಭ್ಯವಿಲ್ಲ | ೪೩೫.೯ | ೬೧೬.೦೬ |
| ೧೯೧೩ | ೭೪೧.೭ | ಲಭ್ಯವಿಲ್ಲ | ೫೯೦.೭ | ೭೨೦.೬ | ೩೬೨.೬ | ಲಭ್ಯವಿಲ್ಲ | ೬೩೭.೧ | ೬೧೦.೫೪ |
| ೧೯೧೪ | ೩೯೫.೧ | ೫೭೨.೭ | ೮೪೮.೮ | ೬೧೬.೫ | ೪೯೨.೩ | ೫೦೭.೫ | ೫೪೫.೩ | ೫೬೮.೩೧ |
| ೧೯೧೫ | ೬೬೨.೬ | ೬೬೯.೯ | ೬೮೫.೨ | ೭೮೨ | ೯೧೧.೩ | ೧೧೨೦.೪ | ೭೯೬.೧ | ೮೦೩.೯೩ |
| ೧೯೧೬ | ೧೧೦೪ | ೯೨೬.೫ | ೧೦೫೯.೧ | ೧೧೬೯ | ೯೬೮.೨ | ೧೨೮೭.೧ | ೧೦೭೪ | ೧೦೮೧.೧೩ |
| ೧೯೧೭ | ೯೭೬.೫ | ಲಭ್ಯವಿಲ್ಲ | ೮೯೯.೧ | ೭೪೯.೨ | ೮೩೧.೨ | ಲಭ್ಯವಿಲ್ಲ | ೬೯೮ | ೮೪೦.೮೦ |
| ೧೯೧೮ | ೬೬೪.೩ | ಲಭ್ಯವಿಲ್ಲ | ೫೮೪.೩ | ೫೪೮.೬ | ೭೨೩.೩ | ಲಭ್ಯವಿಲ್ಲ | ೫೧೭.೬ | ೬೦೭.೬೨ |
| ೧೯೧೯ | ೮೧೨.೮ | ೭೦೯.೭ | ೭೮೩.೯ | ೭೩೮.೪ | ೭೬೩.೪ | ೭೭೪ | ೬೯೪.೧ | ೭೫೨.೩೩ |
| ೧೯೨೦ | ೪೬೬.೧ | ೬೨೩.೫ | ೬೦೭ | ೬೭೨.೪ | ೫೪೧.೮ | ೫೧೬.೫ | ೫೮೩ | ೫೭೨.೬೧ |
| ೧೯೨೧ | ೪೬೭.೬ | ೬೩೩ | ೬೭೨.೮ | ೬೧೬.೩ | ೭೨೩.೬ | ಲಭ್ಯವಿಲ್ಲ | ೬೫೧.೭ | ೫೩೭.೮೬ |
| ೧೯೨೨ | ೬೭೪.೭ | ೭೭೬.೬ | ೫೯೦.೩ | ೮೩೨.೩ | ೭೦೩.೫ | ೬೭೧.೭ | ೫೭೬.೬ | ೬೮೯.೩೯ |
| ೧೯೨೩ | ೫೬೯.೫ | ೫೨೯.೮ | ೪೪೦.೮ | ೪೧೩.೧ | ೪೪೨.೪ | ೫೧೧.೫ | ೪೬೦.೨ | ೪೮೧.೦೪ |
| ೧೯೨೪ | ೮೯೩.೫ | ಲಭ್ಯವಿಲ್ಲ | ೪೬೨.೮ | ೬೧೪.೬ | ೭೪೮.೬ | ಲಭ್ಯವಿಲ್ಲ | ೭೬೨.೧ | ೬೯೬.೩೨ |
| ೧೯೨೫ | ೭೭೧.೪ | ಲಭ್ಯವಿಲ್ಲ | ೫೪೬.೩ | ೬೦೪.೪ | ೭೮೭.೯ | ೬೩೬.೭ | ೪೯೬.೩ | ೬೪೦.೫೦ |
| ೧೯೨೬ | ೬೪೪ | ಲಭ್ಯವಿಲ್ಲ | ೪೯೬.೬ | ೬೮೨.೭ | ೭೨೨.೭ | ಲಭ್ಯವಿಲ್ಲ | ೬೩೫.೬ | ೬೩೬.೩೨ |
| ೧೯೨೭ | ೫೦೧.೫ | ೩೯೩.೧ | ೩೭೩.೪ | ೪೪೬.೨ | ೪೧೩.೯ | ೪೧೪.೭ | ೪೪೦.೫ | ೪೨೪.೭೬ |
| ೧೯೨೮ | ೬೩೯ | ಲಭ್ಯವಿಲ್ಲ | ೬೧೪.೭ | ೬೦೯.೬ | ೬೮೧.೬ | ಲಭ್ಯವಿಲ್ಲ | ೭೬೨.೨ | ೬೬೧.೪೨ |
| ೧೯೨೯ | ೭೩೨.೩ | ೫೭೮.೮ | ೭೭೮.೧ | ೭೪೬.೭ | ೮೦೬.೨ | ೪೮೯.೪ | ೬೫೭ | ೬೭೬.೯೩ |
| ೧೯೩೦ | ೮೫೭.೬ | ೭೬೨.೩ | ೮೭೭.೬ | ೭೯೦ | ೮೮೭.೬ | ೭೩೧.೩ | ೭೭೯.೩ | ೮೧೩.೬೭ |
| ೧೯೩೧ | ೮೨೧.೬ | ೮೫೬.೮ | ೫೬೭.೩ | ೬೩೦.೬ | ೬೫೨.೮ | ೬೬೦.೮ | ೫೪೯.೭ | ೬೭೭.೦೯ |
| ೧೯೩೨ | ೯೬೨.೮ | ೧೦೪೫ | ೭೭೭.೭ | ೮೫೪.೨ | ೮೬೮.೨ | ೮೬೯.೮ | ೮೨೩.೬ | ೮೮೫.೯೦ |
| ೧೯೩೩ | ೧೨೧೬.೪ | ೫೨೨.೨ | ೮೧೬.೪ | ೯೫೦.೪ | ೭೯೧.೨ | ೮೬೦.೯ | ೯೨೧.೯ | ೮೬೮.೪೯ |
| ೧೯೩೪ | ೬೧೮.೧ | ೬೯೦.೨ | ೫೧೦.೮ | ೫೪೮ | ೪೬೧ | ೪೯೯.೪ | ೫೩೫.೩ | ೫೫೧.೮೩ |
| ೧೯೩೫ | ೬೭೯.೨ | ೭೧೩.೬ | ೫೮೬.೭ | ೬೦೬ | ೪೭೪.೧ | ೪೯೨.೩ | ೪೮೪.೯ | ೫೭೬.೬೯ |
| ೧೯೩೬ | ೪೧೧.೨ | ೫೮೧.೪ | ೪೮೭.೪ | ೪೧೧.೮ | ೬೨೨.೨ | ೪೬೫.೧ | ೫೫೬.೪ | ೫೦೫.೦೭ |
| ೧೯೩೭ | ೫೯೧ | ೫೯೬.೬ | ೬೮೭.೫ | ೬೮೩.೬ | ೫೩೫.೯ | ೬೭೪.೬ | ೯೬೮.೫ | ೬೭೬.೮೧ |
| ೧೯೩೮ | ೫೭೮.೨ | ೭೯೬.೧ | ೫೨೧.೮ | ೫೨೬ | ೫೭೫.೯ | ೫೦೨.೧ | ೫೪೮.೬ | ೫೭೮.೩೯ |
| ೧೯೩೯ | ೫೮೪.೩ | ೮೨೬.೨ | ೬೨೫.೫ | ೬೮೯.೭ | ೬೬೯.೫ | ೮೬೨.೬ | ೭೩೭.೬ | ೭೧೩.೬೩ |
| ೧೯೪೦ | ೧೦೧೦.೭ | ೬೪೫.೭ | ೮೮೬.೬ | ೭೧೮.೩ | ೮೫೫.೯ | ೮೪೯.೩ | ೮೬೧.೪ | ೮೩೨.೫೬ |
| ೧೯೪೧ | ೫೯೪.೩ | ೮೦೧.೨ | ೬೪೪.೮ | ೬೦೯.೮ | ೫೯೦.೫ | ೬೬೯.೮ | ೬೭೨.೭ | ೬೫೪.೭೩ |
| ೧೯೪೨ | ೭೬೩.೭ | ೮೦೩.೭ | ೬೭೦.೪ | ೬೯೭.೫ | ೫೫೭.೭ | ೬೩೩.೩ | ೫೩೪.೫ | ೬೬೫.೮೩ |
| ೧೯೪೩ | ೬೯೦.೪ | ೭೬೯.೫ | ೬೮೫.೯ | ೭೨೭ | ೭೨೨.೪ | ೬೪೦.೬ | ೭೮೪.೬ | ೭೧೭.೨೦ |
| ೧೯೪೪ | ೯೫೫.೫ | ೪೮೩.೮ | ೬೯೬.೧ | ೯೫೭.೩ | ೬೧೧.೧ | ೬೮೩ | ೭೫೪.೭ | ೭೩೪.೫೦ |

| ೧ | ೨ | ೩ | ೪ | ೫ | ೬ | ೭ | ೮ | ೯ |
|---|---|---|---|---|---|---|---|---|
| ೧೯೪೫ | ೬೧೨.೨ | ೧೦೨೭.೫ | ೭೮೪.೨ | ೬೧೬.೮ | ೪೫೪.೧ | ೩೯೭.೮ | ೬೨೦.೧ | ೬೪೪.೬೭ |
| ೧೯೪೬ | ೭೭೭.೮ | ೮೪೯ | ೧೦೫೦.೧ | ೭೯೬.೪ | ೮೭೩.೮ | ೭೬೫.೨ | ೬೧೧.೭ | ೮೧೭.೭೧ |
| ೧೯೪೭ | ೬೮೦.೩ | ೫೮೧ | ೬೪೮.೫ | ೭೭೫ | ೬೨೦.೨ | ೫೫೧.೧ | ೭೦೫.೭ | ೬೫೧.೬೯ |
| ೧೯೪೮ | ೭೦೭.೬ | ೬೬೧.೮ | ೬೯೨.೯ | ೬೯೫.೭ | ೭೧೩.೪ | ೬೮೪.೨ | ೫೨೨.೩ | ೬೬೮.೨೭ |
| ೧೯೪೯ | ೬೪೩.೨ | ೫೩೬.೩ | ೭೭೪.೨ | ೫೬೦ | ೫೩೦.೮ | ೭೨೬.೭ | ೫೬೯.೮ | ೬೨೦.೧೪ |
| ೧೯೫೦ | ೭೭೧.೭ | ೮೪೧.೮ | ೬೨೨.೩ | ೬೧೭.೨ | ೪೨೭.೫ | ೪೧೫.೬ | ೫೨೬ | ೬೦೩.೧೬ |
| ೧೯೫೧ | ೮೨೦.೩ | ೭೫೫.೮ | ೯೫೭.೯ | ೬೪೩.೫ | ೭೮೮.೭ | ೮೫೫ | ೯೯೫.೩ | ೮೩೦.೯೩ |
| ೧೯೫೨ | ೫೩೯.೩ | ೧೦೦೭.೯ | ೫೮೪.೫ | ೯೦೬.೫ | ೭೫೮.೯ | ೫೧೬.೯ | ೭೯೩.೫ | ೭೨೯.೬೪ |
| ೧೯೫೩ | ೯೯೭ | ೯೬೪.೪ | ೯೪೬.೯ | ೯೪೬.೩ | ೧೨೧೭.೩ | ೭೪೫.೬ | ೬೦೬.೧ | ೯೧೭.೬೬ |
| ೧೯೫೪ | ೮೨೬.೧ | ೬೯೩.೫ | ೮೨೯.೭ | ೧೧೮೯ | ೯೭೨.೫ | ೮೮೦.೩ | ೬೧೨.೨ | ೮೫೭.೬೭ |
| ೧೯೫೫ | ೬೭೫.೪ | ೭೬೯.೧ | ೬೩೫.೪ | ೯೯೧.೬ | ೮೫೩.೧ | ೪೬೭.೭ | ೫೮೧.೬ | ೭೧೦.೫೬ |
| ೧೯೫೬ | ೬೧೮.೬ | ೬೬೦.೬ | ೮೪೯.೬ | ೧೧೧೮ | ೭೪೨.೧ | ೬೦೩ | ೬೯೦.೨ | ೭೫೪.೬೦ |
| ೧೯೫೭ | ೬೯೬.೭ | ೮೩೧.೫ | ೭೮೮.೧ | ೧೨೪೪ | ೬೭೨.೧ | ೬೬೪ | ೭೧೮ | ೮೦೨.೦೬ |
| ೧೯೫೮ | ೮೧೧.೨ | ೭೮೯.೯ | ೯೮೯.೫ | ೧೩೩೮ | ೭೫೪ | ೯೦೯.೯ | ೬೪೬ | ೮೯೧.೨೪ |
| ೧೯೫೯ | ೬೨೨.೭ | ೭೬೦.೨ | ೫೭೨.೯ | ೮೬೪.೫ | ೭೦೩.೯ | ೪೬೪.೪ | ೬೦೮.೧ | ೬೫೬.೬೭ |
| ೧೯೬೦ | ೫೮೬.೯ | ೬೬೨.೮ | ೫೮೩ | ೬೮೭.೭ | ೮೫೭.೪ | ೬೯೦.೬ | ೬೦೯.೯ | ೬೬೮.೩೩ |
| ೧೯೬೧ | ೭೫೫.೮ | ೫೫೦.೪ | ೭೦೪.೧ | ೧೧೮೯ | ೪೬೭.೯ | ೪೯೨.೯ | ೪೨೦.೬ | ೬೫೪.೪೦ |
| ೧೯೬೨ | ೮೨೭.೬ | ೬೫೦.೪ | ೮೩೦.೬ | ೧೧೫೩ | ೫೧೫..೪ | ೭೧೬.೮ | ೫೭೦.೫ | ೭೫೨.೦೭ |
| ೧೯೬೩ | ೭೨೮.೭ | ೮೮೪.೬ | ೩೮೫.೭ | ೯೫೦.೫ | ೫೩೨.೯ | ೫೩೭.೩ | ೫೨೫ | ೬೪೯.೨೪ |
| ೧೯೬೪ | ೧೦೬೯.೭ | ೪೩೦.೬ | ೬೩೭.೮ | ೧೫೪೧ | ೫೪೮.೭ | ೮೬೦.೫ | ೭೬೫.೬ | ೮೩೬.೩೧ |
| ೧೯೬೫ | ೩೪೪.೯ | ೮೮೨.೬ | ೪೩೪.೩ | ೩೫೩.೮ | ೨೮೪.೩ | ೨೮೬.೪ | ೨೬೦.೩ | ೪೦೬.೬೬ |
| ೧೯೬೬ | ೭೫೫.೨ | ೫೬೨.೮ | ೮೬೨.೯ | ೭೫೯.೧ | ೭೫೧.೭ | ೭೫೪.೧ | ೬೪೧.೩ | ೭೨೬.೭೩ |
| ೧೯೬೭ | ೪೧೦ | ೬೯೭.೮ | ೫೫೩.೯ | ೩೮೦.೪ | ೪೪೩.೬ | ೪೮೧.೬ | ೪೬೧.೫ | ೪೮೯.೮೩ |
| ೧೯೬೮ | ೭೨೬.೪ | ೪೬೨.೩ | ೬೬೪.೧ | ೬೮೮ | ೭೧೧.೩ | ೭೩೮ | ೬೨೯.೧ | ೬೫೯.೮೯ |
| ೧೯೬೯ | ೫೯೧.೨ | ೬೧೪.೧ | ೭೧೦.೧ | ೬೮೧.೮ | ೬೧೭.೬ | ೫೦೨.೭ | ೫೧೩.೭ | ೬೦೪.೪೬ |
| ೧೯೭೦ | ೬೬೮.೬ | ೯೫೬.೨ | ೬೯೨ | ೭೬೯ | ೬೨೭.೮ | ೬೬೨.೯ | ೫೫೦.೧ | ೭೦೩.೮೦ |
| ೧೯೭೧ | ೫೫೯ | ೧೦೭೦.೩ | ೧೦೨೬ | ೮೨೫.೯ | ೫೨೯ | ೭೭೩.೫ | ೭೬೦.೮ | ೭೯೨.೦೭ |
| ೧೯೭೨ | ೯೩೯.೯ | ೬೯೭.೫ | ೯೪೧ | ೮೦೧.೬ | ೭೬೬ | ೮೨೭.೬ | ೭೧೭.೮ | ೮೧೩.೦೬ |
| ೧೯೭೩ | ೫೨೭.೯ | ೫೯೬.೩ | ೭೦೨.೫ | ೫೬೫.೯ | ೭೬೪.೩ | ೮೯೬.೬ | ೩೬೩.೯ | ೬೩೧.೦೬ |
| ೧೯೭೪ | ೪೧೮.೭ | ೯೪೪.೨ | ೫೨೬.೮ | ೬೮೭.೭ | ೮೬೩.೭ | ೫೩೭.೭ | ೬೨೪.೬ | ೬೫೭.೬೩ |
| ೧೯೭೫ | ೮೫೬.೬ | ೩೮೭.೨ | ೧೧೧೯.೪ | ೭೪೮.೮ | ೯೧೭.೩ | ೭೬೨.೩ | ೬೨೫.೪ | ೭೭೩.೮೬ |
| ೧೯೭೬ | ೪೬೭.೯ | ೭೭೨.೩ | ೩೯೯.೭ | ೩೮೦.೮ | ೪೯೫.೫ | ೩೭೧.೪ | ೩೮೨.೩ | ೪೬೭.೧೩ |
| ೧೯೭೭ | ೧೧೮೭.೧ | ೯೯೬.೮ | ೯೧೨.೯ | ೯೨೯.೫ | ೧೩೨೪.೫ | ೧೦೬೯.೮ | ೭೬೬.೮ | ೧೦೨೬.೭೭ |
| ೧೯೭೮ | ೭೫೭.೫ | ೮೯೩.೫ | ೮೯೯ | ೮೧೭.೩ | ೮೪೪.೫ | ೮೨೦.೬ | ೬೦೨.೬ | ೮೦೫.೦೦ |
| ೧೯೭೯ | ೭೪೨ | ೬೪೬.೯ | ೮೨೭.೭ | ೮೨೦.೫ | ೯೮೪.೫ | ೬೦೧.೧ | ೯೯೯.೨ | ೮೦೩.೧೩ |
| ೧೯೮೦ | ೭೪೯.೫ | ೮೪೬.೯ | ೫೫೪.೩ | ೬೭೭.೨ | ೫೬೪.೮ | ೪೦೮.೧ | ೬೫೮.೬ | ೬೩೭.೦೬ |
| ೧೯೮೧ | ೯೪೯.೭ | ೪೦೯.೭ | ೭೭೬ | ೭೭೭.೫ | ೭೨೨.೮ | ೮೮೪.೨ | ೮೧೨.೯ | ೭೬೧.೮೩ |
| ೧೯೮೨ | ೬೦೦.೬ | ೭೩೭ | ೪೭೩.೫ | ೫೫೫ | ೪೭೮ | ೩೫೮.೬ | ೩೨೯ | ೫೦೪.೫೩ |

| ೧ | ೨ | ೩ | ೪ | ೫ | ೬ | ೭ | ೮ | ೯ |
|---|---|---|---|---|---|---|---|---|
| ೧೯೮೩ | ೭೨೬.೨ | ೬೩೦.೫ | ೮೩೯.೪ | ೭೧೧.೭ | ೯೩೮.೪ | ೭೩೦.೭ | ೬೬೬.೫ | ೭೪೯.೦೬ |
| ೧೯೮೪ | ೯೬೧.೮ | ೫೮೧.೩ | ೪೧೮ | ೪೫೦.೭ | ೯೮೭.೬ | ೫೦೧.೨ | ೭೦೭.೩ | ೬೫೮.೨೭ |
| ೧೯೮೫ | ೪೬೬.೮ | ೯೪೧.೬ | ೫೫೮.೭ | ೩೮೨.೧ | ೬೫೯.೬ | ೩೫೩.೭ | ೪೨೨.೫ | ೫೪೦.೭೧ |
| ೧೯೮೬ | ೯೭೧.೩ | ೭೭೦.೨ | ೧೧೯೯.೮ | ೬೨೪.೮ | ೮೦೧.೯ | ೭೦೨.೨ | ೭೫೭.೩ | ೮೩೨.೫೦ |
| ೧೯೮೭ | ೮೭೦.೧ | ೭೬೨ | ೧೨೧೬.೨ | ೮೨೬.೫ | ೧೦೦೬ | ೮೬೨.೪ | ೬೪೦.೭ | ೮೮೩.೪೧ |
| ೧೯೮೮ | ೮೪೪.೧ | ೭೮೬.೯ | ೭೧೬ | ೭೫೫.೫ | ೯೭೩.೧ | ೭೯೦.೯ | ೬೭೫.೫ | ೭೯೧.೭೧ |
| ೧೯೮೯ | ೬೮೪.೫ | ೩೮೮.೮ | ೭೩೩ | ೬೪೫.೬ | ೯೧೧.೭ | ೪೭೧.೧ | ೬೬೧.೧ | ೬೪೨.೨೬ |
| ೧೯೯೦ | ೪೩೮.೧ | ೧೦೭೩.೮ | ೩೬೩.೪ | ೩೦೨.೩ | ೫೨೧.೧ | ೩೪೬ | ೩೪೯ | ೪೮೪.೮೧ |
| ೧೯೯೧ | ೧೦೨೭.೭ | ೭೯೫ | ೭೯೩.೬ | ೮೭೪ | ೯೨೪.೨ | ೯೭೨.೪ | ೮೪೧.೮ | ೮೮೯.೮೧ |
| ೧೯೯೨ | ೭೦೮.೭ | ೮೧೧.೯ | ೫೭೮.೮ | ೬೨೬.೯ | ೬೨೭.೪ | ೬೦೪.೩ | ೪೯೮ | ೬೩೬.೫೭ |
| ೧೯೯೩ | ೬೦೨.೨ | ೬೬೬.೭ | ೬೭೦.೩ | ೬೩೯.೨ | ಲಭ್ಯವಿಲ್ಲ | ೧೧೭೦.೭ | ೭೫೧ | ೭೫೦.೦೨ |
| ೧೯೯೪ | ೭೫೪.೯ | ೭೪೯.೮ | ೫೫೨.೫ | ೬೭೧.೩ | ೬೩೧ | ೭೯೨ | ೭೬೪ | ೭೦೨.೨೧ |
| ೧೯೯೫ | ೭೮೫.೪ | ೯೪೨.೫ | ೫೧೮.೯ | ೬೫೨.೫ | ೬೯೯.೨ | ೫೮೪.೬ | ೮೨೬.೮ | ೭೧೫.೭೦ |
| ೧೯೯೬ | ೯೧೪.೯ | ೭೯೬.೮ | ೭೫೨.೭ | ೯೩೭.೯ | ೧೦೩೮.೭ | ೭೮೮ | ೮೫೯.೨ | ೮೬೯.೭೪ |
| ೧೯೯೭ | ೫೦೮.೧ | ೮೮೮.೫ | ೫೭೬.೨ | ೯೦೨.೯ | ೮೨೦.೫ | ೬೯೦.೬ | ೫೮೨.೯ | ೭೦೯.೯೬ |
| ೧೯೯೮ | ೮೬೪ | ೮೧೭.೮ | ೬೨೫.೮ | ೬೮೮.೮ | ೯೫೦ | ೬೯೨ | ೪೯೬.೩ | ೭೩೩.೫೩ |
| ೧೯೯೯ | ೧೦೨೧.೬ | ೧೦೬೭.೪ | ೫೪೧.೬ | ೮೩೮.೧ | ೧೦೧೭ | ೧೦೨೦ | ೮೧೮.೬ | ೯೦೩.೪೭ |

ಆಧಾರ : ಬರ ಪರಿಹಾರ ಉಸ್ತುವಾರಿ ಕೋಶ.

## ಕೋಷ್ಟಕ ೧.೧೨ ಮಳೆಮಾಪನ ಕೇಂದ್ರವಾರು ವಾರ್ಷಿಕ ಮಳೆಯ ವಿವರಗಳು ಮಿ.ಮೀ ಗಳಲ್ಲಿ – ೨೦೦೧

| ಕ್ರಮ ಸಂಖ್ಯೆ | ಮಳೆಮಾಪನ ಕೇಂದ್ರ | ಚಳಿಗಾಲ ಜನವರಿ–ಫೆಬ್ರವರಿ | ಬೇಸಿಗೆ ಕಾಲ ಮಾರ್ಚ್–ಮೇ | ನೈಋತ್ಯ ಮಾರುತ ಜೂನ್–ಸೆಪ್ಟೆಂಬರ್ | ಈಶಾನ್ಯ ಮಾರುತ ಅಕ್ಟೋಬರ್–ಡಿಸೆಂಬರ್ | ವಾರ್ಷಿಕ ಜನವರಿ–ಡಿಸೆಂಬರ್ |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| | **೧. ಕೃಷ್ಣರಾಜಪೇಟೆ ತಾಲೂಕು** | | | | | |
| ಅ | ಅಕ್ಕಿಹೆಬ್ಬಾಳ | ೦ | ೧೭೫ | ೩೪೭ | ೧೮೫ | ೭೦೭ |
| ಆ | ಕೃಷ್ಣರಾಜಪೇಟೆ | ೦ | ೧೧೦ | ೪೩೯ | ೧೯೨ | ೭೪೧ |
| ಇ | ಕಿಕ್ಕೇರಿ | ೦ | ೧೩೧ | ೩೩೨ | ೨೫೩ | ೭೧೬ |
| ಈ | ಸಂತೇಬಾಚಹಳ್ಳಿ | ೦ | ೧೨೪ | ೪೬೬ | ೧೭೬ | ೭೬೬ |
| ಉ | ಶೀಳುನೆರೆ | ೦ | ೧೬೧ | ೪೧೪ | ೧೬೯ | ೭೪೪ |
| | **೨ ಮದ್ದೂರು ತಾಲೂಕು** | | | | | |
| ಅ | ಕೊಪ್ಪ | ೦ | ೮೧ | ೩೩೯ | ೪೮೭ | ೯೦೭ |
| ಆ | ಕೌಡ್ಲೆ | ೦ | ೨೧೭ | ೩೪೯ | ೪೨೩ | ೯೮೯ |
| ಇ | ಮದ್ದೂರು | ೦ | ೧೫೯ | ೪೧೨ | ೨೫೩ | ೮೨೪ |
| ಈ | ಕೆಸ್ತೂರು | ೦ | ೬೦ | ೩೪೪ | ೨೧೫ | ೬೧೯ |
| | **೩ ಮಳವಳ್ಳಿ ತಾಲೂಕು** | | | | | |
| ಅ | ಹಲಗೂರು | ೦ | ೦ | ೪೫೩ | ೨೬೯ | ೭೨೨ |
| ಆ | ಮಳವಳ್ಳಿ | ೦ | ೧೩೧ | ೨೪೨ | ೧೯೪ | ೫೬೭ |
| ಇ | ವಿ.ಸಿ.ಫಾರಂ ಕೃ.ಸಂ.ಕೇಂದ್ರ | ೦ | ೧೩೦ | ೩೧೬ | ೨೮೫ | ೭೩೧ |

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| | | | **೪ ಮಂಡ್ಯ ತಾಲೂಕು** | | | |
| ಅ | ಬಸರಾಳು | ೦ | ೧೫೨ | ೨೭೯ | ೧೯೨ | ೬೨೩ |
| ಆ | ಲಿಂಗರಾಜ ಛತ್ರ | ೦ | ೨೨೧ | ೨೦೯ | ೩೬೮ | ೭೯೮ |
| ಇ | ಮಂಡ್ಯ | ೧ | ೧೬೪ | ೧೭೨ | ೩೯೬ | ೭೩೩ |
| ಈ | ಕೊತ್ತತ್ತಿ | ೦ | ೫ | ೧೬೪ | ೨೪೪ | ೪೧೩ |
| | | | **೫ ನಾಗಮಂಗಲ ತಾಲೂಕು** | | | |
| ಅ | ಬೆಳ್ಳೂರು | ೦ | ೦ | ೩೧೧ | ೧೭೬ | ೪೮೭ |
| ಆ | ಬಿಂಡಿಗನವಿಲೆ | ೦ | ೫೩ | ೩೬೮ | ೧೨೯ | ೫೫೦ |
| ಇ | ದೇವಲಾಪುರ | ೦ | ೨೨ | ೧೪೫ | ೧೮೭ | ೩೫೪ |
| ಈ | ಹೊಣಕೆರೆ | ೦ | ೧೨೮ | ೨೪೮ | ೧೪೦ | ೫೧೬ |
| ಉ | ನಾಗಮಂಗಲ | ೦ | ೧೮೨ | ೪೨೫ | ೧೯೫ | ೮೦೨ |
| | | | **೬ ಪಾಂಡವಪುರ ತಾಲೂಕು** | | | |
| ಅ | ಚಿನಕುರಳಿ | ೦ | ೦ | ೩೫೨ | ೧೭೯ | ೫೩೧ |
| ಆ | ಮೇಲುಕೋಟೆ | ೦ | ೨೦೪ | ೫೨೮ | ೧೯೭ | ೯೨೯ |
| ಇ | ಪಾಂಡವಪುರ | ೦ | ೧೩೯ | ೨೦೯ | ೨೬೪ | ೩೧೨ |
| | | | **೭ ಶ್ರೀರಂಗಪಟ್ಟಣ ತಾಲೂಕು** | | | |
| ಅ | ಕೃಷ್ಣರಾಜಸಾಗರ ಡ್ಯಾಂ | ೦ | ೧೮೭ | ೨೭೭ | ೧೯೧ | ೬೫೫ |
| ಆ | ಕೆ.ಆರ್.ಇ.ಎಸ್ | ೦ | ೧೯೫ | ೨೯೮ | ೨೨೦ | ೭೧೩ |
| ಇ | ಶ್ರೀರಂಗಪಟ್ಟಣ | ೦ | ೨೪೩ | ೧೯೩ | ೨೯೫ | ೭೩೨ |
| ಈ | ಅರಕೆರೆ | ೦ | ೨೮೮ | ೧೯೮ | ೩೩೦ | ೮೨೭ |

## ಕೋಷ್ಟಕ ೧.೧೩ ತಾಲೂಕುವಾರು ವಾಸ್ತವಿಕ ಮಳೆಯ ಪ್ರಮಾಣ (ಮಿ.ಮೀ) ೨೦೦೧

| | ಕೃಷ್ಣರಾಜ ಪೇಟೆ | ಮದ್ದೂರು | ಮಳವಳ್ಳಿ | ಮಂಡ್ಯ | ನಾಗಮಂಗಲ | ಪಾಂಡವಪುರ | ಶ್ರೀರಂಗಪಟ್ಟಣ | ಜಿಲ್ಲೆಯ (ಸರಾಸರಿ) |
|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ |
| ಜನವರಿ | ೦ | ೦ | ೦ | ೦ | ೦ | ೦ | ೦ | ೦ |
| ಫೆಬ್ರವರಿ | ೦ | ೦ | ೦ | ೦ | ೦ | ೦ | ೩ | ೦ |
| ಮಾರ್ಚಿ | ೦ | ೭ | ೦ | ೧ | ೦ | ೦ | ೦ | ೧ |
| ಏಪ್ರಿಲ್ | ೧೦೪ | ೯೯ | ೬೬ | ೯೯ | ೬೬ | ೭೮ | ೧೨೬ | ೯೨ |
| ಮೇ | ೩೬ | ೨೪ | ೨೧ | ೩೬ | ೧೧ | ೩೭ | ೧೦೩ | ೩೮ |
| ಜೂನ್ | ೧೭ | ೧ | ೫ | ೧ | ೨೧ | ೧೦ | ೧೫ | ೧೧ |
| ಜುಲೈ | ೪೯ | ೪೧ | ೭೨ | ೪೫ | ೨೮ | ೬೪ | ೨೪ | ೪೪ |
| ಆಗಸ್ಟ್ | ೯೭ | ೯೬ | ೪೬ | ೫೬ | ೬೧ | ೭೯ | ೪೭ | ೭೦ |
| ಸೆಪ್ಟೆಂಬರ್ | ೨೩೭ | ೨೨೪ | ೨೧೫ | ೧೦೫ | ೧೮೯ | ೨೧೦ | ೧೫೫ | ೧೯೧ |
| ಅಕ್ಟೋಬರ್ | ೯೪ | ೨೯೦ | ೧೭೮ | ೨೧೮ | ೯೬ | ೧೧೬ | ೧೪೮ | ೧೫೯ |

| ೧ | ೨ | ೩ | ೪ | ೫ | ೬ | ೭ | ೮ | ೯ |
|---|---|---|---|---|---|---|---|---|
| ನವೆಂಬರ್ | ೧೦೦ | ೫೩ | ೬೭ | ೭೭ | ೬೭ | ೯೫ | ೧೦೪ | ೮೧ |
| ಡಿಸೆಂಬರ್ | ೨ | ೨ | ೫ | ೫ | ೨ | ೨ | ೮ | ೪ |
| ವಾರ್ಷಿಕ | ೭೩೬ | ೮೩೭ | ೬೭೫ | ೬೪೩ | ೫೪೧ | ೬೯೧ | ೭೩೩ | ೬೮೯ |
| ಚಳಿಗಾಲ (ಜನವರಿ–ಫೆಬ್ರವರಿ) | ೦ | ೦ | ೦ | ೦ | ೦ | ೦ | ೩ | ೦ |
| ಬೇಸಿಗೆ (ಮಾರ್ಚಿ–ಮೇ) | ೧೪೦ | ೧೨೯ | ೮೭ | ೧೩೬ | ೭೭ | ೧೧೪ | ೨೨೮ | ೧೩೧ |
| ನೈಋತ್ಯ ಮಾನ್ಸೂನ್ (ಜೂನ್–ಸೆಪ್ಟೆಂಬರ್) | ೪೦೦ | ೩೬೧ | ೩೩೭ | ೨೦೬ | ೨೯೯ | ೩೬೩ | ೨೪೨ | ೩೧೫ |
| ಈಶಾನ್ಯ ಮಾನ್ಸೂನ್ (ಅಕ್ಟೋಬರ್–ಡಿಸೆಂಬರ್) | ೧೯೫ | ೩೪೫ | ೨೪೯ | ೩೦೦ | ೧೬೫ | ೨೧೩ | ೨೫೯ | ೨೪೩ |
| ವಾರ್ಷಿಕ | ೭೩೫ | ೮೩೫ | ೬೭೩ | ೬೪೨ | ೫೪೧ | ೬೯೦ | ೭೩೨ | ೬೮೯ |

## ಪರಿಸರ

ಪ್ರತೀ ಜಿಲ್ಲೆಯಲ್ಲೂ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಕನಿಷ್ಟ ಶೇಕಡ ೩೩ ರಷ್ಟು ಅರಣ್ಯ ಪ್ರದೇಶವಿರಬೇಕೆಂದು ಅರಣ್ಯ ನೀತಿಯು ಸೂಚಿಸುತ್ತದೆ. ಆದರೆ ಮಂಡ್ಯ ಜಿಲ್ಲೆಯಲ್ಲಿ ಮೀಸಲು ಅರಣ್ಯವೂ ಸೇರಿ ಶೇಕಡ ಎಂಟರಷ್ಟು ಮಾತ್ರ ಅರಣ್ಯ ಪ್ರದೇಶವಿದೆ. ಪ್ರಾಕೃತಿಕ ಸಮತೋಲನ ಕಾಪಾಡುವುದಕ್ಕಾಗಿ ಹಾಗೂ ಕನಿಷ್ಟ ಪರಿಸರ ನಿಯಮಪಾಲನೆಗಾಗಿ ಜಿಲ್ಲೆಯಲ್ಲಿ ಗಿಡಮರಗಳ ಬೆಳವಣಿಗೆ ಅವಶ್ಯಕವಾಗಿದೆ. ಸಸ್ಯ ಸಂಪತ್ತಿನಂತೆ ಪ್ರಾಣಿ ಸಂಪತ್ತೂ ಸಹ ಪ್ರಮುಖವಾಗಿದೆ. ಜಿಲ್ಲೆಯಲ್ಲಿ ಪಶುಸಂಗೋಪನೆ ಈಗ ಪ್ರಮುಖ ಉದ್ಯಮವಾಗಿದೆ. ಸಗಣಿಯಿಂದ ಪಡೆದ ಗೋಬರ್ ಅನಿಲವನ್ನು ಅಡುಗೆ ಮಾಡಲು, ದೀಪ ಉರಿಸಲೂ ಉಪಯೋಗಿಸಬಹುದು. ರೈತನು ರಾಷ್ಟ್ರದ ಬೆನ್ನೆಲುಬಾದರೆ ಜಾನುವಾರುಗಳು ರೈತನಿಗೆ ಬೆನ್ನೆಲುಬಾಗಿವೆ. ಆದುದರಿಂದ ಅವುಗಳ ರಕ್ಷಣೆ ಎಲ್ಲರ ಆದ್ಯ ಕರ್ತವ್ಯವಾಗಿದೆ. ಹಳ್ಳಿಗಳಲ್ಲಿ ಹಿಂದೆ ಜಾನುವಾರುಗಳ ಮೇವಿಗಾಗಿ ಗೋಮಾಳಗಳನ್ನು ಮೀಸಲಿಡಲಾಗುತ್ತಿತ್ತು. ಆದರೆ ಇತ್ತೀಚೆಗೆ ವಿವಿಧ ಕಾರಣಗಳಿಂದಾಗಿ ಹಳ್ಳಿಗಳಲ್ಲಿ ಗೋಮಾಳಗಳು ಕಡಿಮೆಯಾಗಿವೆ. ಕೆಲವು ಕಡೆ ನಾಶವಾಗುತ್ತಿವೆ. ಅಳಿದುಳಿದ ಕಾಡುಮೇಡುಗಳನ್ನು ರೈತರು ಒತ್ತುವರಿ ಮಾಡಿಕೊಂಡಿರುವುದಾಗಿ ತಿಳಿದುಬರುತ್ತದೆ. ಜೊತೆಗೆ ಪಾರ್ಥೇನಿಯಂ ಕಳೆ ಎಲ್ಲಾ ಕಡೆಯೂ ಹರಡಿ ದನಕರುಗಳ ಮೇವಿಗೆ ಹುಲ್ಲೂ ಕೂಡ ಸಿಗದಂತಾಗುತ್ತಿದೆ. ಈ ಕಾರಣಗಳಿಂದ ಹಳ್ಳಿಗಳಲ್ಲಿ ಜಾನುವಾರುಗಳ ಮೇವಿನ ಸಮಸ್ಯೆ ತೀವ್ರವಾಗಿದೆ. ಅಲ್ಲದೆ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗೂ ತೊಂದರೆಯಾಗಿದೆ.

ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದ ಹಾಗೂ ಸಣ್ಣ ಪ್ರಮಾಣದ ಕಾರ್ಖಾನೆಗಳೂ ಸೇರಿ ೧೭೩ ಕಾರ್ಖಾನೆಗಳಿವೆ. ಅಲ್ಲದೆ ಹಲವಾರು ಸಣ್ಣ ಪುಟ್ಟ ಕಾರ್ಖಾನೆಗಳು ಅಣಬೆಗಳಂತೆ ಹುಟ್ಟಿಕೊಂಡು ಕೃಷಿ ಪ್ರದೇಶವನ್ನು ಆವರಿಸುತ್ತಿವೆ. ಮಂಡ್ಯ ನಗರದಲ್ಲಿ ಕಬ್ಬಿನ ಕಾರ್ಖಾನೆ ಮತ್ತು ಅಸಿಟೇಟ್ ಕಾರ್ಖಾನೆಗಳಿವೆ. ಅವುಗಳಿಂದ ಹೊರಬರುವ ವಿಷವಸ್ತುಗಳು ಅಲ್ಲಿನ ಗಾಳಿ ಮತ್ತು ನೀರನ್ನು ಮಲಿನಗೊಳಿಸುತ್ತಿವೆ. ಕಬ್ಬು ಅರೆಯುವ ಸಮಯದಲ್ಲಿ ಕಬ್ಬಿನ ಕಾರ್ಖಾನೆಯ ಚಿಮಣಿಗಳು ದಟ್ಟವಾಗಿ ಉಗುಳುವ ಹೊಗೆಯ ಮೂಲಕ ಇಂಗಾಲದ ಸೂಕ್ಷ್ಮಕಣಗಳು ಗಾಳಿಗೆ

ಸೇರಿ ನಗರದ ಕಟ್ಟಡಗಳ ಹಾಗೂ ನಿವಾಸಗಳ ಒಳಗೂ, ಹೊರಗೂ ಮತ್ತು ಛಾವಣಿಯ ಮೇಲೂ ಶೇಖರಣೆಯಾಗುತ್ತಿವೆ. ಈ ಇಂಗಾಲದ ಕಣಗಳು ಗಾಳಿಯ ಮೂಲಕ ಬಂದು ಜನರ ಶ್ವಾಸಕೋಶಗಳನ್ನು ಸೇರುವುದರಿಂದ ಬ್ರಾಂಕೈಟಿಸ್ ಮತ್ತು ಅಸ್ತಮಾ ರೋಗಗಳಿಗೆ ಕಾರಣವಾಗಿವೆ. ಅಲ್ಲದೆ ಅಸಿಟೇಟ್ ಕಾರ್ಖಾನೆಯಿಂದ ಸೋರಿ ಹೊರಬರುತ್ತಿರುವ ಅಸಿಟೇಟ್ ಆಮ್ಲದ ಹಬೆ ಕಟು ವಾಸನೆಯುಳ್ಳದ್ದಾಗಿದ್ದು, ಆರೋಗ್ಯಕ್ಕೆ ಮಾರಕವಾಗಿದೆ. ಇದರಿಂದ ಕಣ್ಣುಬೇನೆ, ಗಂಟಲು ಉರಿ ಮತ್ತು ಬ್ರಾಂಕೈಟಿಸ್ ಮುಂತಾದ ರೋಗಗಳು ಬರುವ ಸಾಧ್ಯತೆ ಇದೆ. ಸಕ್ಕರೆ ಮತ್ತು ಅಸಿಟೇಟ್ ಕಾರ್ಖಾನೆಗಳಿಂದ ಬರುವ ವಿಷಪೂರಿತ ಹಾಗೂ ಕಪ್ಪು ಬಣ್ಣಕ್ಕೆ ತಿರುಗಿದ ನೀರು ಹೆಬ್ಬಳ್ಳದ ಉದ್ದಕ್ಕೂ ಹರಿದು ಕೊನೆಗೆ ಸೂಳೆಕೆರೆಯನ್ನು ಸೇರುತ್ತದೆ. ಕುಡಿಯುವುದಕ್ಕೆ, ಸ್ನಾನಕ್ಕೆ, ಮತ್ತು ಕೃಷಿಗೆ ಈ ನೀರನ್ನು ಉಪಯೋಗಿಸುವುದರಿಂದ ಜನರಿಗೆ ಕರುಳಿನ ಬೇನೆ, ಚರ್ಮ ರೋಗ ಮುಂತಾದ ರೋಗಗಳು ಕಾಣಿಸಿಕೊಂಡಿವೆ ಎಂದು ತಿಳಿದು ಬಂದಿದೆ. ಜೊತೆಗೆ ಆ ಕೆರೆಯ ಮೀನುಗಳನ್ನು ತಿನ್ನುವುದರಿಂದಲೂ, ಆ ಪ್ರದೇಶಗಳಲ್ಲಿ ಬೆಳೆಯುವ ಆಹಾರ ಪದಾರ್ಥಗಳನ್ನು ಉಪಯೋಗಿಸುವುದರಿಂದಲೂ ಹಾಗೂ ಅಲ್ಲಿ ಬೆಳೆದ ಮೇವನ್ನು ತಿನ್ನುವ ಹಸು, ಎಮ್ಮೆಗಳ ಹಾಲಿನ ಮೂಲಕವೂ ವಿಷವಸ್ತುಗಳು ಜನರ ಶರೀರವನ್ನು ಸೇರಿ ನಾನಾ ರೋಗಗಳನ್ನು ತರುವ ಸಂಭವವಿದೆ. ಬೆಳಗೊಳದ ಗೊಬ್ಬರ ಹಾಗೂ ಕಾಗದ ಕಾರ್ಖಾನೆಗಳಿಂದ ಕಾವೇರಿ ನದಿಗೆ ಬಂದು ಸೇರುವ ಕಲ್ಮಷ ನೀರು, ನದಿ ನೀರನ್ನು ಮಲಿನಗೊಳಿಸಿದೆ. ಇಂತಹ ನೀರನ್ನು ಕುಡಿಯುವ ಮತ್ತು ಅಲ್ಲಿ ಸ್ನಾನ ಮಾಡುವ ಜನರಿಗೆ ರೋಗರುಜಿನಗಳು ಕಾಣಿಸಿಕೊಳ್ಳುತ್ತಿವೆ ಎಂದು ವರದಿಯಾಗಿದೆ. ಆದರೆ ಇತ್ತೀಚೆಗೆ ಕಾಗದ ಕಾರ್ಖಾನೆಯ ನೀರನ್ನು ಪರಿಷ್ಕರಿಸಿ ಬಿಡುತ್ತಿರುವುದರಿಂದ ನೀರಿನ ಮಲಿನತೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತಿದೆ. ಕಾಳಮುದ್ದನದೊಡ್ಡಿ (ಭಾರತೀನಗರ) ಮತ್ತು ಪಾಂಡವಪುರ ಸಕ್ಕರೆ ಕಾರ್ಖಾನೆಗಳಿಂದಲೂ ಆ ಪ್ರದೇಶಗಳ ಗಾಳಿ ಮತ್ತು ನೀರಿನ ಗುಣಮಟ್ಟ ಕೆಟ್ಟಿದೆ. ಅಲ್ಲಿನ ಗಾಳಿ ತುಂಬಾ ದುರ್ವಾಸನೆಯಿಂದ ಕೂಡಿದ್ದು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿದೆಯೆಂದು ತಿಳಿದುಬಂದಿದೆ.

ಮಂಡ್ಯ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ವಾಹನಗಳಿಂದ ಹೊರಬರುವ ಹೊಗೆಯಲ್ಲಿರುವ ಇಂಗಾಲದ ಡೈ ಅಕ್ಸೈಡ್, ಇಂಗಾಲದ ಮಾನಾಕ್ಸೈಡ್ ಮುಂತಾದ ವಿಷಾನಿಲಗಳು ಅಧಿಕ ಪ್ರಮಾಣದಲ್ಲಿ ವಾತಾವರಣಕ್ಕೆ ಪ್ರತಿದಿನವೂ ಸೇರುತ್ತಿರುವುದರಿಂದ ಮಲಿನತೆ ಹೆಚ್ಚುತ್ತಿದೆ. ಅಸಮರ್ಪಕವಾದ ಒಳಚರಂಡಿ ವ್ಯವಸ್ಥೆಯಿಂದ ನಗರದ ಚರಂಡಿ ನೀರು ಕೆಲವೆಡೆ ಹೆಬ್ಬಳ್ಳವನ್ನು ಸೇರಿ ಮಲಿನತೆಯನ್ನು ಹೆಚ್ಚಿಸುತ್ತಿದೆ. ಜನಜುಂಗುಳಿ ಹೆಚ್ಚಾಗುತ್ತಿದ್ದರೂ ವ್ಯವಸ್ಥಿತ ಶೌಚಾಲಯ ವ್ಯವಸ್ಥೆ ಇಲ್ಲದಿರುವುದರಿಂದ ನಗರ ಪರಿಸರ ಮತ್ತಷ್ಟು ಹದಗೆಡುತ್ತಿದೆ. ಇತರೆಡೆಗಳಿಂದ ನಗರಕ್ಕೆ ಬಂದು ನೆಲೆಸುವವರು ಹೆಚ್ಚುತ್ತಿರುವುದರಿಂದ ಕೊಳಗೇರಿಗಳೂ ಹೆಚ್ಚುತ್ತಿವೆ.

ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳಾದ ಮೇಲುಕೋಟೆ, ಕೆರೆತೊಣ್ಣೂರು, ಮುತ್ತತ್ತಿ, ಶಿವಸಮುದ್ರ, ಪಶ್ಚಿಮವಾಹಿನಿ, ನಿಮಿಷಾಂಬ ದೇವಸ್ಥಾನ, ದರಿಯಾದೌಲತ್, ಬಲಮುರಿ, ರಂಗನತಿಟ್ಟು ಮುಂತಾದೆಡೆಗಳಿಗೆ ಬರುವ ಪ್ರವಾಸಿಗರು, ಬಳಸಿ, ಬಿಸಾಡುವ ಪ್ಲಾಸ್ಟಿಕ್ ಮತ್ತು ಇತರೇ ತ್ಯಾಜ್ಯ ವಸ್ತುಗಳಿಂದಾಗಿ, ಪರಿಸರಕ್ಕೆ ಧಕ್ಕೆ ಒದಗಿ''ದೆ. ಮೇಲ್ಕಂಡ ಸ್ಥಳಗಳು ಚಲನಚಿತ್ರಗಳ ಚಿತ್ರೀಕರಣಗಳಿಗೆ ಸೂಕ್ತವಾಗಿರುವುದರಿಂದ, ಇಲ್ಲಿಗೆ ಬರುವ ಚಿತ್ರೀಕರಣ ತಂಡಗಳು ಆಯಾ ಸ್ಥಳದ ಐತಿಹಾಸಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನರಿತು, ಅವನ್ನು ಕಾಪಾಡುವ ಅವಶ್ಯಕತೆ ಇದೆ. ಹಾಗೆಯೇ ಶಿಂಷಾ ಹಾಗೂ ಕಾವೇರಿ ನದೀ ಪಾತ್ರಗಳಲ್ಲಿ ಮರಳು ಸಾಗಾಣಿಕೆಯನ್ನು ನಿಷೇಧಿಸಿ ಕಾನೂನುಬಾಹಿರವೆಂದು ಘೋಷಿಸಿದ್ದರೂ ಹಲವೆಡೆ ಇನ್ನೂ ಸರ್ಕಾರದ ಗಮನಕ್ಕೆ ಬಾರದೆ ನಡೆಯುವ ಮರಳು ಸಾಗಾಣಿಕೆಗೆ ತಡೆ ಹಾಕಬೇಕಿದೆ.